ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ನವೆಂಬರ್ 25 ಮಂಗಳವಾರ 2025

ಸಂಪುಟ: 46 | ಸಂಚಿಕೆ: 217 | ಪುಟಗಳು: 12+IV

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಮಂಗಳವಾರ 25 ನವೆಂಬರ್ 2025

ನಕ್ಕರೆ ಅದೇ ಸ್ವರ್ಗ

ಡಿಜೆ : ಸರ್, ಎಷ್ಟು ಹೊತ್ ತನಕ ಡ್ಯಾನ್ಸ್

ಮಾಲೀಕ : 6–7 ಪೆಗ್ ಹಾಕೋ ತನಕ ಮಾತ್ರ.

ಡಿಜೆ : ಆಮೇಲೆ

ಮಾಲೀಕ : ಕುಡುಕ್ ನನ್ಮಕ್ಕಳು, ಜನರೇಟರ್ ಸೌಂಡಿಗೇ ಕುಣೀತಾವೆ.

ಮೈಸೂರು ಮಿತ್ರ

ಮಂಗಳವಾರ, 25 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ತಿದ್ದದೆ ತೀಡದೆ ಅಂದ ಕಾಣದು ಗೊಂಬೆ.
ಬಿತ್ತದೆ ಕೆತ್ತದೆ ಬೆಳೆಯ ಬೆಳೆಯದು ಭೂಮಿ.
ನಿಂದನೆಗೆ ನೋವಿಗೆ ಅಳುಕಿದರೆ ರೂಪಗೊಳ್ಳದು ಬದುಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗದವ ಅರಸನಲ್ಲ, ಹಟ ಹಿಡಿದವ ಸಾಮ್ರಾಟನಲ್ಲ.

ನಿಮ್ಮ ಪತ್ರಗಳು

ಅಂದು 20–20 ಆಯಿತು. ಈಗ 30–30!

ಮಾನ್ಯರೆ,

ರಾಜ್ಯದಲ್ಲಿ ಹಿಂದೆ ಜೆಡಿಎಸ್ – ಬಿಜೆಪಿ ನೇತೃತ್ವದ 20–20 ಸರ್ಕಾರ ರಚನೆಯಾಗಿತ್ತು. ಆದರೆ ಒಪ್ಪಂದದಂತೆ 20 ತಿಂಗಳ ನಂತರ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿಯವರು ಅಧಿಕಾರ ಹಸ್ತಾಂತರ ಮಾಡದೆ ವಚನ ಭ್ರಷ್ಟರಾದರು. ಇದು ಇತಿಹಾಸ.

ಇದೀಗ ಅಧಿಕಾರದಲ್ಲಿರುವ ಸರ್ಕಾರ ಕೂಡ 30–30 ಸರ್ಕಾರವಾಗಿದೆ. ಹಿಂದಿನ 20–20 ಸರ್ಕಾರದ ಒಪ್ಪಂದ ಎರಡು ಬೇರೆ ಬೇರೆ ರಾಜಕೀಯ ಪಕ್ಷಗಳ ನಡುವೆ ಏರ್ಪಟ್ಟಿದ್ದ ಒಪ್ಪಂದವಾಗಿದ್ದರೆ, ಈಗಿನ 30–30 ಸರ್ಕಾರದ ಒಪ್ಪಂದ ಒಂದೇ ರಾಜಕೀಯ ಪಕ್ಷದ ಇಬ್ಬರು ಮುಖಂಡರ ನಡುವೆ, ಅದೇ ಪಕ್ಷದ ಹೈಕಮಾಂಡ್ ನೇತೃತ್ವದಲ್ಲಿ ಆಗಿದ್ದ ಒಪ್ಪಂದವಾಗಿದೆ.

ಆದರೆ ಅಂದು 20ರ ಅವಧಿ ನಂತರ ಆಗಿನ ಮುಖ್ಯಮಂತ್ರಿಯಾಗಿದ್ದವರು ಹೇಗೆ ಅಧಿಕಾರ ಹಸ್ತಾಂತರ ಮಾಡಲು ನಿರಾಕರಿಸಿದರೋ ಅದೇ ರೀತಿ ಈಗಿನ 30 ರ ಅವಧಿ ಮುಗಿದ ನಂತರ ಅಧಿಕಾರ ಹಸ್ತಾಂತರಿಸಲು ಈಗಿನವರು ನಿರಾಕರಿಸುತ್ತಿದ್ದಾರೆ. ಅದು ಪುನರಾವರ್ತನೆಯಾಗುವಂತೆ ಕಾಣುತ್ತಿದೆ.

ಅಂದು ಹೈಕಮಾಂಡ್ ಮುಂದೆ 30–30 ಅವಧಿಗೆ ಒಪ್ಪಿದವರು. ಇಂದು ಮುಖ್ಯಮಂತ್ರಿಯಾಗಲು ಶಾಸಕರ ಬೆಂಬಲಬೇಕು. ಶಾಸಕಾಂಗ ಪಕ್ಷದ ಬೆಂಬಲಬೇಕು. ಎನ್ನುವ ನೆಪವನ್ನು ಮುಂದೆ ಮಾಡಿ ಅಧಿಕಾರ ಹಸ್ತಾಂತರಿಸಲು ಮೀನಾಮೇಷ ಎಣಿಸುತ್ತಾ ತಾವೇ ಮುಂದುವರಿಯುವುದಾಗಿ ದಾಳ ಉರುಳಿಸುತ್ತಿದ್ದಾರೆ. ಕಾಡಿನಲ್ಲಿದ್ದ ಹುಲಿ ಮನುಷ್ಯನ ರಕ್ತದ ರುಚಿ ಕಂಡ ನಂತರ ಮತ್ತೆ ಮತ್ತೆ ಮನುಷ್ಯರ ಮೇಲೆ ದಾಳಿ ಮಾಡುವ ಹುಲಿಯಂತೆ, ರಾಜಕಾರಣಿಗಳು ಕೂಡ ಒಂದು ಭಾರಿ ಅಧಿಕಾರದ ರುಚಿ ಕಂಡವರು ಮತ್ತೆ ಮತ್ತೆ ಅಧಿಕಾರಕ್ಕಾಗಿ ಹಪ–ಹಪಿಸುತ್ತಾರೆ. ಅದಕ್ಕೆ ಸಿದ್ದರಾಮಯ್ಯ, ಯಡಿಯೂರಪ್ಪ, ಕುಮಾರಸ್ವಾಮಿ ಯಾರೂ ಹೊರತಲ್ಲ.

ಕಾಂಗ್ರೆಸ್ ಪಕ್ಷದ ಹಿನ್ನಲೆಯನ್ನು ಗಮನಿಸಿದರೆ ಮುಖ್ಯಮಂತ್ರಿಯಾಗಲು ಶಾಸಕರ ಬಲ ಬೇಕೆ ಬೇಕು ಎಂದೇನಿಲ್ಲ. ಹಿಂದೆ ಮುಖ್ಯಮಂತ್ರಿಗಳಾಗಿದ್ದ, ಗುಂಡೂರಾವ್, ಬಂಗಾರಪ್ಪ, ವೀರಪ್ಪ ಮೊಯ್ಲಿ, ಧರ್ಮ ಸಿಂಗ್, ಇವರ್‍ಯಾರಿಗೂ ಶಾಸಕಾಂಗ ಪಕ್ಷದಲ್ಲಿ ಬಲ ಇರಲಿಲ್ಲ. ಹೈ ಕಮಾಂಡ್ ಬಲದಿಂದ ಮುಖ್ಯಮಂತ್ರಿಯಾದವರು. ಆ ನಂತರ ಸದನದಲ್ಲಿ ಹೈ ಕಮಾಂಡ್ ಆದೇಶದಂತೆ ಬಹುಮತ ಸಾಬೀತು ಪಡಿಸಿದವರು. ಹೀಗಿರುವಾಗ ಅಂದು 30–30 ಒಪ್ಪಂದಕ್ಕೆ ಒಪ್ಪಿ, ಈಗ ಅಧಿಕಾರ ಹಸ್ತಾಂತರ ಮಾಡಬೇಕಾದ ಸನ್ನಿವೇಶ ಎದುರಾದಾಗ, ಶಾಸಕರ ಬೆಂಬಲದ ಪ್ರಶ್ನೆ ಎತ್ತಿ ಅಧಿಕಾರ ಹಸ್ತಾಂತರಕ್ಕೆ ನಿರಾಕರಿಸುತ್ತಿರುವ ವಿದ್ಯಮಾನ ನಡೆಯುತ್ತಿದೆ. ಕಾಲ ಕೆಟ್ಟು ಹೋಯಿತು ಎಂದು ಹೇಳುತ್ತೇವೆ. ಆದರೆ ಕಾಲ ಎಂದೂ ಕೆಡುವುದಿಲ್ಲ. ನಾವು ಅಂತಹ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವುದು ವಾಸ್ತವ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಹನುಮ ಜಯಂತಿ ಗೊಂದಲ

ಮಾನ್ಯರೆ,

ತುಂಬಾ ಜನರಿಗೆ ಹನುಮ ಜಯಂತಿ ಆಚರಣೆ ಬಗ್ಗೆ ಗೊಂದಲಗಳು ಇದೆ. ಯಾವುದೇ ಜಯಂತಿ ಒಂದು ಸಂವತ್ಸರದಲ್ಲಿ ಎರಡು ಬಾರಿ ಬರುವುದಿಲ್ಲ. ಬರಲು ಸಾಧ್ಯವೂ ಇಲ್ಲ. ನಿಜವಾಗಿ ಹನುಮ ಜಯಂತಿ ಬರುವುದು ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ದಶಮಿ ತಿಥಿಯಂದು. ಇದು ಯಾವಾಗಲೂ ಬರುವುದು ಮೇ ತಿಂಗಳಲ್ಲಿ. ಈ ಸಮಯದಲ್ಲಿ ಹನುಮಂತನ ಉತ್ಸವಾದಿಗಳನ್ನು ಮಾಡಿ, ಓಕಳಿ ಆಡುವ ವಾಡಿಕೆ ಇದೆ. ಓಕಳಿ ಎಂದರೆ ನೀರಿಗೆ ಅರಿಶಿನ ಬೆರೆಸಿ ಆಂಜನೇಯನ ಉತ್ಸವದ ಜೊತೆ ಸಾಗುತ್ತಾ ಆ ನೀರನ್ನು ಒಬ್ಬರಿಗೊಬ್ಬರು ಎರಚುವುದು. ಇದಕ್ಕೊಂದು ವೈಜ್ಞಾನಿಕ ಹಿನ್ನಲೆಯೂ ಇದೆ. ಏನೆಂದರೆ ಮೇ ತಿಂಗಳು ಉರಿ ಬಿಸಿಲಿನ ಬೇಸಿಗೆ ಕಾಲ, ರೋಗನಿಗ್ರಹ (ಆಂಟಿಬಯಾಟಿಕ್) ಅಂಶವುಳ್ಳ ಅರಿಶಿನ ಬೆರೆಸಿದ ನೀರಿನಿಂದ ಶರೀರ ತೋಯುವುದರಿಂದ ಚರ್ಮ ರೋಗಗಳಿಂದ ರಕ್ಷಣೆ ದೊರೆಯಲಿ ಎಂಬುದು ಇದರ ಹಿನ್ನಲೆ. (ಇದು ಈಗಾಗಲೇ 22.5.2025 ಗುರುವಾರ ಆಗಿ ಹೋಗಿದೆ).

ಇನ್ನು ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ದ್ವಾದಶ ತಿಥಿಯಂದು ಬರುವುದು ಹನುಮದ್ವ್ರತ. ಕೆಲವರು ತಪ್ಪು ತಿಳುವಳಿಕೆಯಿಂದ ಇದನ್ನೇ ಹನುಮ ಜಯಂತಿ ಎಂದು ಆಚರಿಸುತ್ತಿದ್ದಾರೆ. ಇದು ಪಂಚಾಂಗದ ಸರಿಯಾದ ಅರಿವು ಇಲ್ಲದ ಮಂದಿಯಿಂದ ಆಗುತ್ತಿರುವ ತಪ್ಪು. ದಿನಾಂಕ 2.12.2025 ಮಂಗಳವಾರ ಹನುಮದ್ವ್ರತ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ, ಮೈಸೂರು.

ಸಾವಯವ ಕೃಷಿ ಪ್ರೋತ್ಸಾಹ ಧನ ಹೆಚ್ಚಿಸಿ

ಮಾನ್ಯರೆ,

ಕೇಂದ್ರ ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್ ರೈತರಿಗೆ ಎಕರೆಗೆ 4000 ಆರ್ಥಿಕ ನೆರವು ನೀಡುತ್ತಿರುವುದು ಶ್ಲಾಘನೀಯವಾದರೂ, ಸಾವಯವ ಕೃಷಿಯ ನೈಜ ವೆಚ್ಚಗಳನ್ನು ಪರಿಗಣಿಸಿದಾಗ ಇದು ತುಂಬಾ ಕಡಿಮೆ. ಜೈವಿಕ ಗೊಬ್ಬರ, ಜೀವಾಮೃತ ತಯಾರಿ, ಮಿಶ್ರ ಬೆಳೆ ಪದ್ಧತಿ, ಕಾಳಜಿ ಕಾರ್ಯಗಳು ಮತ್ತು ಪ್ರಾರಂಭಿಕ ವರ್ಷಗಳಲ್ಲಿ ಕಂಡುಬರುವ ಉತ್ಪಾದನಾ ಕುಸಿತವನ್ನು ನೋಡಿದರೆ, ಒಂದು ಎಕರೆ ಸಾವಯವ ಕೃಷಿಗೆ ಸರಾಸರಿ ಹತ್ತು ಸಾವಿರ ವೆಚ್ಚವಾಗುತ್ತದೆ. ಆದ್ದರಿಂದ ನೆರವನ್ನು ಕನಿಷ್ಠ 7,000 ರೂ.ಗೆ ಹೆಚ್ಚಿಸುವುದು ರೈತರ ಹಿತಕ್ಕಾಗಿ ಅತ್ಯವಶ್ಯಕ. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರವೂ ಪ್ರತ್ಯೇಕವಾಗಿ ಪ್ರೋತ್ಸಾಹಧನ ನೀಡುವುದು ಅತ್ಯಗತ್ಯ. ಕರ್ನಾಟಕದಲ್ಲಿ ಸಾವಯವ ಉತ್ಪನ್ನಗಳ ಬೇಡಿಕೆ ವರ್ಷಕ್ಕೆ 12–15% ಹೆಚ್ಚುತ್ತಿರುವಾಗ, ರೈತರಿಗೆ ಸರಿಯಾದ ಮಾರುಕಟ್ಟೆ, ಸಂಗ್ರಹಣೆ ಮತ್ತು ಪ್ರಮಾಣ ಸೌಲಭ್ಯಗಳು ಇನ್ನೂ ಪರ್ಯಾಯ ಮಟ್ಟಕ್ಕೆ ತಲುಪಿಲ್ಲ. ಪ್ರೋತ್ಸಾಹ ಧನದ ಕೊರತೆಯಿಂದ ಹಲವಾರು ರೈತರು ಸಾವಯವ ಕೃಷಿಯನ್ನು ಕಡೆಗಣಿಸುತ್ತಿರುವುದು ಆತಂಕಕಾರಿ. ರಾಜ್ಯ ಸರ್ಕಾರ ನೆರವು ನೀಡುವುದರಿಂದ ರೈತರಿಗೆ ನಷ್ಟದ ಭಯ ಕಡಿಮೆಯಾಗುತ್ತದೆ, ಸಾವಯವ ಉತ್ಪಾದನೆ ಪ್ರಮಾಣ ಹೆಚ್ಚುತ್ತದೆ ಮತ್ತು ಮಣ್ಣಿನ ಆರೋಗ್ಯ ಪರಿಸರ ರಕ್ಷಣೆಗೆ ದೊಡ್ಡ ಮಟ್ಟದಲ್ಲಿ ಸಹಕಾರಿಯಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡೂ ಸಂಯುಕ್ತವಾಗಿ ನೆರವನ್ನು ಹೆಚ್ಚಿಸಿ, ತಾಂತ್ರಿಕ ಮಾರ್ಗದರ್ಶನ, ಮಾರುಕಟ್ಟೆ ಸಂಪರ್ಕ ಮತ್ತು ಪ್ರಮಾಣ ಸೌಲಭ್ಯಗಳನ್ನು ಬಲಪಡಿಸಿದಾಗ ಮಾತ್ರ ಸಾವಯವ ಕೃಷಿ ರಾಜ್ಯದ ಕೃಷಿ ಕ್ಷೇತ್ರದಲ್ಲಿ ಶಾಶ್ವತ ಪರಿವರ್ತನೆ ತರಲು ಸಾಧ್ಯ.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ದೀಪ ಸಾಲು



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ಮನೋರಥ–ಗೆಲುವಿನಪಥ

ಯಾವತ್ತಿಗೂ ನಮ್ಮ ಕಾನ್ಫಿಡೆನ್ಸು ನಮ್ಮನ್ನು ಗೆಲ್ಲಿಸಬಲ್ಲುದು. ಅದಕ್ಕೆ ಹೊರಗಿನಿಂದ ಸಿಗುವ ಒಂದಷ್ಟು ಪ್ರೇರಣೆಗಳು, ಪ್ರಭಾವಗಳು ಅಡಿಗಲ್ಲಿನಂತೆ ನಿಂತು ಸಹಕರಿಸಬಹುದೇ ಹೊರತು self confidence ಅನ್ನೋದು ಮಾತ್ರ ಅವರವರ ಆಂತರ್ಯದಲ್ಲೇ ಚಿಗುರೊಡೆದ ಬೆಟ್ಟದ ಹೂ. ವಿಶ್ವದಲ್ಲೇ ಓಪನ್ ಟೆನ್ನಿಸ್‌ನಲ್ಲಿ ಪ್ರಖ್ಯಾತನಾದ ಥಾಮಸ್ ಎನ್ನುವ ಆಟಗಾರ ತುಂಬಾ ಹೆಸರುವಾಸಿಯಾಗಿದ್ದ. ಒಮ್ಮೆ ಆತ ದೊಡ್ಡದೊಂದು ಅಪಘಾತಕ್ಕೆ ಒಳಗಾಗಿ ಜೀವನ್ಮರಣದ ನಡುವೆ ಹೋರಾಟ ನಡೆಸಿದ್ದ. ಅಮೇರಿಕಾದ ಪ್ರಸಿದ್ಧ ವೈದ್ಯರ ತಂಡ ಆತನಿಗೆ ಶಸ್ತ್ರಚಿಕಿತ್ಸೆ ಮಾಡಿ ಆತನ ಜೀವ ಉಳಿಸಿತು. ಹಾಗೆ ಜೀವ ಉಳಿಸಿದ ವೈದ್ಯರ ತಂಡ ಆ ಕ್ಷಣಕ್ಕೆ ಮಾತಾಡಿಕೊಂಡ ಮಾತೇನು ಗೊತ್ತಾ? ಇವನು ವಿಶ್ವಕ್ಕೇ ದೊಡ್ಡ ಆಟಗಾರ. ಆದರೆ ಇನ್ನು ಮುಂದೆ ಈತ ಆಟ ಆಡುವುದಿರಲಿ ಸರಿಯಾಗಿ ನಿಂತುಕೊಳ್ಳಲೂ ಆಗುವುದಿಲ್ಲ! ಹೀಗೆ ಮಾತಾಡಿಕೊಂಡ ಆ ವೈದ್ಯರ ತಂಡದ ಮಾತು ಅರೆಬರೆ ಪ್ರಜ್ಞಾವಸ್ಥೆಯಲ್ಲಿ ಇದ್ದ ಆ ಕ್ರೀಡಾಪಟುವಿಗೆ ಕೇಳಿಸಿದೆ. ಆ ಮಾತುಗಳನ್ನು ಕೇಳಿ ಆತನ ಜಂಘಾಬಲವೇ ಉದುಗಿಹೋಗಿದೆ. ಅಲ್ಲಿಯವರೆಗೆ ತಾನೂ ಗಳಿಸಿದ ಹೆಸರು, ಕೀರ್ತಿ, ಯಶಸ್ಸುಗಳೆಲ್ಲಾ ತಾನು ಬದುಕಿರುವ ತನ್ನ ಜೀವಿತಾವಧಿಯಲ್ಲೇ ಮಣ್ಣು ಪಾಲಾದಂತೆ ಆತನಿಗೆ ಭಾಸವಾಗುತ್ತದೆ. ಸತತ ಆರು ವರ್ಷಗಳ ನಂತರ ಆತನ ದೇಹ ಆಟಕ್ಕೆ ಸ್ಪಂದಿಸದೇ ಮನಸ್ಸು ಮಾತ್ರ ಟೆನ್ನಿಸ್ ಕ್ರೀಡಾಂಗಣದ ತನ್ನ ಹೆಜ್ಜೆ ಗುರುತುಗಳನ್ನು ಕಣ್ಣಿನ ರೆಪ್ಪೆ ಬಡಿದಷ್ಟೇ ಸರಾಗವಾಗಿ ಅಚ್ಚೊತ್ತುತ್ತಿತ್ತು. ಕಣ್ಣೆಂಬ ಕನ್ನಡಿಯಲ್ಲಿ ಆತನ ಆಟವನ್ನು ಆತನಿಗೇ ತೋರಿಸಿ ನರನಾಡಿಗಳಲ್ಲಿ ರಕ್ತಸಂಚಾರದ ವೇಗವನ್ನು ಹೆಚ್ಚು ಮಾಡುತ್ತಿತ್ತು. ಯಾವ ಇನ್ಸ್ಪಿರೇಷನ್ನೂ ಇಲ್ಲದೆ ಅವನ ತೊಲೆಯಂಥಾ ದೇಹಕ್ಕೆ ತೋಳದಂತೆ ಮನಸ್ಸು ಮತ್ತೆ ಮೇಲೇಳುವಂತೆ ಕನ್ವಿನ್ಸ್ ಮಾಡುತ್ತಿತ್ತು ನೋಡಿ! ಇದೇ ನಾನು ಹೇಳಬೇಕೆಂದು ಹೊರಟ ಮಾತಿನ ಚಹರೆ. ಈ ಕನ್ವಿನ್ಸ್ ಮಾಡೋದು ಅಂದರೆ ಒಪ್ಪಿಸೋದು ಅಂತ ಅರ್ಥ. ಅವರವರ ಎದೆಯೊಳಗೆ ಈ ಕನ್ವಿನ್ಸಿಂಗ್ ಎನ್ನುವ ಕಂಪಾರ್ಟ್‌ಮೆಂಟು ಜಾಗೃತವಾಗಿ ಕೆಲಸ ಮಾಡದೇ ಹೋದರೆ ಅಂಥವರ ಬದುಕುಗಳಲ್ಲಿ ಯಶಸ್ಸು ಹುಟ್ಟುವುದಿಲ್ಲ. ಯಶಸ್ವೀ ವ್ಯಕ್ತಿ–ವ್ಯಕ್ತಿತ್ವಗಳ ಹಿನ್ನೆಲೆ–ಮುನ್ನೆಲೆಗಳನ್ನು ನೀವು ಗಮನಿಸಿ ನೋಡಿ! ಪ್ರತಿಯೊಂದು ಯಶಸ್ಸಿನ ಹಿಂದೆ ಒಂದು ಕನ್ವಿನ್ಸಿಂಗ್ ಆಟಿಟ್ಯೂಡ್ (convincing attitude) ಅನ್ನೋದು pass throw ಆಗಲೇಬೇಕು. ಥಾಮಸ್ ಮಸ್ಟರ್‌ಗೆ ಆಗಿದ್ದೂ ಇದೇನೆ!

ಆತ ನಿಶಕ್ತನಾಗಿದ್ದರೂ ಮನಸ್ಸು ಮಾತ್ರ ನಿತ್ರಾಣಗೊಂಡಿರಲಿಲ್ಲ. ಅದು ವೈದ್ಯರ ಮಾತನ್ನೂ ನಿರ್ಲಕ್ಷಿಸಿ ಆತನನ್ನು ಪದೇ ಪದೆ ಕನ್ವಿನ್ಸ್ ಮಾಡುತ್ತಲೇ ಇತ್ತು. ಅಂದರೆ ಆಟದ ಮೈದಾನದ ಕಡೆ ಹೊರಟು ನಿಲ್ಲುವಂತೆ ಅವನ ಕೈಗೆ ಟೆನ್ನಿಸ್ ಬ್ಯಾಟಿನ ಆಸೆ ತೋರಿಸುತ್ತಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಉದುಗಿಹೋಗಿದ್ದ ಮೈಯ್ಯ ಶಕ್ತಿಯನ್ನೆಲ್ಲಾ ಒಟ್ಟು ಮಾಡಿ ಆತ ಎದ್ದು ನಿಂತ. ಕಣ್ಣು ಮಂಜಾಯಿತು. ಆಕಾಶ ತಲೆಕೆಳಗಾದಂತೆ ಆಯಿತು. ಆತ ಕೇರ್ ಮಾಡಲಿಲ್ಲ. ಅನಾಯಾಸವಾಗಿ ಬಂದ ಆಯಾಸಕ್ಕೆ ಸೆಡ್ಡು ಹೊಡೆದ. ಭೂಮಿಯ ಮೇಲೆ ಕಾಲೂರಿದ, ನಡೆದ, ಓಡಿದ, ಗಟ್ಟಿಗೊಂಡ. ಆಟದ ದಿಕ್ಕಿಗೆ ಮುಪ್ಪುರಿಗೊಂಡ ಆರು ವರ್ಷಗಳ ಬಳಿಕ ಮತ್ತೆ ವಿಶ್ವಚಾಂಪಿಯನ್ ಆದ. ಓಪನ್ ಟೆನ್ನಿಸ್‌ನ ಕ್ರೀಡಾಲೋಕ ಅಚ್ಚರಿಗೊಂಡಿತು. ಅಮೇರಿಕಾದ ಪತ್ರಕರ್ತರು ಆತನ ಸಂದರ್ಶನ ನಡೆಸಿದರು. ಅವನ ಗೆಲುವಿನ ಗುಟ್ಟಿನ ಬಗ್ಗೆ ಕೇಳಿದರು. ಥಾಮಸ್ ಹೇಳಿದ ಮಾತು ಒಂದೇ. ಮನೋರಥ–ಗೆಲುವಿನ ಪಥ ಆತ ಆಟವಾಡುವುದಿರಲಿ ಎದ್ದು ನಿಲ್ಲಲ್ಲೂ ಆಗುವುದಿಲ್ಲ ಎಂದು ಅಮೇರಿಕಾ ವೈದ್ಯರುಗಳು ಕೊಟ್ಟ ಸರ್ಟಿಫಿಕೇಟನ್ನು ತೆಗೆದು ಪಕ್ಕಕ್ಕಿರಿಸಿದ. ವೈದ್ಯ ವಿಜ್ಞಾನಕ್ಕೇ ಸವಾಲಾಗುವಂತೆ ಅವನ ಮನಸ್ಸಿನ ಕನ್ವಿನ್ಸಿಂಗ್ ಮಾತುಗಳಿಗೆ ಆತನೇ ಮಾರುಹೋಗಿದ್ದ. ಅಂದರೆ ದೇಹದ ಅಂಗ ಊನತೆ ಯನ್ನೂ ಗೆಲ್ಲುವ ಆತ್ಮವಿಶ್ವಾಸದ ಕನ್ವಿನ್ಸಿಂಗ್ ಪ್ರವೃತ್ತಿಗೆ ಎಲ್ಲರ ಮನಸ್ಸಿನಲ್ಲೂ ಜಾಗವಿದೆ. ಆದರೆ ಅದು ನೈತಿಕವಾಗಿರಬೇಕು. ಛಲದ ಛಾತಿಯನ್ನು ಚಲಾಯಿಸುವ ಚಾಕಚಕ್ಯತೆಯ ಚಾಲಕನಂತೆ ನಮ್ಮನ್ನು ನಡೆಸಬೇಕು. ಆಗ ಅದರ ಒಪ್ಪಿಗೆಗೆ ಗೆಲುವಿನ ಮುದ್ರೆ ಬೀಳುತ್ತದೆ.

ಯಾಕೋ ಏನೋ ನರೇಂದ್ರನೆಂಬ ಬಟ್ಟಲುಕಂಗಳ ಹುಡುಗ ಸ್ವಾಮಿ ವಿವೇಕಾನಂದರಾಗಿ ಬದಲಾದ ಭಾರತದ ನಿತ್ಯನೂತನ ಕತೆಯೊಂದು ನನ್ನನ್ನು ಸದಾ ಕಾಡುತ್ತದೆ. ಜನವರಿ ಹನ್ನೆರಡು ಅವರು ಹುಟ್ಟಿದ ದಿನವೇ ಆದರೂ ಇಂದಿಗೂ ಭಾರತ ಸರ್ಕಾರ ಅವರ ಹೆಸರಿನಲ್ಲೇ ವರ್ಷಪೂರ್ತಿ ವಿಕಸಿತ ಭಾರತದ ಯುವ ಸ್ಪಂದನದ ಕಾರ್ಯಕ್ರಮಗಳನ್ನು ರೂಪಿಸಿದೆ. ವಿವೇಕಾನಂದರನ್ನೂ ಇಡೀ ಜಗತ್ತು ಸ್ವಾಮಿ ಎಂದು ವಿಶ್ವಾಸಪೂರ್ವಕವಾಗಿ ಕರೆದು ಗೌರವಿಸಿದ ಪರಂಪರೆ ನಮ್ಮ ಜೊತೆಗಿದೆಯಲ್ಲ ಅದಕ್ಕಿಂತ ನಮ್ಮ ತರುಣ ತಲೆಮಾರಿಗೆ ಮತ್ತಿನ್ನೇನು ಬೇಕು ಎನಿಸುವಷ್ಟು ಸ್ವಾಮಿ ವಿವೇಕಾನಂದರು

> “ಇವತ್ತು ವಿದ್ಯಾರ್ಥಿ ಯುವಜನತೆ ಎಡಪಂಥ ಬಲಪಂಥಗಳ ಬೆನ್ನಬಿದ್ದು ಸಾರಥಿಯಿಲ್ಲದ ಮನಕ್ಕೆ ಏನನ್ನೂ ಒಪ್ಪಿಸಲು ಹೊರಟಂತಿದೆ. ಆದರೆ ಅದೇನು ಎಂದು ಅವರಿಗೆ ಸ್ಪಷ್ಟವಾದಂತಿಲ್ಲ. ಸ್ವಾಮಿ ವಿವೇಕಾನಂದರು ಒಪ್ಪಿಸಿದ್ದು ಕಟ್ಟುವ ಕೆಲಸವನ್ನು ಕೆಡವುವ ಆವೇಶವನ್ನಲ್ಲ. ನಮ್ಮ ಯುವಕರಿಗೀಗ ಪಂಥಕ್ಕಿಂತ ಪಥ ಮುಖ್ಯ. ಮನಸ್ಸುಗಳನ್ನು ಒಪ್ಪಿಸಿ ಕಟ್ಟುವ ಕೆಲಸ ಅದು ಯಾವುದೇ ಇರಲಿ ಬೆಳಕಿನೆಡೆಗೆ ನಡೆಯಬೇಕಿದೆ.



ಭಾರತೀಯರ ಮನಸ್ಸಿಗೆ ಕನ್ವಿನ್ಸಿಂಗ್ ಆಗಿ ಹೋದರು, ಆದರೂ ಪರವಾಗಿಲ್ಲ ಕನ್ನಡ ರಾಜ್ಯೋತ್ಸವವನ್ನು ತಿಂಗಳು ಪೂರ್ತಿ ಮಾಡುವ ಹಾಗೆ ಸ್ವಾಮಿ ವಿವೇಕಾನಂದರನ್ನು ನೆನಪಿಸಿಕೊಳ್ಳೋಣ ವೆನ್ನಿಸಿದಾಗ ನನ್ನ ಕಣ್ಣಿಗೆ ಕಂಡದ್ದು ಅವರ ಕನ್ವಿನ್ಸಿಂಗ್ ಥಿಯರಿ. ಅಂದರೆ ಒಪ್ಪಿಸುವ ಗುಣ. ನಿಮಗೆ ಗೊತ್ತಿರಲಿ! Convince ಎಂದರೇನೆ ಅದೊಂದು ಬಗೆಯ confidence ಅಂದರೆ, ಒಪ್ಪಿಸುವ ಗೋಜಿಗೆ ಹೋಗಬೇಕಾದವನಿಗೆ ಮೊದಲು ಇರಬೇಕಾದದ್ದು ಕಾನ್ಫಿಡೆನ್ಸು. ಅದು ಯಾವುದರ ಮೇಲೆ ಮೊದಲು ತನ್ನ ಮೇಲೆ, ತನಗೇ ಕಾನ್ಫಿಡೆನ್ಸು ಇರದ ವ್ಯಕ್ತಿತ್ವ ಆತನ ಮನಸ್ಸಿನ ಕನ್ವಿನ್ಸ್ ಮಾಡಲು ಆಗುವುದಿಲ್ಲ. ಸ್ವಾಮಿ ವಿವೇಕಾನಂದರು ಮೊದಲು ಕನ್ವಿನ್ಸ್ ಮಾಡಿದ್ದು ತನ್ನ ತಂದೆಯಾದ ವಿಶ್ವನಾಥ ದತ್ತರನ್ನು. ಶ್ರೀಮಂತಿಕೆ, ಸ್ಥಾನಮಾನ, ಸಾಮಾಜಿಕ ಜನಜೀವನದಲ್ಲಿ ರಿಸ್ಕೇ ಇಲ್ಲದೆ ಸುಖವಾಗಿ ಬದುಕುವ ಜೀವನವನ್ನು ಸಜೆಸ್ಟ್ ಮಾಡಿದ ತಂದೆಗೆ ಬಾಲಕನಾಗಿದ್ದ ನರೇಂದ್ರ ಮೊದಲು ತನ್ನ ಮನೋ ಇಂಗಿತವನ್ನು ಒಪ್ಪಿಸುವಲ್ಲಿ ಸೋತ. ಆದರೆ ಆತ ತನ್ನ ಮೇಲಿದ್ದ ಕಾನ್ಫಿಡೆನ್ಸ್ ಎಂಬ ಆತ್ಮಬಲವನ್ನು ಕಳೆದು ಕೊಳ್ಳಲಿಲ್ಲ. ಓಪನ್ ಟೆನ್ನಿಸ್ ಆಟಗಾರ ಥಾಮಸ್ ಮಸ್ಟರ್ ವೈದ್ಯರ ಸರ್ಟಿಫಕೇಟನ್ನು ಪಕ್ಕಕ್ಕಿಟ್ಟು ತನ್ನ ಮನಸ್ಸು ಒಪ್ಪಿಸಿದಂತೆ ನಡೆದ. ಇಲ್ಲಿ ಸ್ವಾಮಿ ವಿವೇಕಾನಂದರು ಭರತಭೂಮಿಯ ಆಧ್ಯಾತ್ಮಿಕ ಪರಂಪರೆಗೆ ಇದ್ದ ಇಚ್ಛಾಶಕ್ತಿಯನ್ನು ವಿಸ್ತರಿಸುವ ಕಡೆ ಹೊರಟು ಹೋದರು. ಹಾಗೆ ಹೋದವರು ಆಧ್ಯಾತ್ಮಿಕ ಅವತಾರದಲ್ಲಿ ಅವರು ವಿಶ್ವಕ್ಕೆ ಅಡಗೂಲಜ್ಜಿಯ ಕತೆ ಹೇಳಲಿಲ್ಲ. ಶತಶತಮಾನಗಳು ಕಳೆದರೂ ಕಾಲಾಂತರದಲ್ಲೂ ತಾವು ಮತ್ತು ತಮ್ಮ ವಿಚಾರಧಾರೆಗಳು ಪ್ರಸ್ತುತ ಎಂಬಂತೆ ಜಗತ್ತನ್ನು ತಮ್ಮ ಚಿಂತನಾ ವಿನ್ಯಾಸಗಳಿಂದ ಒಪ್ಪಿಸತೊಡಗಿದರು. ಪಾಶ್ಚಿಮಾತ್ಯರು ಎಷ್ಟೆಲ್ಲಾ ವಿಜ್ಞಾನ ತಂತ್ರಜ್ಞಾನ, ಅನ್ವೇಷಣೆ, ಸಂಶೋಧನೆಗಳಿಂದ ಮುಂದುವರಿದಿದ್ದರೂ ತಮ್ಮ ತಮ್ಮ ಮನಸ್ಸಿನಲ್ಲಿ ಉಂಟಾಗುತ್ತಿದ್ದ ಕ್ಷೋಭೆ, ಒತ್ತಡ, ಮಾನಸಿಕ ಅಸಮತೋಲನ, ದ್ವಂದ್ವ, ಕಿರಿಕಿರಿ ಹೊಂದಾಣಿಕೆ ಯಾಗದ ವಿಶ್ವಾಸ, ಸ್ನೇಹ, ಪರಸ್ಪರ ಅಪನಂಬಿಕೆಗಳ ಜಾಗದಲ್ಲಿ, ಏಕಾಕೀತನ, ಪರಕೀಯತೆ, ಅಂತರ್ಮುಖಿತ್ವದಿಂದ ಆಚೆ ಬರಲು ಭಾರತೀಯರ ಪರಮವೇದದ ಸಾರ. ಆತ್ಮ ಆಧ್ಯಾತ್ಮಗಳ ಏಕಾಗ್ರತೆ ಮತ್ತು ಧ್ಯಾನಸ್ಥ ಮನಸ್ಥಿತಿಯ ವೈಚಾರಿಕ ಏಕಾಂತವನ್ನು ಬೋಧಿಸಿದರು. ಪಾಶ್ಚಿಮಾತ್ಯರ ಆ ಎಲ್ಲಾ ಧಾವಂತಗಳಿಗೆ ಆಧ್ಯಾತ್ಮಿಕ ಪರಂಪರೆಯಲ್ಲಿನ ಬೌದ್ಧಿಕ ಸ್ವರೂಪದಲ್ಲಿ ಉತ್ತರವಿದೆಯೆಂಬ ಕನ್ವಿನ್ಸಿಂಗ್‌ಗೆ ಒಳಪಡಿಸಿ ಒಪ್ಪಿಸಲು ಹೊರಟರು. ಹಾಗೆಯೇ ಭಾರತೀಯರ ಪರಮವೇದದ ಸಾರವೇ ಅಂತಿಮ. ನೀವೇ ಶ್ರೇಷ್ಠ ನೀವು ಹೇಳಿದ್ದೆಲ್ಲಾ ಸತ್ಯ, ನಿಮ್ಮ ಆತ್ಮೋದ್ಧಾರಕ್ಕಿಷ್ಟು ಸಾಕು ಮತ್ತಿನ್ನೇನು ಬೇಕು ಎಂದು ಹೇಳಿ ಭಾರತೀಯರ ಪರಂಪರೆಯನ್ನೇ ಹಾಡಿಹೊಗಳಿ ಅವರನ್ನು ಅಟ್ಟಕ್ಕೇರಿಸಲಿಲ್ಲ. ಬದಲಿಗೆ ನಿಮ್ಮ ಬಳಿಯಿರುವ ನೀತಿಜ್ಞಾನವನ್ನು ವಿಜ್ಞಾನದ ಜೊತೆಗೆ ಸೇರಿಸಿಕೊಳ್ಳಿ ಎಂದು ಭಾರತೀಯರನ್ನು ಒಪ್ಪಿಸತೊಡಗಿದರು. ಅವರ ಬಳಿ ವಿಜ್ಞಾನವಿದೆ. ವೇದವಿಲ್ಲ. ನಿಮ್ಮ ಬಳಿ ವೇದಸಾರವಿದೆ ವಿಜ್ಞಾನವಿಲ್ಲ. ಅವರ ವಿಜ್ಞಾನವನ್ನು ಸೇರಿಸಿಕೊಂಡರೆ ನಿಮ್ಮದು ವೇದವಿಜ್ಞಾನವಾಗಲಿ ಎಂದು ಪೂರ್ವ ಪಶ್ಚಿಮಗಳೆರಡನ್ನೂ ಕನ್ವಿನ್ಸಿಂಗ್ ಆಗಿ ಒಪ್ಪಿಸಿ ಬೆಸೆಯುವ ಪ್ರಯತ್ನ ಮಾಡಿದರು. ಕುಮಾರವ್ಯಾಸ ತನ್ನ ಕರ್ಣಾಟಕ ಭಾರತ ಕಥಾಮಂಜರಿಯನ್ನು ಬರೆಯುವಾಗ ಬರೆಯುವ ಷಟ್ಪದಿಯ ಸಾಲೊಂದು ಹೀಗಿದೆ.

ಇದು ಪರಮವೇದದ ಸಾರ
ಯೋಗೀಶ್ವರರ ತತ್ವ ವಿಚಾರ

ಈ ಮಾತಿನ ಹಿನ್ನೆಲೆಯಲ್ಲಿ ನಾವಿಲ್ಲಿ ಮಹಾಭಾರತದ ಕತೆಯನ್ನು ವಿಶ್ಲೇಷಿಸುವುದಿಲ್ಲ. ಭಾರತದ ನೆಲೆಯೊಂದನ್ನು ಉಲ್ಲೇಖಿಸುತ್ತೇನೆ. ಅಂದರೆ ಸ್ವಾಮಿ ವಿವೇಕಾನಂದರಂಥವರು ಮೈಮೇಲೆ ಕಾವಿ ಹಾಕಿಕೊಂಡಿದ್ದರೂ ಜಗತ್ತು ಅವರನ್ನು ವೀರಸನ್ಯಾಸಿ ಎಂದು ಕರೆದ ಕಾರಣವೇ ಇದು! ಅಂದರೆ ಜಗತ್ತನ್ನು ಕನ್ವಿನ್ಸ್ ಮಾಡಲಾಗದವರು ಕಣ್ಣಿನ ತುಂಬಾ ಕನಸು ಕಾಣಲಾರರು. ಉಕ್ಕಿನತೋಳಿನ ಬಿಸಿನೆತ್ತರಿನ ಯುವಕರೇ ಏಳಿ ಎದ್ದೇಳಿ ಗುರಿ ಮುಟ್ಟುವವರೆಗೆ ನಿಲ್ಲದಿರಿ! ಎಂದು ಯುವ ಸಮುದಾಯವನ್ನು ಒಪ್ಪಿಸಿದ ಸ್ವಾಮಿ ವಿವೇಕಾನಂದರ ಒಪ್ಪಿಸುವ ಗುಣ ಇವತ್ತು ಎಲ್ಲಾ ಕ್ಷೇತ್ರಗಳಿಗೂ ಒಪ್ಪಿತವಾದ ಕಾರಣ ಜಗತ್ತನ್ನು ಬೆಳಕಿನೆಡೆಗೆ ಕರೆದೊಯ್ಯಲು ಸಾಧ್ಯವಾಯಿತು. ರಾಷ್ಟ್ರಕವಿ ಕುವೆಂಪು ಅವರಂಥ ಮೇಧಾವಿಗಳೂ ಕೂಡ ವಿವೇಕಾನಂದರ ಒಪ್ಪಿಸುವ ಗುಣವನ್ನು ಮೆಚ್ಚಿಕೊಂಡಿದ್ದರು. ಇವತ್ತಿನ ಖಾವಿಧಾರಿಗಳು ತಮ್ಮವರೊಬ್ಬರನ್ನು ಮಂತ್ರಿ ಮಾಡಲು ಮುಖ್ಯಮಂತ್ರಿಗಳನ್ನು ಒಪ್ಪಿಸಹೋಗಿ ಪೇಚಿಗೆ ಸಿಕ್ಕಿಕೊಂಡ ದೃಶ್ಯಾವಳಿಗಳನ್ನು ನೋಡಿದವರಿಗೆ ಸ್ವಾಮಿ ವಿವೇಕಾನಂದರು ನಿನ್ನ ಬಾಳಿನ ಶಿಲ್ಪಿ ನೀನೆ ಎಂದು ಭರತಭೂಮಿಯ ನಾಗರಿಕರನ್ನು ಒಪ್ಪಿಸಿಬಿಟ್ಟರಲ್ಲ.

This life is a great chance
Seek for the highest aim at the highest
And you shall reach the highest

ಎಂದು ಕನ್ವಿನ್ಸ್ ಮಾಡಿದರಲ್ಲ. ಹಾಗಾಗಿ ಆ ಒಪ್ಪಿಸುವ ಗುಣ ಅಮೆರಿಕಾದ ಓಪನ್ ಟೆನ್ನಿಸ್ ಆಟಗಾರ ಥಾಮಸ್ ಮಸ್ಟರ್‌ರನ್ನು ಗೆಲ್ಲಿಸಿತು ಎಂದು ಹೇಳಲು ಹೊರಟೆ. ಇಂದಿಗೂ ಗಮನಿಸಿ ಜನತಂತ್ರ ವ್ಯವಸ್ಥೆಯಲ್ಲಿ ಯಾರು ತನ್ನ ವಿಚಾರಧಾರೆಗಳನ್ನು ದೇಶವಾಸಿಗಳಿಗೆ ಯಶಸ್ವಿಯಾಗಿ ಒಪ್ಪಿಸುತ್ತಾರೋ ಅವರು ನೇತಾರರಾಗುತ್ತಾರೆ. ಪ್ರಧಾನಮಂತ್ರಿ, ಮುಖ್ಯಮಂತ್ರಿಯಾಗುತ್ತಾರೆ, ಜನನಾಯಕರಾಗುತ್ತಾರೆ. ಅದೇ ದಾರ ಅದೇ ಸೂಜಿ. ಅದೇ ಹೊಲಿಗೆ ಮೆಷಿನನ್ನಿಟ್ಟುಕೊಂಡ ಟೇಲರ್‌ಗಳಲ್ಲಿ ಬಾಯೇ ಬಿಚ್ಚದೆ ಅವನು ಎಂಥದೇ ಕೆಲಸ ಮಾಡಿಕೊಟ್ಟರೂ ಜನ ಹೋಗುವುದಿಲ್ಲ. ಒಪ್ಪಿಸುವ ಗುಣವಿರುವವನ ಅಂಗಡಿಗೆ ಹೆಂಗಸರು ಮುಗಿಬೀಳುವಂತೆ ವ್ಯಾಪಾರ, ವ್ಯವಹಾರ, ಬೋಧನೆ, ಸಾಧನೆ, ಶೋಧನೆ ಎಲ್ಲದಕ್ಕೂ ಒಪ್ಪಿಸುವ ಗುಣವಿದ್ದವ ಗೆದ್ದ ಉದಾಹರಣೆಗಳಿವೆ. Again ಮೊದಲೇ ಹೇಳಿದಂತೆ ಅದು ನೈತಿಕವಾಗಿರಬೇಕು.

ಕನ್ನಡ ಚಿತ್ರರಂಗದಲ್ಲೊಂದು ಮಾತಿದೆ. ನೀನು ಇಲ್ಲಿ ಪರಿಗಣಿಸಲ್ಪಡಬೇಕಾದರೆ ತಮಿಳಿನವರೋ, ತೆಲುಗಿನವರೋ ನಿನ್ನನ್ನು ಗುರುತಿಸಿದ ಮೇಲೆ ನಮ್ಮವರು ನಿನಗೆ ಪರಾಕು ಹೇಳುತ್ತಾರೆ ಎನ್ನುವ ಮಾತು ಅಲ್ಲಲ್ಲಿ ಚಾಲ್ತಿಯಲ್ಲಿದೆ. ಹಾಗೆಯೇ ವಿವೇಕಾನಂದರು ಚಿಕಾಗೋ ಧರ್ಮಸಮ್ಮೇಳನದಲ್ಲಿ ಸೋದರ ಸೋದರಿಯರೆ ಎಂಬ ಈ ನೆಲದ ಅಸಲೀಯತ್ತನ್ನು ಉಚ್ಚರಿಸಿ ಮಾತಾಡಿಯಾದ ಮೇಲೆ, ಜಗತ್ತು ಗುರುತಿಸಿದ ಮೇಲೆಯೇ ಅವರು ವಿಶ್ವವಿಖ್ಯಾತರಾದದ್ದು. ಆದರೆ ಅವರ ಬೌದ್ಧಿಕ ತಿಳುವಳಿಕೆ ಭೌತಿಕ ಸನ್ಯಾಸದ ಆಧ್ಯಾತ್ಮದ ಅಮಲಿನಲ್ಲಿ ಅಳಿಸಿ ಹೋಗಲಿಲ್ಲ ಎಂಬುದೇ ವರ್ತಮಾನ. ಇವತ್ತು ವಿದ್ಯಾರ್ಥಿ ಯುವಜನತೆ ಎಡಪಂಥ ಬಲಪಂಥಗಳ ಬೆನ್ನಬಿದ್ದು ಸಾರಥಿಯಿಲ್ಲದ ಮನಕ್ಕೆ ಏನನ್ನೂ ಒಪ್ಪಿಸಲು ಹೊರಟಂತಿದೆ. ಆದರೆ ಅದೇನು ಎಂದು ಅವರಿಗೆ ಸ್ಪಷ್ಟವಾದಂತಿಲ್ಲ. ಸ್ವಾಮಿ ವಿವೇಕಾನಂದರು ಒಪ್ಪಿಸಿದ್ದು ಕಟ್ಟುವ ಕೆಲಸವನ್ನು ಕೆಡವುವ ಆವೇಶವನ್ನಲ್ಲ. ನಮ್ಮ ಯುವಕರಿಗೀಗ ಪಂಥಕ್ಕಿಂತ ಪಥ ಮುಖ್ಯ. ಮನಸ್ಸುಗಳನ್ನು ಒಪ್ಪಿಸಿ ಕಟ್ಟುವ ಕೆಲಸ ಅದು ಯಾವುದೇ ಇರಲಿ ಬೆಳಕಿನೆಡೆಗೆ ನಡೆಯಬೇಕಿದೆ. ನಮ್ಮನ್ನು ನಾವೇ ಒಪ್ಪಿಸಿಕೊಳ್ಳುವ ಕನ್ವಿನ್ಸ್ ಮಾಡಿಕೊಳ್ಳುವ ಮನೋಬಲ ಪ್ರತಿಪಾದಿಸಿದ ಸ್ವಾಮಿ ವಿವೇಕಾನಂದರು ಹುಟ್ಟಿದ ತಿಂಗಳಿದು. ಈ ತಿಂಗಳಿನ ಅಂಗಳದಲ್ಲಿ ತಿಳಿದು ಮಾತನಾಡುವ ಹಂಬಲವಿದ್ದವರು ಎಂಥದೇ ಕಷ್ಟಗಳಿದ್ದರೂ, ಎಷ್ಟೇ ಗೊಂದಲಗಳಿದ್ದರೂ, ಏನೇ ನಿಷ್ಠುರಗಳು ಬಂದರೂ, ನಮ್ಮನ್ನು ನಾವು ಕನ್ವಿನ್ಸ್ ಮಾಡಿಕೊಂಡು ಒಪ್ಪಿಸಿಕೊಂಡರೆ ನಮ್ಮ ಮನೋಪಥಕ್ಕೂ, ಭುಜಬಲಕ್ಕೂ ಹೊಂದಾಣಿಕೆಯಾಗಿ ವೇದ–ವಿಜ್ಞಾನಗಳು ಮೇಳವಿಸುತ್ತವೆ. ಸಮನ್ವಯ ಸಂಯೋಜನೆಗಳು ನಮ್ಮನ್ನು ಕಾಯುತ್ತವೆ. ಸಾಮರಸ್ಯವನ್ನು ಬಿಟ್ಟು ವಾದಕ್ಕಿಳಿದರೆ ವೇದವೇ ಬೇರೆ ವಿಜ್ಞಾನವೇ ಬೇರೆಯಾಗಿ ವಿವೇಕಾನಂದರ ಸಮನ್ವಯದ ದೃಷ್ಟಿಪಥ ಕಣ್ಮರೆಯಾಗುತ್ತದೆ. ಆಗ ಪಂಥಗಳು ಕಾಣಿಸುತ್ತವೆ. ಈಗ ಹೇಳಿ ನಮ್ಮ ಆಯ್ಕೆ ಪಂಥವೋ ಪಥವೋ ಕಾನ್ಫಿಡೆನ್ಸೋ ಕನ್ವಿನ್ಸಿಂಗೋ ದೃಷ್ಟಿಯಂತೆ ಸೃಷ್ಟಿ ಏನಂತೀರಿ.

ರಾಮಕೃಷ್ಣ ಆಶ್ರಮದ ‘ವಿವೇಕ ಸ್ಮಾರಕ’ ಉದ್ಘಾಟನೆಗೆ ನರೇಂದ್ರ ಮೋದಿಗೆ ಆಹ್ವಾನ



ಮೈಸೂರು, ನ.24(ಬಿಎಲ್‌ಯು)– ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಇನ್ನೇನು ಪೂರ್ಣಗೊಳ್ಳುವ ಹಂತದಲ್ಲಿರುವ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕದ ಉದ್ಘಾಟನೆಗೆ ಪ್ರಧಾನಿ ಮೋದಿ ಅವರನ್ನು ಆಹ್ವಾನಿಸಲಾಗಿದೆ.

ಮೈಸೂರಿನ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಅವರು ‘ಮೈಸೂರು ಮಿತ್ರ’ಗೆ ಈ ವಿಚಾರ ತಿಳಿಸಿದರು.

ವಿವೇಕ ಸ್ಮಾರಕ ಕಟ್ಟಡ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ಡಿಸೆಂಬರ್ ಅಥವಾ ಜನವರಿ ವೇಳೆಗೆ ಪೂರ್ಣಗೊಳ್ಳಲಿದೆ. ಇದರ ಉದ್ಘಾಟನೆಗೆ ಮೋದಿ ಅವರಿಗೆ ಆಹ್ವಾನ ನೀಡಲಾಗಿದೆ. ಅವರು ಉದ್ಘಾಟನೆಗೆ ನೀಡುವ ದಿನಾಂಕವನ್ನು ನಿರೀಕ್ಷಿಸುತ್ತಿದ್ದೇವೆ ಎಂದು ಹೇಳಿದರು.

ವಿವೇಕಾನಂದರು 1892 ರ ನವೆಂಬರ್ ತಿಂಗಳಿನಲ್ಲಿ ಮೈಸೂರಿಗೆ ಭೇಟಿ ನೀಡಿದ್ದರು. ಈಗ ನಿರ್ಮಾಣವಾಗುತ್ತಿರುವ ವಿವೇಕ ಸ್ಮಾರಕ ಸ್ಥಳದಲ್ಲಿ ವಿವೇಕಾನಂದರು ಸುಮಾರು 4 ವಾರಗಳ ಕಾಲ ವಾಸ್ತವ್ಯ ಹೂಡಿದ್ದರು. ಆ ಸಮಯದಲ್ಲಿ ಮೈಸೂರು ಮಹಾರಾಜರಾಗಿದ್ದ ಚಾಮರಾಜ ಒಡೆಯರ್ ಅವರನ್ನು ವಿವೇಕಾನಂದರು ಭೇಟಿ ಮಾಡಿದ್ದರು.

ಅಮೇರಿಕಾದ ಚಿಕಾಗೋದಲ್ಲಿ 1893ರ, ಸೆಪ್ಟೆಂಬರ್ 11ರಂದು ನಡೆದ ವಿಶ್ವ ಧರ್ಮ ಸಂಸತ್ತಿನಲ್ಲಿ ವಿವೇಕಾನಂದರು ಪಾಲ್ಗೊಳ್ಳಲು ಮೈಸೂರು ಸ್ಫೂರ್ತಿಯಾಯಿತು. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ವಿವೇಕಾನಂದರು ವಾಸ್ತವ್ಯ ಹೂಡಿರುವ ಸ್ಥಳದಲ್ಲಿ ‘ವಿವೇಕ ಸ್ಮಾರಕ’ ನಿರ್ಮಾಣ ಮಾಡಲಾಗುತ್ತಿದೆ. ಆಧ್ಯಾತ್ಮಿಕ ಹಾಗೂ ನೈತಿಕ ಪಾಠ ಪ್ರವಚನ ನಡೆಯುವ ವಿವೇಕ ಸ್ಮಾರಕದಲ್ಲಿ ಐಎಎಸ್, ಐಪಿಎಸ್, ಕೆಎಎಸ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಕೇಂದ್ರ ಕೂಡ ತೆರೆಯಲಾಗುತ್ತಿದೆ. ಅಲ್ಲದೆ ಯುವಕರ ಕೌಶಲ ಹೆಚ್ಚಿಸುವ ಹಲವು ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಆಧ್ಯಾತ್ಮಿಕ, ತಾತ್ವಿಕ ಚಟುವಟಿಕೆ, ಯೋಗ, ಸಂಗೀತ, ಲಲಿತಕಲೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಹಲವು ತರಗತಿಗಳು ನಡೆಯಲಿದ್ದು, ಭಾರತದ ಸಾಂಸ್ಕೃತಿಕ ಪರಂಪರೆಯ ಕಾರ್ಯಕ್ರಮಗಳು ರೂಪುಗೊಳ್ಳಲಿವೆ.



ಸ್ವಾಮಿ ವಿವೇಕಾನಂದರ ವಿಚಾರ, ಮೌಲ್ಯವನ್ನು ಪ್ರಚುರಪಡಿಸುವುದರ ಜೊತೆಗೆ ಛಾಯಾಚಿತ್ರ ಹೊಂದಿರುವ ಮ್ಯೂಸಿಯಂ ಕೂಡ ನಿರ್ಮಾಣ ಮಾಡಲಾಗುತ್ತಿದೆ. ವಿವೇಕಾನಂದರು ವಾಸ್ತವ್ಯ ಹೂಡಿದ್ದ ಇಂತಹ ಮಹತ್ವವಿರುವ ಸ್ಥಳದಲ್ಲಿ ಈಗ ವಿವೇಕ ಸ್ಮಾರಕ ನಿರ್ಮಾಣ ಮಾಡಲಾಗುತ್ತಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಘಾಟನೆ ಮಾಡಲಿದ್ದಾರೆ.

ಸುಬ್ರಹ್ಮಣ್ಯನಗರದಲ್ಲಿ ಕನ್ನಡ ರಾಜ್ಯೋತ್ಸವ



ಶ್ರೀ ಸುಬ್ರಹ್ಮಣ್ಯ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಬಡಾವಣೆಯ ಶ್ರೀ ಗಣೇಶ ದೇವಸ್ಥಾನದ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು,ನ.24–ಶ್ರೀ ಸುಬ್ರಹ್ಮಣ್ಯ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಡಾವಣೆಯ ಶ್ರೀ ಗಣೇಶ ದೇವಸ್ಥಾನದ ಆವರಣದಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಜಿ.ಟಿ.ದೇವೇಗೌಡ ನೆರವೇರಿಸಿದರು. ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಂಯೋಜನಾಧಿಕಾರಿ ಡಾ.ಅವರೆಕಾಡು ವಿಜಯಕುಮಾರ್ ವಿಶೇಷ ಉಪನ್ಯಾಸ ನೀಡಿದರು. ಮಹದೇವ್ ಹಾಗೂ ಜಿ.ಬಿ.ಎಸ್ ಸಿದ್ದೇಗೌಡ ಹಾಜರಿದ್ದರು. ಅಧ್ಯಕ್ಷತೆಯನ್ನು ಲೀರುಚಿ ಹೋಟೆಲ್ ಮಾಲೀಕರಾದ ಬಿ.ಮಂಜುನಾಥ್ ವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕಿ ಡಾ.ಸುಮಿತ್ರ ರಾಜಶೇಖರ್ ನಿರೂಪಣೆ ಮಾಡಿದರು. ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಬಡಾವಣೆಯ ನಿವಾಸಿಗಳು ಪಾಲ್ಗೊಂಡಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.24–ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ನ.25 ರಂದು 10ರಿಂದ ಸಂಜೆ 4 ಗಂಟೆಯವರೆಗೆ ಬೃಂದಾವನ ಒಂದನೇ ಹಂತ, ಬೃಂದಾವನ 2ನೇ ಹಂತ, ವಿ.ವಿ.ಮೊಹಲ್ಲಾ, ಗೋಕುಲಂ 3ನೇ ಹಂತ, ವಾಲ್ಮೀಕಿ ರಸ್ತೆ, ಒಂಟಿ ಕೊಪ್ಪಲು, ಪಿ.ಕೆ.ಟಿ.ಬಿ ಆಸ್ಪತ್ರೆ, ಟ್ರಾಮಾಕೇರ್, ಸೂಪರ್ ಸ್ಪೆಷಲಿಟಿ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 25 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 217 | ಪುಟಗಳು: 12+IV

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಡಿಕೆಶಿಗೆ 63 ಶಾಸಕರ ಬಲ!

ಬೆಂಗಳೂರು, ನ.24(ಕೆಎಂಶಿ)– ಪ್ರಭಾವಿ ಸಚಿವರೂ ಸೇರಿದಂತೆ 63 ಶಾಸಕರು ಸದ್ಯಕ್ಕೆ ಶಿವಕುಮಾರ್ ಬೆಂಬಲಕ್ಕೆ ಇದ್ದಾರೆಂದು ಹೇಳಲಾಗುತ್ತಿದೆ.

ಶಿವಕುಮಾರ್ ಬೆಂಬಲಕ್ಕೆ ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಕೇವಲ ಒಬ್ಬ ಶಾಸಕನ ಬಿಟ್ಟರೆ ಇಲ್ಲಿ ಹೆಚ್ಚಿನ ಬೆಂಬಲಿತರು ಇಲ್ಲ. ಉತ್ತರ ಕರ್ನಾಟಕ ಭಾಗದ ವೀರಶೈವ ಶಾಸಕರು ಉಪ ಮುಖ್ಯಮಂತ್ರಿ ಪರ ನಿಂತಿದ್ದಾರೆನ್ನಲಾಗುತ್ತಿದೆ.

ಈಗಾಗಲೇ ಬಹುತೇಕ ಸಚಿವರು ಮತ್ತು ಶಾಸಕರು ಗೌಪ್ಯವಾಗಿ ಶಿವಕುಮಾರ್ ಭೇಟಿ ಮಾಡಿ ಮಾತುಕತೆ ನಡೆಸಿರುವುದಲ್ಲದೆ, ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆನ್ನಲಾಗಿದೆ. ದೊಡ್ಡ ಪ್ರಮಾಣದಲ್ಲಿ ತಮಗೆ ಶಾಸಕರ ಬೆಂಬಲ ದೊರೆಯುತ್ತಿದ್ದಂತೆ, ಶಿವಕುಮಾರ್ ಬಲ ಪ್ರದರ್ಶನಕ್ಕೆ ತಂಡೋಪತಂಡವಾಗಿ ಬೆಂಬಲಿತ ಶಾಸಕರನ್ನು ದೆಹಲಿಯ ವರಿಷ್ಠರ ಭೇಟಿಗೆ ಕಳುಹಿಸುತ್ತಿದ್ದಾರೆ.

ಸಚಿವ ಚಲುವರಾಯಸ್ವಾಮಿ ನಾಯಕತ್ವದಲ್ಲಿ ಕಳೆದ ಗುರುವಾರ ಆಯ್ದ ಶಾಸಕರು ದೆಹಲಿಗೆ ತೆರಳಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿ ವರಿಷ್ಠರ ಸೂತ್ರದಂತೆ ಶಿವಕುಮಾರ್ ಅವರಿಗೆ ಅಧಿಕಾರ ಕೊಡಬೇಕೆಂದು ಮನವಿ ಮಾಡಿದ್ದರು.

ಇದೀಗ ಶರತ್ ಬಚ್ಚೇಗೌಡ ನಾಯಕತ್ವದಲ್ಲಿ 9 ಶಾಸಕರು ಭಾನುವಾರ ತಡರಾತ್ರಿ ದೆಹಲಿಗೆ ತೆರಳಿ, ಇಂದು ವರಿಷ್ಠರನ್ನು ಭೇಟಿ ಮಾಡಿ, ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿ ಎಂದು ಕೋರಿದ್ದಾರೆ ಬಚ್ಚೇಗೌಡ ಜೊತೆ ಶ್ರೀನಿವಾಸ ಮಾನೆ, ನಯನಾ ಮೋಟಮ್ಮ, ■ 10ನೇ ಪುಟಕ್ಕೆ

ಇಂದು ದೆಹಲಿಗೆ ಖರ್ಗೆ: ರಾಹುಲ್ ಗಾಂಧಿಗೆ ರಾಜ್ಯದ ಬೆಳವಣಿಗೆ ಮನವರಿಕೆ

ಬೆಂಗಳೂರು, ನ. 24– ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರದಲ್ಲಿ



ನಡೆಯುತ್ತಿರುವ ವಿದ್ಯಮಾನಗಳು ಕುತೂಹಲಕಾರಿ ಘಟ್ಟವನ್ನು ತಲುಪಿದೆ. ಕಳೆದ ಮೂರ್‍ನಾಲ್ಕು ದಿನಗಳಿಂದ ಬೆಂಗಳೂರಿನಲ್ಲಿ ಬೀಡು ಬಿಟ್ಟಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಾಳೆ (ಮಂಗಳವಾರ) ನವದೆಹಲಿಗೆ ತೆರಳಲಿದ್ದಾರೆ.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣಗಳು ಭೇಟಿಯಾಗಿ ತಮ್ಮಲ್ಲಿ ಮಂಡಿಸಿರುವ ವಾದವನ್ನು ತಮ್ಮ ನಾಯಕರಾದ ರಾಹುಲ್ ಗಾಂಧಿಯವರಿಗೆ ಮುಟ್ಟಿಸಲಿದ್ದಾರೆ. ತದನಂತರ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಹವಾಲುಗಳನ್ನು ಸ್ವೀಕರಿಸಿ, ರಾಜ್ಯ ನಾಯಕತ್ವ ಬಿಕ್ಕಟ್ಟಿಗೆ ಒಂದು ಪರಿಹಾರವನ್ನು ಕಂಡುಕೊಳ್ಳುವ ಸಾಧ್ಯತೆ ಇದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ತಂಡೋಪತಂಡ ದೆಹಲಿಗೆ ಹೋಗಿ ವರಿಷ್ಠರ ಮೇಲೆ ಒತ್ತಡ ತಂತ್ರ



ಬೆಂಗಳೂರಿನ ಸದಾಶಿವನಗರದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿವಾಸಕ್ಕೆ ಸೋಮವಾರ ಭೇಟಿ ನೀಡಿದ ನಾಗಸಾಧುಗಳು ಅವರಿಗೆ ಆಶೀರ್ವಾದ ಮಾಡಿದರು.

ಕೆ.ಸಿ. ವೇಣುಗೋಪಾಲ್ ದಿಢೀರ್ ಬೆಂಗಳೂರಿಗೆ ಭೇಟಿ; ಮುಖಂಡರೊಂದಿಗೆ ಮಹತ್ವದ ಚರ್ಚೆ

ಬೆಂಗಳೂರು, ನ. 24– ಅಧಿಕಾರ ಹಸ್ತಾಂತರ ವಿಚಾರ ದಿನೇ ದಿನೇ ಉಲ್ಬಣಗೊಳ್ಳುತ್ತಿರುವ ಹೊತ್ತಿನಲ್ಲಿ ರಾಹುಲ್ ಗಾಂಧಿ ರಾಜಕೀಯ ಕಾರ್ಯದರ್ಶಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಇಂದು ರಾತ್ರಿ ವಯನಾಡಿಗೆ ಹೋಗುವ ಮಾರ್ಗದಲ್ಲಿ ಬೆಂಗಳೂರಿಗೆ ಆಗಮಿಸಿದ್ದಾರೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರು, ವಿಮಾನ




ನಿಲ್ದಾಣದ ಬಳಿ ಇರುವ ಪಂಚತಾರಾ ಹೋಟೆಲ್‌ವೊಂದರಲ್ಲಿ ತಂಗಿದ್ದಾರೆ. ಈ ವೇಳೆ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ನಾಯಕತ್ವ ಬದಲಾವಣೆ ಸಂಬಂಧ ನಡೆಯುತ್ತಿರುವ ವಿದ್ಯಮಾನಗಳ ಕುರಿತು ಪ್ರಮುಖ ನಾಯಕರೊಟ್ಟಿಗೆ ಚರ್ಚೆ ನಡೆಸಿದ್ದಾರೆ. ಇಂದು ನವದೆಹಲಿಯಲ್ಲಿ ರಾಹುಲ್ ಗಾಂಧಿಯವರನ್ನು ಬಿ.ಕೆ. ಹರಿಪ್ರಸಾದ್ ಭೇಟಿಯಾದ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಆಗಿದೆ.

ಹೈಕಮಾಂಡ್ ತೀರ್ಮಾನವನ್ನ ನಾನು, ಡಿಸಿಎಂ ಒಪ್ಪಬೇಕು!

● ಸಿಎಂ ಸಿದ್ದರಾಮಯ್ಯ ಪುನರುಚ್ಚಾರ ● ನಮ್ಮದು ನುಡಿದಂತೆ ನಡೆದ ಸರ್ಕಾರ

ಬೆಂಗಳೂರು, ನ.24(ಕೆಎಂಶಿ)– ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ನಾನು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಪ್ಪಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಐದು ತಿಂಗಳ ಹಿಂದೆ ಹೈಕಮಾಂಡ್ ಭೇಟಿಯಾದಾಗ ಸಚಿವ ಸಂಪುಟ ಪುನರ್ ರಚನೆಗೆ ಸೂಚಿಸಿದ್ದರು. ಆದರೆ, ನಾನು ಆಡಳಿತಕ್ಕೆ ಎರಡೂವರೆ ವರ್ಷ ತುಂಬಿದ ನಂತರ ಮಾಡೋಣ ಎಂದಿದ್ದೆ, ಈಗ ಏನು ಸೂಚನೆ ನೀಡುತ್ತಾರೋ ಅದರಂತೆ ನಡೆಯುತ್ತೇನೆ ಎಂದರು.

ಗ್ಯಾರಂಟಿಗೆ ಲಕ್ಷ ಕೋಟಿಗೂ ಅಧಿಕ ಖರ್ಚು: ಗ್ಯಾರಂಟಿ ಯೋಜನೆಗಳಿಗೆ ಒಂದು ಲಕ್ಷ ಕೋಟಿ ರೂಗಳಿಗೂ ಹೆಚ್ಚು ಹಣ ವೆಚ್ಚ ಮಾಡಲಾಗಿದೆ. ನಮ್ಮದು ನುಡಿದಂತೆ ನಡೆದ ಸರ್ಕಾರ, ಖಜಾನೆ ಖಾಲಿಯಾಗಿದೆ ಎನ್ನುವ ಬಿಜೆಪಿಗೆ ಸುಳ್ಳು ಬಿಟ್ಟರೆ ಬೇರೇನೂ ಹೇಳಲು ಬರುವುದಿಲ್ಲ, ಸುಳ್ಳೇ ಅವರ ಮನೆ ದೇವರು, ಬಿಜೆಪಿ ಅಪ ಪ್ರಚಾರ ಮಾಡುತ್ತಿದೆ. ನಾವು ಅಧಿಕಾರ ದಲ್ಲಿ ಇರುವವರೆಗೂ ಯಾವುದೇ ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸಿಎಂ ಮಾತು ವೇದ ವಾಕ್ಯ: ಡಿಕೆಶಿ

ಬೆಂಗಳೂರು, ನ.24– ಹೈಕಮಾಂಡ್ ಹೇಳಿದ್ದನ್ನು ನಾನು, ಶಿವಕುಮಾರ್ ಸೇರಿದಂತೆ ಎಲ್ಲರೂ ಒಪ್ಪಬೇಕು ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಅವರು ಹೇಳಿದ ಮೇಲೆ ಅದೇ ನಮಗೆ ವೇದ ವಾಕ್ಯ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಅವರು ನಮ್ಮ ಪಕ್ಷಕ್ಕೆ ಆಸ್ತಿ. ಅವರು ಹೇಳಿದ ಮೇಲೆ ಮುಗಿಯಿತು ಎಂದರು. ಶಾಸಕರ ಖರೀದಿ ಹಾಗೂ ಕುದುರೆ ವ್ಯಾಪಾರ ಬಿಜೆಪಿ ಸಂಸ್ಕೃತಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ. ಶಿಡ್ಲಘಟ್ಟದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಸೋಮವಾರ ■ 10ನೇ ಪುಟಕ್ಕೆ

ಮಹಿಳೆಯರ ಕಬಡ್ಡಿ ವಿಶ್ವಕಪ್ ಭಾರತ ಚಾಂಪಿಯನ್



ಢಾಕಾ, ನ.24– ಚೈನೀಸ್ ತೈಪೆ ತಂಡವನ್ನು ಸೋಮವಾರ ನಡೆದ ಫೈನಲ್ ಪಂದ್ಯದಲ್ಲಿ 35–28 ಅಂಕಗಳ ಅಂತರದಿಂದ ರೋಚಕವಾಗಿ ಮಣಿಸಿರುವ ಭಾರತ ತಂಡವು ಪ್ರತಿಷ್ಠಿತ ಮಹಿಳೆಯರ ಕಬಡ್ಡಿ ವಿಶ್ವಕಪ್ ಟ್ರೋಫಿಯನ್ನು ಎತ್ತಿ ಹಿಡಿದಿದೆ. ಈ ಮೂಲಕ ಕಬಡ್ಡಿ ಕ್ರೀಡೆಯಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರಿಸಿದೆ.

ಇದೇ ಮೊದಲ ಬಾರಿ ಭಾರತದಿಂದ ಹೊರಗೆ ಬಾಂಗ್ಲಾದೇಶದ ಢಾಕಾದಲ್ಲಿ ಕಬಡ್ಡಿ ವಿಶ್ವಕಪ್ ಟೂರ್ನಿ ನಡೆದಿದೆ. 13 ವರ್ಷಗಳ ನಂತರ ಎರಡನೇ ಆವೃತ್ತಿಯ ಮಹಿಳೆಯರ ವಿಶ್ವಕಪ್ ಆಯೋಜಿಸಲಾಗಿದೆ. 2012ರಲ್ಲಿ ಬಿಹಾರದ ಪಾಟ್ನಾದಲ್ಲಿ ಕೊನೆಯ ಬಾರಿ ವಿಶ್ವಕಪ್ ಪಂದ್ಯಾವಳಿ ನಡೆದಿತ್ತು. 2012ರ ಮೊದಲ ಆವೃತ್ತಿಯ ವಿಶ್ವಕಪ್‌ನಲ್ಲಿ ಭಾರತ ತಂಡ ಚಾಂಪಿಯನ್ ಆಗಿತ್ತು. ಈ ಬಾರಿ ಬಾಂಗ್ಲಾದೇಶದ ಮೀರ್ಪುರದಲ್ಲಿ ನ.17ರಿಂದ 24ರ ತನಕ 2025ರ ಆವೃತ್ತಿಯ ವಿಶ್ವಕಪ್ ಟೂರ್ನಿ ಯಶಸ್ವಿಯಾಗಿ ನೆರವೇರಿದೆ. ■ 10ನೇ ಪುಟಕ್ಕೆ

ಇಂದು ಅಯೋಧ್ಯೆ ರಾಮ ಮಂದಿರದ ಶಿಖರದ ಮೇಲೆ ಹಾರಲಿದೆ ಕೇಸರಿ ಬಾವುಟ



ಅಯೋಧ್ಯೆ, ನ.24– ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನ.25 ರಂದು ಉತ್ತರ ಪ್ರದೇಶದ ಅಯೋಧ್ಯೆಯಲ್ಲಿರುವ ರಾಮ ಮಂದಿರಕ್ಕೆ ಭೇಟಿ ನೀಡಲಿದ್ದಾರೆ. ಈ ಭೇಟಿ ಮಾರ್ಗಶಿರ ಮಾಸದ ಶುಕ್ಲ ಪಕ್ಷದ ಪಂಚಮಿಯ ಹಿನ್ನೆಲೆಯಲ್ಲಿ ವಿಶೇಷವಾಗಿದೆ. ಇದು ಭಗವಾನ್ ರಾಮ ಮತ್ತು ಸೀತಾ ದೇವಿಯ ವಿವಾಹ ಪಂಚಮಿಯ ಅಭಿಜಿತ್ ಮುಹೂರ್ತದೊಂದಿಗೆ ಹೊಂದಿಕೆಯಾಗುತ್ತದೆ. ಈ ದಿನಾಂಕವು 17ನೇ ಶತಮಾನದಲ್ಲಿ 48 ಗಂಟೆಗಳ ಕಾಲ ಅಯೋಧ್ಯೆಯಲ್ಲಿ ಧ್ಯಾನ ಮಾಡಿದ ಒಂಬತ್ತನೇ ಸಿಖ್ ಗುರು ಗುರು ತೇಜ್ ಬಹದ್ದೂರ್ ಅವರ ಹುತಾತ್ಮ ದಿನವನ್ನು ಸಹ ಸೂಚಿಸುತ್ತದೆ. ಹೀಗಾಗಿ, ಆಧ್ಯಾತ್ಮಿಕವಾಗಿ ಈ ದಿನ ಬಹಳ ಮಹತ್ವವನ್ನು ಹೊಂದಿದೆ.


ನಾಳೆ ಬೆಳಿಗ್ಗೆ 10 ಗಂಟೆ ಸುಮಾರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಮಹರ್ಷಿ ವಶಿಷ್ಠ, ಮಹರ್ಷಿ ವಿಶ್ವಾಮಿತ್ರ, ಮಹರ್ಷಿ ಅಗಸ್ತ್ಯ, ಮಹರ್ಷಿ ವಾಲ್ಮೀಕಿ, ದೇವಿ ಅಹಲ್ಯ, ನಿಷಾದ್‌ರಾಜ್ ಗುಹಾ ಮತ್ತು ಮಾತಾ ಶಬರಿಗೆ ಸಮರ್ಪಿತವಾದ ದೇವಾಲಯಗಳನ್ನು ಹೊಂದಿರುವ ಸಪ್ತ ಮಂದಿರಕ್ಕೆ ಭೇಟಿ ನೀಡಲಿದ್ದಾರೆ. ಇದಾದ ನಂತರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಶೇಷಾವತಾರ ಮಂದಿರ ಮತ್ತು ಮಾತಾ ಅನ್ನಪೂರ್ಣ ಮಂದಿರಕ್ಕೆ ಭೇಟಿ ನೀಡಲಿದ್ದಾರೆ. ಪ್ರಧಾನಿ ಮೋದಿ ಅವರು ರಾಮ ದರ್ಬಾರ್ ಗರ್ಭಗೃಹ ಮತ್ತು ರಾಮ ಲಲ್ಲಾ ಗರ್ಭಗೃಹದಲ್ಲಿ ದರ್ಶನ ಮತ್ತು ಪೂಜೆಯನ್ನು ನೆರವೇರಿಸಲಿದ್ದಾರೆ.



ನರೇಂದ್ರ ಮೋದಿ

ಮಧ್ಯಾಹ್ನ 12 ಗಂಟೆಗೆ ಮೋದಿ ಅವರು ಶ್ರೀ ರಾಮ ಜನ್ಮಭೂಮಿ ಮಂದಿರದ ಶಿಖರದ ಮೇಲೆ 10X20 ಅಡಿಯ ಕೇಸರಿ ಧ್ವಜವನ್ನು ಹಾರಿಸಲಿದ್ದಾರೆ. ■ 10ನೇ ಪುಟಕ್ಕೆ

ಬಾಲಿವುಡ್ ಹಿರಿಯ ನಟ ಧರ್ಮೇಂದ್ರ ಇನ್ನಿಲ್ಲ



ಮುಂಬೈ, ನ.24– ಬಾಲಿವುಡ್ ಹಿರಿಯ ನಟ ಧರ್ಮೇಂದ್ರ ನಿಧನರಾಗಿದ್ದಾರೆ. ಅವರಿಗೆ 89 ವರ್ಷ ವಯಸ್ಸಾಗಿತ್ತು. ಬಾಲಿವುಡ್‌ನ 'ಹೀಮ್ಯಾನ್' ಎಂದೇ ಹೆಸರುವಾಸಿಯಾಗಿದ್ದ ಧರ್ಮೇಂದ್ರ ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ಚಿತ್ರರಂಗವನ್ನು ಆಳಿದ್ದರು.

ಈ ತಿಂಗಳ ಆರಂಭದಲ್ಲಿ ತೀವ್ರ ಅನಾರೋಗ್ಯದಿಂದಾಗಿ ಅವರನ್ನು ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ಸೇರಿಸಲಾಗಿತ್ತು. ನಂತರ ಡಿಸ್ಚಾರ್ಜ್ ಆಗಿ ಮನೆಯಲ್ಲಿಯೇ ಚಿಕಿತ್ಸೆ ನೀಡಲಾಗುತಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಇಂದು ಅವರು ಕೊನೆಯುಸಿರೆಳೆದಿದ್ದಾರೆ.

1960 ರಲ್ಲಿ 'ದಿಲ್ ಭಿ ತೇರಾ ಹಮ್ ಭಿ ತೇರೆ' ಚಿತ್ರದ ಮೂಲಕ ಪಾದಾರ್ಪಣೆ ಮಾಡಿದ ಧರ್ಮೇಂದ್ರ, 1960ರ ದಶಕದಲ್ಲಿ ■ 10ನೇ ಪುಟಕ್ಕೆ

53ನೇ ಸಿಜೆಐ ನ್ಯಾಯಮೂರ್ತಿ ಸೂರ್ಯಕಾಂತ್ ಪ್ರಮಾಣ

ನವದೆಹಲಿ, ನ.24– ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ವಾಪಸ್ ಪಡೆಯುವ 370ನೇ ವಿಧಿಯನ್ನು ರದ್ದುಪಡಿಸುವುದು ಸೇರಿದಂತೆ ಹಲವಾರು ಮಹತ್ವದ ತೀರ್ಪುಗಳ ಭಾಗವಾಗಿರುವ ನ್ಯಾಯಮೂರ್ತಿ ಸೂರ್ಯಕಾಂತ್ ಸೋಮವಾರ ಭಾರತದ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ನ್ಯಾಯಮೂರ್ತಿ ಬಿಆರ್ ಗವಾಯಿ ಅವರು ನ.23 ರಂದು ನಿವೃತ್ತರಾಗಿದ್ದು, ಅವರ ನಂತರ ಸೂರ್ಯಕಾಂತ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ದೇವರ ಹೆಸರಿನಲ್ಲಿ ಅವರು ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಸಮಾರಂಭದಲ್ಲಿ ಉಪ ರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಿರಿಯ ನಾಯಕರು ಭಾಗವಹಿಸಿದ್ದರು.



ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಮುಂದಿನ ಸುಪ್ರೀಂಕೋರ್ಟ್‌ನ ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ಅಕ್ಟೋಬರ್ 30 ರಂದು ನೇಮಕ ಮಾಡಲಾಯಿತು ಮತ್ತು ಅವರು ಸುಮಾರು 15 ತಿಂಗಳು ಈ ಹುದ್ದೆಯಲ್ಲಿ ಇರುತ್ತಾರೆ. ಅವರಿಗೆ ಫೆಬ್ರುವರಿ 9, 2027ರಂದು 65 ವರ್ಷ ತುಂಬುವ ಹಿನ್ನೆಲೆಯಲ್ಲಿ ಅಧಿಕಾರದಿಂದ ನಿವೃತ್ತರಾಗುತ್ತಾರೆ.

ಮೈಸೂರಲ್ಲೇ ಬೀಡು ಬಿಟ್ಟಿದೆ ಸೈಬರ್ ಕ್ರೈಂ ಜಾಲ!

■ ಡಿಜಿಟಲ್ ಅರೆಸ್ಟ್ ಸಂಚಿನ ಮೂಲಕ ಅಮಾಯಕರ ಸುಲಿಗೆ ■ ಈ ಜಾಲಕ್ಕೆ ಮುಗ್ಧ ವಿದ್ಯಾರ್ಥಿಗಳು, ಯುವಕರು ಬಲಿ ■ ಗೊತ್ತು–ಗುರಿ ಇಲ್ಲದೆ ಖಾತೆಗೆ ಹಣ ಜಮೆ ; ಜೊತೆಗೆ ತಕ್ಷಣ ಡ್ರಾ ಆಗುತ್ತಿದೆ ■ ಇದನ್ನೇ ಆಧರಿಸಿ ಪೊಲೀಸರು ಯುವಕರನ್ನು ಬಂಧಿಸಿ ಜೈಲಿಗಟ್ಟಿರುವ ಹಲವು ಪ್ರಕರಣ ಬಯಲು ■ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್‌ರಿಂದ ಬೆಚ್ಚಿ ಬೀಳಿಸುವ ವಿಚಾರ ಬಹಿರಂಗ ■ ದಕ್ಷಿಣ ಕನ್ನಡ, ಪೂನಾ, ಚೆನ್ನೈ ಪ್ರಕರಣದಲ್ಲಿ ಮೈಸೂರಿನ ಯುವಕರು ಜೈಲು ಪಾಲಾಗಿದ್ದಾರೆ

ಮೈಸೂರು, ನ.24(ಜಿಎ)– ದೇಶದಲ್ಲಿ ನಡೆಯುತ್ತಿರುವ 'ಡಿಜಿಟಲ್ ಅರೆಸ್ಟ್' ಸೈಬರ್ ಕ್ರೈಂ ಪ್ರಕರಣದ ಜಾಲ ಮೈಸೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸುಲಿಗೆಕೋರ ತಂಡದ ಏಜೆಂಟ್‌ಗಳು ಮೈಸೂರಿನಲ್ಲಿ ಬೀಡು ಬಿಟ್ಟು ಅಮಾಯಕ ವಿದ್ಯಾರ್ಥಿಗಳು ಮತ್ತು ಯುವಕರನ್ನು ಬಲಿಪಶು ಮಾಡುತ್ತಿದ್ದಾರೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಬೆಚ್ಚಿ ಬೀಳಿಸುವಂತಹ ವಿಷಯವನ್ನು ಹೊರ ಹಾಕಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಗೆ ದೊರೆತಿರುವ ಮಾಹಿತಿಯಂತೆ ಈಗಾಗಲೇ ಈ ಜಾಲಕ್ಕೆ ಸಿಲುಕಿದ್ದ 8 ಅಮಾಯಕ ವಿದ್ಯಾರ್ಥಿಗಳು ಜೈಲು ಪಾಲಾಗಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿದರು.

ಮೈಸೂರು ನಗರ ಪೊಲೀಸರು ಸೈಬರ್ ಕ್ರೈಂ ದಂಧೆಯ ಏಜೆಂಟರಾಗಿ ಕಾರ್ಯ ನಿರ್ವಹಿಸುತ್ತಿರುವವರನ್ನು ಪತ್ತೆ ಮಾಡಿ ಅಮಾಯಕ ವಿದ್ಯಾರ್ಥಿಗಳ ರಕ್ಷಣೆಗೆ ನಿಲ್ಲಬೇಕು ಎಂದು ಒತ್ತಾಯಿಸಿದರು.

ವಿಶ್ವದ ಯಾವುದೋ ಮೂಲೆಯಲ್ಲಿ ಕುಳಿತುಕೊಂಡು ನಿವೃತ್ತ ಅಧಿಕಾರಿಗಳು ಹಾಗೂ ವೃದ್ಧರನ್ನೇ ಗುರಿಯಾಗಿಸಿಕೊಂಡು ದೆಹಲಿ ಪೊಲೀಸ್, ಇಡಿ, ಐಟಿ ಸಿಬಿಐ ಹೆಸರಿನಲ್ಲಿ ವಾಟ್ಸಪ್ ವಿಡಿಯೋ ಕರೆ ಮಾಡಿ, ನಿಮ್ಮ ಆಧಾರ್ ಕಾರ್ಡ್ ಬಳಸಿ ಅಪರಾಧವೆಸಗಲಾಗಿದೆ ಎಂದು ಬೆದರಿಸಿ, ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದೇವೆ ಎಂದು ಬ್ಲಾಕ್‌ಮೇಲ್ ಮಾಡಿ ಅವರಿಂದ ಕೋಟ್ಯಾಂತರ ರೂ.ಗಳನ್ನು ಲೂಟಿ ಮಾಡಲಾಗುತ್ತಿದೆ. ಹೀಗೆ ಹಣ ಲೂಟಿ ಮಾಡುವಾಗ ಅಮಾಯಕ ವಿದ್ಯಾರ್ಥಿಗಳು ಹಾಗೂ ಯುವಕರ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಖಾತೆ ತೆರೆದು ಅಲ್ಲಿಗೆ ಹಣವನ್ನು ವರ್ಗಾವಣೆ ಮಾಡಿಸಿಕೊಂಡು ನಂತರ ಅದನ್ನು ಡ್ರಾ ಮಾಡಿಕೊಳ್ಳಲಾಗುತ್ತಿದೆ.

ಈ ಪ್ರಕರಣಗಳಲ್ಲಿ ಅಮಾಯಕ ವಿದ್ಯಾರ್ಥಿ, ಯುವಕರಿಗೆ ತಮ್ಮ ಖಾತೆಗೆ ಸೈಬರ್ ಕ್ರೈಂಗೆ ಸಂಬಂಧಪಟ್ಟ ಹಣ ಜಮೆ ಆಗಿದೆ ಎಂಬುದಾಗಲಿ, ಅದನ್ನು ಲೂಟಿಕೋರರು ಡ್ರಾ ಮಾಡಿಕೊಂಡಿದ್ದಾರೆ ಎಂಬುದಾಗಲೀ ಅರಿವಿಗೆ ಬರುವುದಿಲ್ಲ. ಅದೇ ವೇಳೆ ಹಣ ಕಳೆದುಕೊಂಡವರು ಸೈಬರ್ ಕ್ರೈಂ ಠಾಣೆಯಲ್ಲಿ ದೂರು ದಾಖಲಿಸಿದಾಗ ಸಿಕ್ಕಿ ಬೀಳುವುದು ಅಮಾಯಕ ವಿದ್ಯಾರ್ಥಿಗಳು ಹಾಗೂ ಯುವಕರೇ ಆಗಿದ್ದಾರೆ. ಇವರ ಬ್ಯಾಂಕ್ ಖಾತೆಗೆ ಹಣ ಜಮೆಯಾಗಿ ನಂತರ ಡ್ರಾ ಆಗಿರುವುದಕ್ಕೆ ದಾಖಲೆಗಳು ಇರುವುದರಿಂದ ಈ ಅಮಾಯಕರು ಜೈಲು ಪಾಲಾಗಬೇಕಾಗುತ್ತದೆ. ಮೈಸೂರಿನಲ್ಲಿ ಈ ಜಾಲಕ್ಕೆ ಸಿಲುಕಿ 8 ವಿದ್ಯಾರ್ಥಿಗಳು ಜೈಲು ಪಾಲಾಗಿರುವ ಬಗ್ಗೆ ತಮಗೆ ಮಾಹಿತಿ ದೊರೆತಿದೆ.

ಒಂದು ಪ್ರಕರಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 75 ವರ್ಷ ವಯಸ್ಸಿನ ಗ್ರೇಗೋರಿ ಮೊಂತೆರೊ ಎಂಬ ■ 10ನೇ ಪುಟಕ್ಕೆ

ಮೈಸೂರು ಮಿತ್ರ

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಹೊಸ ಹೊಳಪು ನೀಡಿದ ಶಾಸಕ ಜಿ.ಟಿ.ದೇವೇಗೌಡ



● ಗ್ರೇಡ್–1 ಮೈಸೂರು ರಚನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯರ ನಿರ್ಧಾರದ ಹಿಂದೆ ಜಿಟಿಡಿ ಶ್ರಮ ● ರಿಂಗ್ ರಸ್ತೆಯ ಹೊರಗೆ ಮತ್ತೊಂದು ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣದಿಂದ ಹಳ್ಳಿಗಳ ಅಭಿವೃದ್ಧಿಗೆ ಕಾಯಕಲ್ಪ ● ಬಹು ದಿನಗಳ ಕನಸು ನನಸಾಗಿಸುವಲ್ಲಿ ಯಶಸ್ವಿಯಾದ ಅಭಿವೃದ್ಧಿಪರ ಚಿಂತಕ ● ಅವಿರತ ಶ್ರಮದಿಂದಲೇ ಕ್ಷೇತ್ರದ ಅಭಿವೃದ್ಧಿಯಲ್ಲಿ ಬದಲಾವಣೆಯ ದಿಕ್ಕು

ಗ್ರೇಡ್–1 ಮೈಸೂರು ರಚನೆಗೆ ಜಿಟಿಡಿ ಮೂಲ



ಮೈಸೂರಿನ ಹೊರವಲಯದ ಪ್ರದೇಶಗಳನ್ನು ಸೇರಿಸಿಕೊಂಡು ಗ್ರೇಡ್–1 ಮೈಸೂರು ರಚನೆ ಮಾಡುವುದಕ್ಕೆ ಸರ್ಕಾರ ತೀರ್ಮಾನ ಕೈಗೊಂಡಿರುವುದರ ಹಿಂದೆ ಶಾಸಕ ಜಿ.ಟಿ.ದೇವೇಗೌಡರ ಶ್ರಮ ಮತ್ತು ಅವರೇ ಮೂಲ ಕಾರಣಕರ್ತರು ಎಂಬುದು ಎಂದಿಗೂ ಉಳಿಯಲಿದೆ. ಮೈಸೂರು ಪಾಲಿಕೆ ವತಿಯಿಂದ ಕುಡಿಯುವ ನೀರು ಒದಗಿಸುವಂತಹ, ಘನತ್ಯಾಜ್ಯ ನಿರ್ವಹಣೆಯಾಗುವಂತೆ ಮಾಡುವ ಜತೆಗೆ, ಎಂಡಿಎದಿಂದ ಮೂಲ ಸೌಕರ್ಯಗಳನ್ನು ಒದಗಿಸಲು ಪ್ರಮುಖ ಕಾರಣಕರ್ತರಾಗಿದ್ದರು. ಅದಕ್ಕಾಗಿಯೇ ಕಳೆದ ಮೂರ್ನಾಲ್ಕು ವರ್ಷಗಳಿಂದ ನಿರಂತರವಾಗಿ ಪ್ರಯತ್ನಪಟ್ಟುಕೊಂಡು ಬಂದಿದ್ದನ್ನು ನನಸು ಮಾಡುವ ದಿನಗಳು ಹತ್ತಿರಕ್ಕೆ ಬಂದಿವೆ. ಹೂಟಗಳ್ಳಿ ನಗರಸಭೆ, ಬೋಗಾದಿ ಪಟ್ಟಣ ಪಂಚಾಯಿತಿ, ಶ್ರೀರಾಂಪುರ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ಕಡಕೊಳ ಪಟ್ಟಣ ಪಂಚಾಯಿತಿ, ಚಾಮುಂಡಿಬೆಟ್ಟ, ಆಲನಹಳ್ಳಿ, ಧನಗಳ್ಳಿ, ಸಿದ್ಧಲಿಂಗಪುರ, ಇಲವಾಲ, ಬೀರಿಹುಂಡಿ, ನಾಗವಾಲ, ನಾಗನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಗ್ರೇಡ್–1 ಮೈಸೂರಿಗೆ ಸೇರ್ಪಡೆ ಮಾಡಲಾಗಿದ್ದು, ಇದರಿಂದಾಗಿ ಮೈಸೂರಿನ ಸುತ್ತಮುತ್ತಲಿನ ಗ್ರಾಮಗಳ ಚಿತ್ರಣವೇ ಬದಲಾಗುತ್ತಿದೆ. ಹಲವು ವರ್ಷಗಳಿಂದ ಗ್ರಾಪಂಗೆ ಸೇರಿದ್ದ ಗ್ರಾಮಗಳು ಈಗ ಹಳ್ಳಿಗಳ ಪೊರೆಯನ್ನು ಕಳಚಿಕೊಳ್ಳಲಿವೆ. ಹೂಟಗಳ್ಳಿ ನಗರಸಭೆಗೆ ಸೇರಿದ ಕೂರ್ಗಳ್ಳಿ, ಹೆಬ್ಬಾಳ್, ಬೆಳವಾಡಿ, ಹಿನಕಲ್, ಶ್ರೀರಾಂಪುರ ಪಪಂಗೆ ಸೇರಿದ ಶ್ರೀರಾಂಪುರ, ಲಿಂಗಾಂಬುಧಿಪಾಳ್ಯ, ಗೊರೂರು, ಕೊಪ್ಪಲೂರು, ಕಳಲವಾಡಿ, ರಮ್ಮನಹಳ್ಳಿ ಪಪಂಗೆ ಸೇರಿದ ರಮ್ಮನಹಳ್ಳಿ, ಆಲನಹಳ್ಳಿ, ನಾಡನಹಳ್ಳಿ, ಹಂಚ್ಯಾ ಸಾತಗಳ್ಳಿ, ಕಡಕೊಳ ಪಪಂಗೆ ಸೇರಿದ ಗುಡಮಾದನಹಳ್ಳಿ, ಬಂಡೀಪಾಳ್ಯ, ಹೊಸಹುಂಡಿ, ಮರಸೆ, ಮದರಗಳ್ಳಿ, ಮಂಡಕಳ್ಳಿ, ಸರ್ಕಾರಿ ಉತ್ತನಹಳ್ಳಿ, ಬೋಗಾದಿ ಪಪಂಗೆ ಸೇರಿದ ಬೋಗಾದಿ, ಮಂಟಿಕ್ಯಾತನಹಳ್ಳಿ, ಜಟ್ಟಿಹುಂಡಿ, ಕೇರ್ಗಳ್ಳಿ, ಬಸವನಹಳ್ಳಿ, ಮಾದಗಳ್ಳಿ, ಕೆ.ಹೆಮ್ಮನಹಳ್ಳಿ, ಬೆಲವತ್ತ, ಮೇಟಗಳ್ಳಿ, ಧನಗಳ್ಳಿ, ಯಡಹಳ್ಳಿ, ಕೆಂಚಲಗೂಡು, ಹಾಲಾಳು, ಡಿ.ಸಾಲುಂಡಿ, ಇಲವಾಲ, ಚಿಕ್ಕೇಗೌಡನಕೊಪ್ಪಲು, ಹಳೆ ಕಾಮನಕೊಪ್ಪಲು, ಭದ್ರೇಗೌಡನಕೊಪ್ಪಲು, ಲಿಂಗದೇವರ ಕೊಪ್ಪಲು, ಈರಪ್ಪನಕೊಪ್ಪಲು, ಮಲ್ಲಹಳ್ಳಿ–ಬೀರಿಹುಂಡಿ, ಕುಮಾರಬೀಡು, ಗೋಹಳ್ಳಿ, ಬಲ್ಲಹಳ್ಳಿ ಗ್ರಾಮಗಳ ಸ್ವರೂಪವೇ ಬದಲಾಗಿ ಹೋಗುವ ದಿನಗಳು ಸಮೀಪಿಸುವುದಕ್ಕೆ ಕಾರಣಕರ್ತರು ಜಿ.ಟಿ.ದೇವೇಗೌಡರು.

ನಿವಾಸಿಗಳಿಗೆ ನೆಮ್ಮದಿ ಸಿಗಲಿದೆ

ಗ್ರೇಟರ್ ಮೈಸೂರು ಅನುಷ್ಠಾನದಿಂದ ನಗರದ ಸುತ್ತಲಿನ ಬಡಾವಣೆಗಳ ನಿವಾಸಿಗಳಿಗೆ ನೆಮ್ಮದಿ ಸಿಗಲಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಅಭಿಪ್ರಾಯಿಸಿದ್ದಾರೆ.

'ಬೃಹತ್ ಮೈಸೂರು' ರೂಪಿಸಬೇಕೆಂದು ಹಲವು ವರ್ಷಗಳಿಂದ ನಿರಂತರವಾಗಿ ಸರ್ಕಾರಗಳ ಮೇಲೆ ಒತ್ತಡ ಹೇರುತ್ತಾ ಬಂದಿರುವ ಜಿಟಿಡಿ ಅವರು, ಮುಂದಿನ ಸಂಪುಟದಲ್ಲಿ ಗ್ರೇಟರ್ ಮೈಸೂರು ಜಾರಿಗೆ ಅನುಮೋದನೆ ಪಡೆಯಲು ನಿರ್ಧಾರ ಕೈಗೊಂಡಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರದ ಸುತ್ತ ಗೃಹ ನಿರ್ಮಾಣ ಸಹಕಾರ ಸಂಘಗಳು ಹಾಗೂ ಖಾಸಗಿ ಡೆವಲಪರ್‌ಗಳು ನಿರ್ಮಾಣ ಮಾಡಿರುವ ಬಹುತೇಕ ಬಡಾವಣೆಗಳಲ್ಲಿ ಸೆಪ್ಟಿಕ್ ಟ್ಯಾಂಕ್, ಶಾಶ್ವತ ರಸ್ತೆ, ಉದ್ಯಾನವನ ಸೇರಿದಂತೆ ಯಾವುದೇ ಸೌಲಭ್ಯ ಕಲ್ಪಿಸಿಲ್ಲ. ಇರುವ ರಸ್ತೆಗಳೂ ಗುಂಡಿಮಯವಾಗಿವೆ. ಯುಜಿಡಿ ಸಮಸ್ಯೆಯಂತೂ ಗಂಭೀರವಾಗಿದೆ. ಅತ್ಯಂತ ಆಸೆಯಿಂದ ಮನೆ ನಿರ್ಮಾಣ ಮಾಡಿಕೊಂಡಿರುವ ಜನ, ನರಕಯಾತನೆ ಅನುಭವಿಸುತ್ತಿದ್ದಾರೆ. ಸಕಲ ಸೌಲಭ್ಯವನ್ನೂ ಕಲ್ಪಿಸಿಕೊಡುವ ಮೂಲಕ ಜನರಿಗೆ ನೆಮ್ಮದಿ ನೀಡಬೇಕೆಂದು ಬಹಳ ವರ್ಷಗಳಿಂದ ಮನವಿ ಮಾಡುತ್ತಲೇ ಬಂದಿದ್ದೇನೆ. ಮೈಸೂರು ನಗರಪಾಲಿಕೆ ವ್ಯಾಪ್ತಿಯ ಸುತ್ತಲೂ ಇರುವ ಪ್ರದೇಶಗಳನ್ನೆಲ್ಲಾ ಸೇರಿಸಿಕೊಂಡು ಬೃಹತ್ ಮೈಸೂರು ರೂಪಿಸಿ, ಎಲ್ಲಾ ರೀತಿಯ ಅಭಿವೃದ್ಧಿ ಕೆಲಸ ಮಾಡಬೇಕು ಎಂಬ ನಮ್ಮ ಮನವಿಗೆ ಮುಖ್ಯಮಂತ್ರಿಗಳು ಸ್ಪಂದಿಸಿದ್ದಾರೆ. ಸುಂದರ ಬೃಹತ್ ಮೈಸೂರು ರೂಪಿಸಲು ಅಗತ್ಯ ಯೋಜನೆ ರೂಪಿಸಲು ಸೂಚಿಸಿದ್ದಾರೆ.

ಮೈಸೂರಿನ ಸಮಗ್ರ ಅಭಿವೃದ್ಧಿ ಯೋಜನೆಗಾಗಿ ತಜ್ಞರ ಸಮಿತಿ ರಚಿಸಿ, ಅಗತ್ಯ ಸಲಹೆ–ಸೂಚನೆ ಪಡೆಯಲು ತಿಳಿಸಿದ್ದಾರೆ. ಬೃಹತ್ ಮೈಸೂರು ವ್ಯಾಪ್ತಿಗೆ ಕಡಕೊಳ ಹಾಗೂ ನಾಗವಾಲ ಗ್ರಾಪಂ ಸೇರಿಸಿಕೊಳ್ಳುವಂತೆ ಕೇಳಿದ್ದೇನೆ. ಜೊತೆಗೆ ನಗರ್ತಳ್ಳಿ ಹಾಗೂ ಬೀರಿಹುಂಡಿ ಭಾಗವನ್ನೂ ಸೇರಿಸಬೇಕೆಂದು ಒತ್ತಾಯಿಸಿದ್ದೇನೆ. ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ) ಅಸ್ತಿತ್ವದಲ್ಲಿರುವುದರಿಂದ ಯಾವುದೇ ಬಡಾವಣೆ ಅಭಿವೃದ್ಧಿಪಡಿಸುವಾಗ ಸೆಪ್ಟಿಕ್ ಟ್ಯಾಂಕ್, ಪಾರ್ಕ್, ಕುಡಿಯುವ ನೀರು, ಬೀದಿ ದೀಪ, ಯುಜಿಡಿ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸುವುದು ಕಡ್ಡಾಯವಾಗಿದೆ. ಜೊತೆಗೆ ಸಿಡಿಪಿ ಹಾಗೂ ಪೆರಿಫೆರಲ್ ರಿಂಗ್ ರಸ್ತೆ ಮಾಡುವುದು ಅತ್ಯವಶ್ಯವಾಗಿದೆ. ಮೈಸೂರು ನಗರ ಸುತ್ತಲೂ ವ್ಯವಸ್ಥಿತವಾಗಿ ಬೆಳೆಯಬೇಕು ಎಂಬುದು ನಮ್ಮ ಒತ್ತಾಸೆ. ಇದಾಗಬೇಕಾದರೆ ಎದುರಿಗಿರುವ ಸಮಸ್ಯೆಗಳು ಪರಿಹಾರವಾಗಬೇಕು. ಇದಕ್ಕಾಗಿ ನಮ್ಮ ಹೋರಾಟ ನಡೆದಿದೆ ಎಂದು ಜಿಟಿಡಿ ವಿವರಿಸಿದ್ದಾರೆ.

ಒಬ್ಬ ಕೃಷಿಕ, ಸಹಕಾರಿ, ರಾಜಕೀಯ ಕ್ಷೇತ್ರದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಬಂದವರಿಗೆ ಅಭಿವೃದ್ಧಿಯ ಪರಿಕಲ್ಪನೆ ಯಾವ ರೀತಿ ಇರುತ್ತದೆ. ಹೇಗಿರುತ್ತದೆ, ಭವಿಷ್ಯದಲ್ಲಿ ತಮ್ಮ ಸ್ವಕ್ಷೇತ್ರವನ್ನು ಯಾವ ರೀತಿಯಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸಬೇಕು ಎಂಬುದನ್ನು ತೋರಿಸಿ ಸಮಾಜಕ್ಕೆ ಮಾದರಿಯಾದ ಬೆರಳಣಿಕೆಯಷ್ಟು ನಾಯಕರಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರು, ಮಾಜಿ ಸಚಿವರೂ ಆದ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು ಸದಾ ಮುಂಚೂಣಿಯಲ್ಲಿ ನಿಲ್ಲಬಲ್ಲರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಇರುವ ಜತೆಗೆ, ಸಾಂಸ್ಕೃತಿಕ ನಗರಿ ಮೈಸೂರಿನ ನಾಲ್ಕು ದಿಕ್ಕುಗಳಲ್ಲಿ ಇರುವ ಕ್ಷೇತ್ರಕ್ಕೆ ಹೊಸ ಹೊಳಪು ನೀಡಿದ್ದಾರೆ. ಯಾವುದೇ ಸರ್ಕಾರವಿದ್ದರೂ ಅಭಿವೃದ್ಧಿಯ ವಿಚಾರದಲ್ಲಿ ಹಿಂಜರಿಯದ ಜಿ.ಟಿ.ದೇವೇಗೌಡರು ಅಭಿವೃದ್ಧಿ ಪರ್ವವನ್ನೇ ಕಾಣುವಂತೆ ಮಾಡಿದ್ದಾರೆ. ಹೀಗಾಗಿಯೇ, ಹಲವು ದಿನಗಳ ಬೇಡಿಕೆಯಾಗಿದ್ದ ರಿಂಗ್ ರಸ್ತೆಯ ಹೊರಗಿರುವ ಹಳ್ಳಿಗಳನ್ನು ಸೇರಿಸಿ ಗ್ರೇಡ್–1 ಮೈಸೂರು ರಚನೆಯನ್ನಾಗಿ ಮಾಡುವ ಹಂತಕ್ಕೆ ತಂದು ನಿಲ್ಲಿಸುವ ಹಿಂದೆ ಅವರ ಅವಿರತ ಶ್ರಮ, ಹೋರಾಟ ಚಾಮುಂಡೇಶ್ವರಿ ಕ್ಷೇತ್ರದ ಜನರ ಮನದಲ್ಲಿ ಶಾಶ್ವತವಾಗಿ ಉಳಿಯಲಿದೆ.

ಜಿ.ಟಿ.ದೇವೇಗೌಡರ ಒತ್ತಾಸೆ, ನಿರಂತರ ಪ್ರಯತ್ನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಐತಿಹಾಸಿಕವಾದ ತೀರ್ಮಾನ ಕೈಗೊಂಡಿದ್ದಾರೆ. ಇದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ತನ್ವೀರ್‌ಸೇಠ್ ಅವರ ಸಹಕಾರದಿಂದಾಗಿ ಕೈಗೂಡುವಂತಾಗಿದೆ. ಚಾಮುಂಡೇಶ್ವರಿ ಕ್ಷೇತ್ರದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಕಾಲದ ಆಪ್ತಮಿತ್ರ ಜಿ.ಟಿ.ದೇವೇಗೌಡರ ಕನಸನ್ನು ನನಸು ಮಾಡುವ ದಿಕ್ಕಿನಲ್ಲಿ ಗ್ರೇಡ್–1 ಮೈಸೂರು ರಚನೆಗೆ ಹಸಿರು ನಿಶಾನೆ ತೋರಿ ಶೀಘ್ರದಲ್ಲೇ ಸಚಿವ ಸಂಪುಟದಲ್ಲೂ ಘೋಷಣೆ ಮಾಡುವ ದಿನಗಳು ಬಂದಿರುವುದು ವಿಶೇಷವಾಗಿದೆ. ನಾಡ ಅಧಿದೇವತೆ ಚಾಮುಂಡೇಶ್ವರಿ ದೇವಿ ನೆಲೆಸಿರುವ ಚಾಮುಂಡಿಬೆಟ್ಟವು ಮೈಸೂರು ನಗರಕ್ಕೆ ಕಳಸಪ್ರಾಯದಂತೆ ಇದ್ದರೂ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೇರಿದ ಧಾರ್ಮಿಕ ಕ್ಷೇತ್ರವಾಗಿದೆ. ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲೂ ಆಧ್ಯಾತ್ಮಿಕ, ಪ್ರವಾಸಿ ತಾಣವಾಗಿರುವ ಚಾಮುಂಡಿಬೆಟ್ಟ ಸೇರಿದಂತೆ ಮೈಸೂರು ನಗರದ ಕೆಲವು ವಾರ್ಡುಗಳು, ಹಳ್ಳಿಗಳನ್ನು ಸೇರಿದಂತೆ ಚಾಮುಂಡೇಶ್ವರಿ ಕ್ಷೇತ್ರ ಚಾಚಿಕೊಂಡಿದೆ.

1983ರಿಂದಲೂ ಚಾಮುಂಡೇಶ್ವರಿ ಕ್ಷೇತ್ರವನ್ನು ಪ್ರತಿನಿಧಿಸಿಕೊಂಡು ಬಂದಿದ್ದ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕ್ಷೇತ್ರದಿಂದಲೇ ಆಯ್ಕೆಯಾಗಿ ಸಚಿವರಾಗಿ, ಉಪಮುಖ್ಯಮಂತ್ರಿಯಾಗಿದ್ದರು. ಅಂತಹ



ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳಿಸಿದರೂ ಮೈಸೂರಲ್ಲಿ ಜಿ.ಟಿ.ದೇವೇಗೌಡರ ನಾಯಕತ್ವದಲ್ಲಿ ಜಾ.ದಳ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲಾಗಿತ್ತು. 2018ರಲ್ಲಿ ಎರಡನೇ ಬಾರಿಗೆ ಗೆದ್ದು ಮನೆ ಮಗನಂತೆ ಎಲ್ಲರ ಮೆಚ್ಚುಗೆಗೆ ಪಾತ್ರರಾದ ಜಿ.ಟಿ.ದೇವೇಗೌಡರು ಕ್ಷೇತ್ರದಲ್ಲಿ ಮಾಡಿದ ಸಾಧನೆ, ನಾಯಕತ್ವವನ್ನು ಮೆಚ್ಚಿದ ಕ್ಷೇತ್ರದ ಮತದಾರರು ಕೈ ಹಿಡಿದ ಫಲವಾಗಿಯೇ 2023ರ ಚುನಾವಣೆಯಲ್ಲೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಶಾಸಕರಾಗಿ ಆಯ್ಕೆಯಾಗುವಂತೆ ನೋಡಿಕೊಂಡಿದ್ದರಿಂದಾಗಿ ಹಗಲಿರುಳು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರ ಈಗ ಜಿ.ಟಿ.ದೇವೇಗೌಡರ ನೆಚ್ಚಿನ ಮತ್ತು ಎಂದೆಂದಿಗೂ ಮತದಾರರು ಕೈಬಿಡದ ಕ್ಷೇತ್ರವಾಗಿದೆ ಮೈಸೂರು ತಾಲ್ಲೂಕಿನಲ್ಲಿ ಹುಟ್ಟಿದರೂ ರಾಜಕೀಯವಾಗಿ ಕರ್ಮಭೂಮಿಯಾಗಿದ್ದ ಹುಣಸೂರು ಕ್ಷೇತ್ರವನ್ನು ಪ್ರತಿನಿಧಿಸಿಕೊಂಡು ಬಂದಿದ್ದ ಜಿ.ಟಿ.ದೇವೇಗೌಡರು 2013ರ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಎಂ.ಸತ್ಯನಾರಾಯಣ ಅವರನ್ನು ಪರಾಭವಗೊಳಿಸಿದ್ದರು.

ರಿಂಗ್ ರಸ್ತೆಯ ಹಳ್ಳಿಗಳಿಗೆ ಹೊಸ ರೂಪ: ಮೈಸೂರು ಪಾಲಿಕೆಗೂ ಸೇರದೆ ಅಥವಾ ಗ್ರಾಪಂಗಳಿಂದಲೂ ಮೂಲ ಸೌಕರ್ಯಗಳು ಸಿಗದೆ ಪರಿತಪಿಸುತ್ತಿದ್ದ ರಿಂಗ್ ರಸ್ತೆಯ ಹಳ್ಳಿಗಳಿಗೆ ಅಭಿವೃದ್ಧಿಯ ಸ್ಪರ್ಶ, ಹೊಸ ರೂಪ ನೀಡುವ ಮೂಲಕ ಇಂದು ಬದಲಾವಣೆ ಕಾಣುವಂತಾಗಿದೆ. ಮೈಸೂರು ನಗರದ 6 ದಿಕ್ಕುಗಳಾದ ಬನ್ನೂರು ರಸ್ತೆ, ತಿ.ನರಸೀಪುರ ರಸ್ತೆ, ಹುಣಸೂರು ರಸ್ತೆ, ಎಚ್.ಡಿ.ಕೋಟೆ ರಸ್ತೆ, ಬೆಂಗಳೂರು ರಸ್ತೆ, ನಂಜನಗೂಡು ರಸ್ತೆಯ ಮಾರ್ಗಗಳಲ್ಲಿ ಇದ್ದ ಹಳ್ಳಿಗಳನ್ನು ಮೈಸೂರು ನಗರಪಾಲಿಕೆ ವ್ಯಾಪ್ತಿಗೆ ಸೇರಿಸಲು ಶ್ರಮಿಸಿದ್ದರು. ಇದಕ್ಕಾಗಿ ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯದ ಕಚೇರಿಗೆ ಅಲೆದಾಡಿದರೂ ಸಫಲವಾಗಿರಲಿಲ್ಲ. ಆದರೆ, ಛಲದಂಕ ಮಲ್ಲನಂತೆ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲು ಒಪ್ಪದ ಜಿ.ಟಿ.ದೇವೇಗೌಡರು ಹೂಟಗಳ್ಳಿ ನಗರಸಭೆ, ಶ್ರೀರಾಂಪುರ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ಕಡಕೊಳ ಪಟ್ಟಣ ಪಂಚಾಯಿತಿ, ಬೋಗಾದಿ ಪಟ್ಟಣ ಪಂಚಾಯಿತಿ ರಚನೆ ಮಾಡಿಸುವಲ್ಲಿ ಸಫಲವಾದರು. ಇದರಿಂದಾಗಿ ಗ್ರಾಪಂ ಆಡಳಿತ ಕಂಡಿದ್ದ ಒಂದು ನಗರಸಭೆ, ನಾಲ್ಕು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿದ್ದರ ಪರಿಣಾಮವಾಗಿ ಇಂದು ಹಲವಾರು ಬದಲಾವಣೆ, ಜನರ ಸಮಸ್ಯೆಗಳ ನಿವಾರಣೆಗೆ ಮೂಲ ಸೌಕರ್ಯದ ಕೊರತೆ ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಸಹಕಾರ ಸಪ್ತಾಹದಲ್ಲಿ ಮಿಂಚಿದ ಸಹಕಾರಿ ನಾಯಕ

ವ್ಯವಸಾಯ ಮಾಡಿಕೊಂಡು ಸಹಕಾರ ಕ್ಷೇತ್ರದಲ್ಲಿ ಸದ್ದಿಲ್ಲದೆ ಕೆಲಸ ಮಾಡಿ ಕೊಂಡು ಬಂದು, ತಮಗೆ ಎದುರಾದ ಸವಾಲುಗಳನ್ನೇ ಒಂದೊಂದು ಮೆಟ್ಟಿಲುಗಳನ್ನಾಗಿಸಿಕೊಂಡು ರಾಜಕೀಯ ಕ್ಷೇತ್ರದಲ್ಲಿ ಎತ್ತರಕ್ಕೆ ಬೆಳೆದ ನಾಯಕ ಯಾರಾದರೂ ಇದ್ದರೆ, ಸಹಕಾರ ಕ್ಷೇತ್ರದ ಧುರೀಣ ಜಿ.ಟಿ.ದೇವೇಗೌಡ ಅವರ ಹೆಸರು ಮುಂಚೂಣಿಯಲ್ಲಿ ನಿಲ್ಲುತ್ತದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿರುವ ಜಿ.ಟಿ.ದೇವೇಗೌಡರು ಈ ಬಾರಿ ನಡೆದ 72ನೇ ಅಖಿಲ ಭಾರತ ಸಹಕಾರಿ ಸಪ್ತಾಹವನ್ನು ಅತ್ಯಂತ ಯಶಸ್ವಿಯಾಗಿ ನಡೆಸುವ ಮೂಲಕ ಇತಿಹಾಸದ ಪುಟಗಳಲ್ಲಿ ದಾಖಲಾಗುವಂತೆ ಮಾಡಿದ್ದಾರೆ.

ಕಳೆದ 5 ದಶಕಗಳಿಗೂ ಹೆಚ್ಚು ಕಾಲ ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಪ್ರಾಬಲ್ಯ ಉಳಿಸಿಕೊಂಡಿರುವ ಜಿ.ಟಿ.ದೇವೇಗೌಡರು ರಾಜಕೀಯವಾಗಿ ಹಳೇ ಮೈಸೂರು ಪ್ರಾಂತ್ಯದ ನಾಯಕರಲ್ಲಿ ಮುಂಚೂಣಿಯಲ್ಲಿ ನಿಂತಿದ್ದಾರೆ. ಸಹಕಾರ ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನಲ್ಲಿ ನಡೆದ ಉದ್ಘಾಟನಾ ಸಮಾರಂಭ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಭಾಗಿಯಾಗುವಂತೆ ನೋಡಿ ಕೊಂಡರು. ಸಹಕಾರಿ ಕೋರ್ಸ್ ಪಡೆದವರಿಗೆ ಸರ್ಕಾರಿ ಉದ್ಯೋಗ ಸಿಗಬೇಕೆಂಬ ಬೇಡಿಕೆ ಇಡುತ್ತಲೇ ಬರಲಾಗಿತ್ತು. ಈ ವಿಚಾರವನ್ನು ಜಿ.ಟಿ.ದೇವೇಗೌಡರು ಆಗಿಂದಾಗ್ಗೆ ಸರ್ಕಾರದ ಗಮನಕ್ಕೆ ತರುತ್ತಲೇ ಇದ್ದರು. ಕೊನೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಗಣಿಸಿ ಮುಂದಿನ ದಿನಗಳಲ್ಲಿ ಅದನ್ನು ಜಾರಿಗೊಳಿಸುವ ಬಗ್ಗೆ ಭರವಸೆ ನೀಡಿರುವುದು ಸಹಕಾರಿ ಕ್ಷೇತ್ರದಲ್ಲಿ ದೊಡ್ಡ ಆಶಾಭಾವನೆ ಮೂಡಿಸಿದೆ. ರಾಜ್ಯದಲ್ಲಿ ಪ್ರತಿವರ್ಷ ಸಹಕಾರಿ ಸಪ್ತಾಹ ಆಯೋಜಿಸಿಕೊಂಡು ಬರಲಾಗಿತ್ತಾದರೂ ಈ ಬಾರಿ ಜಿ.ಟಿ.ದೇವೇಗೌಡರು ವಿಶೇಷವಾಗಿ ಆಚರಿಸಬೇಕೆಂಬ ಸಂಕಲ್ಪ ಮಾಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಸಿ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ನೋಡಿಕೊಳ್ಳುವಲ್ಲಿ ಗಮನಹರಿಸಿದ್ದರು. ನ.14ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸಾವಿರಾರು ಜನರು ಸೇರಿ ಮೊದಲನೇ ದಿನವೇ ಯಶಸ್ವಿಯಾಗುವಂತೆ ಮಾಡಿದರೆ, ಎರಡನೇ ದಿನ ರಾಯಚೂರು, ಮೂರನೇ ದಿನದಂದು ಮಂಗಳೂರು, ನಾಲ್ಕನೇ ದಿನದಂದು ಹೊಸಪೇಟೆ, ಐದನೇ ದಿನದಂದು ಹಾವೇರಿ, ಆರನೇ ದಿನದಂದು ಕೊಪ್ಪಳ ಜಿಲ್ಲೆಗಳಲ್ಲಿ ನಡೆದ ಕಾರ್ಯಕ್ರಮ ಹಿಂದೆಂದಿಗಿಂತಲೂ ಯಶಸ್ವಿಯಾಗಿ ನಡೆಯಿತು. ಅದೇ ರೀತಿ ಕೊನೆಯ ದಿನದಂದು ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ 30 ಸಾವಿರಕ್ಕೂ ಹೆಚ್ಚು ಸಹಕಾರಿಗಳು ಭಾಗಿಯಾಗುವಂತೆ ಮಾಡಿದ್ದರು. ಚಾಮರಾಜನಗರ ಜಿಲ್ಲಾ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸಹಕಾರಿಗಳನ್ನುದ್ದೇಶಿಸಿ ಶಾಸಕ ಜಿ.ಟಿ.ದೇವೇಗೌಡರು ಮಾಡಿದ ಭಾಷಣಕ್ಕೆ ಇಡೀ ರೈತ ಸಮುದಾಯ ಚಪ್ಪಾಳೆ ತಟ್ಟಿ ಸಂಭ್ರಮಿಸಿದ್ದು ಗಮನಾರ್ಹವಾಯಿತು.



ಮೈಸೂರು ಅಭಿವೃದ್ಧಿಗೆ ವೇಗ ತುಂಬುವ ಪೆರಿಫೆರಲ್ ರಿಂಗ್ ರಸ್ತೆ



ಐಟಿ, ಬಿಟಿ ಸೇರಿದಂತೆ ಪ್ರವಾಸೋದ್ಯಮ, ಅರಣ್ಯ, ಧಾರ್ಮಿಕ ಸೇರಿದಂತೆ ಇನ್ನಿತರ ಕ್ಷೇತ್ರಗಳ ಅಭಿವೃದ್ಧಿಗೆ ವೇಗವಾಗುವಂತೆ ನಿಲ್ಲಬಲ್ಲ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ರಾಜ್ಯಸರ್ಕಾರ ಡಿಪಿಆರ್ ತಯಾರಿಸಲು ಅನುಮೋದನೆ ನೀಡಿರುವುದರ ಹಿಂದೆ ಜಿ.ಟಿ.ದೇವೇಗೌಡರು ತಮ್ಮ ಕೊಡುಗೆ ನೀಡಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಒಳಗೆ ಈ ರಸ್ತೆಯು ಹಾದು ಹೋಗುವ ಕಾರಣ ವ್ಯವಸ್ಥಿತವಾಗಿ ರಸ್ತೆ ನಿರ್ಮಾಣಕ್ಕಾಗಿ ವೃತ್ತಾಕಾರದ ಬೌಂಡರಿ ಗುರುತು ಮಾಡಲು ಸಲಹೆ ನೀಡಿದ್ದಾರೆ. ಮೈಸೂರು ನಗರವು ಸುತ್ತಲೂ 40 ಕಿಮೀನಷ್ಟು ವಿಸ್ತರಿಸಿಕೊಂಡಿರುವ ಕಾರಣ ಹಾಲಿ ಇರುವ ರಿಂಗ್ ರಸ್ತೆಗಿಂತ 10 ಕಿಮೀ ದೂರದಲ್ಲಿ ಪೆರಿಫೆರಲ್ ರಿಂಗ್ ರಸ್ತೆ ಬರಲಿದೆ. ರೈತರ ಭೂಮಿ, ಜಮೀನು ಸ್ವಾಧೀನಪಡಿಸಿಕೊಳ್ಳುವ ಕಾರಣ ಇಂದಿನ ಮಾರುಕಟ್ಟೆ ದರದಲ್ಲಿ ಪರಿಹಾರ ಕೊಡಿಸುವ ಜತೆಗೆ, ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಲು ಅಭಯ ನೀಡಿದ್ದಾರೆ. ಏಕೆಂದರೆ ಕ್ಷೇತ್ರದ ಜನರ ಪರವಾಗಿ ಸದಾ ಯೋಚಿಸುವ ಜಿ.ಟಿ.ದೇವೇಗೌಡರ ಅಭಿವೃದ್ಧಿ ಕಾರ್ಯಕ್ಕೆ ಮತದಾರರು ಕೂಡ ಕೈಜೋಡಿಸುತ್ತಿರುವುದರಿಂದ ಈ ಮಹತ್ವದ ಯೋಜನೆ ಮುಂದೆ ಸಾಕಾರಗೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ಖಾಸಗಿ ಬಡಾವಣೆಗಳ ಹಸ್ತಾಂತರ ದೊಡ್ಡ ಸಾಧನೆ

ನಗರದ ಹೊರಗೆ ಕಳೆದ ಎರಡು–ಮೂರು ದಶಕಗಳಿಂದ ರಚನೆಯಾಗಿದ್ದ ಖಾಸಗಿ ಬಡಾವಣೆಗಳು ಸ್ಥಳೀಯ ಸಂಸ್ಥೆಗಳಿಗೆ ಸೇರದ ಕಾರಣ ಅನೇಕ ಸಮಸ್ಯೆಗಳು ಎದುರಾಗಿದ್ದನ್ನು ಮನಗಂಡು ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಖಾಸಗಿ ಬಡಾವಣೆಗಳನ್ನು ಹಸ್ತಾಂತರ ಮಾಡುವಲ್ಲಿ ಜಿ.ಟಿ.ದೇವೇಗೌಡರ ಸಾಧನೆ ಅನನ್ಯವಾಗಿದೆ. ಮೈಸೂರಿನ ಹೊರವಲಯದಲ್ಲಿ 2 ಸಾವಿರಕ್ಕೂ ಹೆಚ್ಚು ಖಾಸಗಿ ಬಡಾವಣೆಗಳನ್ನು ರಚನೆ ಮಾಡಿ ಒಂದು ಲಕ್ಷಕ್ಕೂ ಹೆಚ್ಚು ನಿವೇಶನಗಳನ್ನು ರಚಿಸಲಾಗಿತ್ತು. ಇದರಲ್ಲಿ ಬಹುತೇಕರು ಮನೆಗಳನ್ನು ನಿರ್ಮಾಣ ಮಾಡಿ ವಾಸ ಮಾಡುತ್ತಿದ್ದರೂ ಕುಡಿಯುವ ನೀರು, ವಿದ್ಯುತ್, ಒಳಚರಂಡಿ, ರಸ್ತೆಗಳು ಇಲ್ಲದೆ ಪರಿಪಾಟಲು ಪಡುತ್ತಿದ್ದರು. ಅದರಲ್ಲೂ ಕಬಿನಿ,ಕೆಆರ್‌ಎಸ್ ನೀರಿನ ವ್ಯವಸ್ಥೆ ಇಲ್ಲದ ಕಾರಣ ಬೋರ್‌ವೆಲ್ ನೀರು ಆಶ್ರಯಿಸುತ್ತಿದ್ದರು. ಇದಕ್ಕೆ ಅಂತ್ಯವಾಡಬೇಕೆಂದು ಬಯಸಿದ್ದ ಜಿ.ಟಿ.ದೇವೇಗೌಡರು, ಮೈಸೂರಿನ ಸುತ್ತಲೂ ರಚನೆಯಾಗಿದ್ದ ಒಂದು ಸಾವಿರಕ್ಕೂ ಹೆಚ್ಚು ಬಡಾವಣೆಗಳನ್ನು ಆಯಾಯ ಸ್ಥಳೀಯ ಸಂಸ್ಥೆಗಳಿಗೆ ಸೇರಿಸಲು ಮಹತ್ವದ ತೀರ್ಮಾನ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಮೊದಲನೇ ಹಂತದಲ್ಲಿ ನಗರಪಾಲಿಕೆಗೆ 111, ಶ್ರೀರಾಂಪುರ ಪಟ್ಟಣ ಪಂಚಾಯಿತಿಗೆ 140, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ 160, ನಂಜನಗೂಡು ನಗರಸಭೆಗೆ 21,ಕಡಕೊಳ ಪಟ್ಟಣ ಪಂಚಾಯಿತಿಗೆ 48, ಬೋಗಾದಿ ಪಟ್ಟಣ ಪಂಚಾಯಿತಿಗೆ 27, ಹೂಟಗಳ್ಳಿ ನಗರಸಭೆಗೆ 11, ಸಿಂಧುವಳ್ಳಿ ಗ್ರಾಮ ಪಂಚಾಯಿತಿಗೆ 9, ನಾಗವಾಲ ಗ್ರಾಮ ಪಂಚಾಯಿತಿಗೆ 14, ಇಲವಾಲ ಗ್ರಾಮ ಪಂಚಾಯಿತಿಗೆ 13, ಹುಲಿಕೆರೆ ಗ್ರಾಪಂಗೆ 7, ಉದ್ಬೂರು ಗ್ರಾಮ ಪಂಚಾಯಿತಿಗೆ 10,ಹೊಸಹಳ್ಳಿ ಗ್ರಾಮ ಪಂಚಾಯಿತಿಗೆ 2, ನಾಗನಹಳ್ಳಿ ಗ್ರಾಮ ಪಂಚಾಯಿತಿಗೆ 9, ವರುಣ ಗ್ರಾಮ ಪಂಚಾಯಿತಿಗೆ 9, ಮೊಸಂಬಾಯನಹಳ್ಳಿ ಗ್ರಾಮ ಪಂಚಾಯಿತಿಗೆ 6, ವಾಜಮಂಗಲ ಗ್ರಾಮ ಪಂಚಾಯಿತಿಗೆ 7 ಬಡಾವಣೆಗಳನ್ನು ಹಸ್ತಾಂತರ ಮಾಡಲಾಗಿತ್ತು.

ನಂತರ, ಎರಡನೇ ಮತ್ತು 3ನೇ ಹಂತದಲ್ಲಿ ಉಳಿದ ಬಡಾವಣೆಗಳನ್ನು ಹಸ್ತಾಂತರಿಸುವ ಮೂಲಕ ಖಾಸಗಿ ಬಡಾವಣೆಗಳ ಮಾಲೀಕರು, ಭೂ ಮಾಲೀಕರು, ಮನೆ ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದ ನಿವಾಸಿಗಳ ಬಹುದಿನಗಳ ಬೇಡಿಕೆಯನ್ನು ಈಡೇರಿಸುವಂತೆ ನೋಡಿಕೊಂಡಿದ್ದರು. ಈಗ ಸ್ಥಳೀಯ ಸಂಸ್ಥೆಗಳಲ್ಲೇ ಮನೆ ಮಾಲೀಕರು, ನಿವೇಶನಗಳ ಮಾಲೀಕರು ತಮ್ಮ ಮನೆ, ಸೈಟುಗಳಿಗೆ ಖಾತೆ ಮಾಡಿಸಿಕೊಂಡು ನೆಮ್ಮದಿಯಿಂದ ಜೀವನ ಮಾಡುವ ಜತೆಗೆ, ಭವಿಷ್ಯದಲ್ಲಿ ತಮ್ಮ ಮಕ್ಕಳ ಮದುವೆ, ಉದ್ಯೋಗ ಕೊಡಿಸಲು ಇರುವಂತಾಗಿದೆ.

ಜಿಟಿಡಿ ಕನಸಿನ ಯೋಜನೆ ಉಂಡುವಾಡಿ ಕುಡಿಯುವ ನೀರಿನ ಪೂರೈಕೆ





2013ರಿಂದ ಚಾಮುಂಡೇಶ್ವರಿ ಕ್ಷೇತ್ರವನ್ನು ಪ್ರತಿನಿಧಿಸಿದರೂ ಹುಣಸೂರು, ಚಾಮುಂಡೇಶ್ವರಿ ಕ್ಷೇತ್ರವನ್ನು ಎರಡು ಕಣ್ಣುಗಳಂತೆ ಕಂಡು ಅಭಿವೃದ್ಧಿಗೆ ಒತ್ತು ನೀಡಿರುವುದರಿಂದ ಇಂದು ಹೊಸ ಮನ್ವಂತರಕ್ಕೆ ಕಾರಣವಾಗಿದೆ.

ಮೈಸೂರು ತಾಲೂಕಿನ ಗುಂಗ್ರಾಲ್‌ಛತ್ರ ಗ್ರಾಮದಲ್ಲಿ ಹುಟ್ಟಿದರೂ ರಾಜಕೀಯವಾಗಿ ನೆಲೆ ಕಂಡುಕೊಂಡು ಬೆಳೆದಿದ್ದು ಡಿ.ದೇವರಾಜ ಅರಸು ಅವರ ಕರ್ಮಭೂಮಿ ಹುಣಸೂರು ಕ್ಷೇತ್ರದಲ್ಲಿ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರು ಸ್ಪರ್ಧಿಸುತ್ತಿದ್ದ ಕಾರಣಕ್ಕಾಗಿ ಪಕ್ಕದ ಹುಣಸೂರು ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿ ಜಯಗಳಿಸಿದ ಜಿ.ಟಿ.ದೇವೇಗೌಡರು ಹುಣಸೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ತಮ್ಮದೇ ಕೊಡುಗೆ ನೀಡಿದ್ದಾರೆ.

ಹುಣಸೂರು ಶಾಸಕರಾಗಿದ್ದಾಗ ಕೆಆರ್‌ಎಸ್ ಹಿನ್ನೀರಿನಿಂದ ಬಿಳಿಕೆರೆ ಹೋಬಳಿಗೆ ಕುಡಿಯುವ ನೀರು, ಕಾವೇರಿ ನದಿ ಮೂಲದಿಂದ ಹುಣಸೂರು ಪಟ್ಟಣಕ್ಕೆ ನೀರು ಒದಗಿಸಿದ್ದರಿಂದ ಇಂದು ಸಾವಿರಾರು ಮನೆಗಳಿಗೆ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಕನ್ನಂಬಾಡಿಕಟ್ಟೆ ಇದ್ದರೂ ನಮ್ಮೂರಿಗೆ ನೀರಿಲ್ಲ ಎನ್ನುವ ಕೊರಗನ್ನು ದೂರ ಮಾಡಿ ಬಿಳಿಕೆರೆ ಹೋಬಳಿಗೆ ನೀರು ಒದಗಿಸಿದ್ದರಿಂದ ಸುಮಾರು 25ಕ್ಕೂ ಹೆಚ್ಚು ಗ್ರಾಮಗಳು ಜಲಸಮೃದ್ಧಿಯಾಗಿವೆ. ಹುಣಸೂರು ತಾಲೂಕಿನಲ್ಲಿ 3 ಪದವಿ ಕಾಲೇಜುಗಳು, 5 ಪಿಯು ಕಾಲೇಜುಗಳು, 15 ಪ್ರೌಢಶಾಲೆಗಳು, 88 ಪ್ರೌಢಶಾಲೆಗಳನ್ನು ಮಂಜೂರು ಮಾಡಿಸಿ ಕ್ಷೇತ್ರ ಶೈಕ್ಷಣಿಕವಾಗಿ ಅಭಿವೃದ್ಧಿಯಾಗುವಂತೆ ನೋಡಿಕೊಂಡರು. ಹೋಬಳಿ ಗೊಂದು ಕೆಇಬಿ ಸ್ಟೇಷನ್‌ಗಳನ್ನು ಸ್ಥಾಪನೆ ಮಾಡಿಸಿ ಹಳ್ಳಿಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗುವಂತೆ ಮಾಡಿದ್ದರಿಂದ ಇಂದಿಗೂ ಜನರ ಮನದಲ್ಲಿ ಉಳಿದಿದೆ. 2013ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ಬಳಿಕ ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಮೈಸೂರು ಹೊರವಲಯದ 150 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಹಳೆ ಉಂಡುವಾಡಿ ಯೋಜನೆ ಕಾರ್ಯಗತವಾಗುವಂತೆ ಮಾಡಿದ್ದು, ಸುಮಾರು 550 ಕೋಟಿ ವೆಚ್ಚದ ಈ ಯೋಜನೆ ಪೂರ್ಣವಾದ ಬಳಿಕ ಮೈಸೂರು ನಗರ ಸೇರಿದಂತೆ ತಾಲೂಕಿನ ಕುಡಿಯುವ ನೀರಿನ ಬರ ನೀಗಲಿದೆ.

ಶಾಸಕ ಜಿಟಿಡಿ ಶ್ರಮದಿಂದ ಚಾಮುಂಡೇಶ್ವರಿ ಕ್ಷೇತ್ರದ ಪ್ರತಿ ಹಳ್ಳಿಗೂ ಹರಿಯುತ್ತಾಳೆ ಕಾವೇರಿ!

● ಕಾವೇರಿ, ಕಬಿನಿ ನದಿ ಮೂಲಗಳಿಂದ ಹಳ್ಳಿಗಳು, ಬಡಾವಣೆಗಳ ಮನೆಗೆ ಶುದ್ಧ ಕುಡಿಯುವ ನೀರು ● ಹೂಟಗಳ್ಳಿ ನಗರಸಭೆ, ನಾಲ್ಕು ಪಟ್ಟಣ ಪಂಚಾಯಿತಿ ವ್ಯಾಪ್ತಿಗೂ ತಲುಪಿದ ನೀರು ● ಒಂದೇ ದಿನದಲ್ಲಿ 1 ಲಕ್ಷ ಸಸಿಗಳನ್ನು ನೆಡಲು ಕಾರಣರಾದ ಜನಸೇವಕ ● ಸಹಕಾರಿ ಕ್ಷೇತ್ರದ ಜತೆಗೆ ಪರಿಸರ, ಕೆರೆಗಳ ಸಂರಕ್ಷಣೆಗೂ ವಿಶೇಷ ಆದ್ಯತೆ

ಕಾವೇರಿ, ಕಬಿನಿ ಜಲಾಶಯಗಳ ಮಡಿಲಲ್ಲಿ ಇದ್ದರೂ ಮೈಸೂರು ತಾಲ್ಲೂಕಿನಲ್ಲಿ ಹಲವಾರು ವರ್ಷಗಳಿಂದ ದಿನದ 24 ಗಂಟೆ ನೀರುಸಿಗದೆ ಬೋರ್‌ವೆಲ್ ನೀರು, ಕಿರು ತೊಂಬೆಗಳನಲ್ಲಿ ನೀರನ್ನು ಆಶ್ರಯಿಸುತ್ತಿದ್ದ ಜನರಿಗೆ ದಿನದ 24 ಗಂಟೆಗಳ ಕಾಲ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವ ಬಹು ದಿನಗಳ ಕನಸನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ನನಸು ಮಾಡುವ ದಿನಗಳನ್ನು ಎದುರು ನೋಡುವಂತೆ ಮಾಡುವಲ್ಲಿ ಕೊನೆಗೂ ಯಶಸ್ವಿಯಾಗಿದ್ದಾರೆ.

ಮೈಸೂರಿನ ರಿಂಗ್ ರಸ್ತೆಯ ಖಾಸಗಿ ಬಡಾವಣೆಗಳು, ಎಂಡಿಎ ರಚಿಸಿರುವ ಬಡಾವಣೆಗಳು, ಹಳ್ಳಿಗಳು, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬರುವ 100ಕ್ಕೂ ಹೆಚ್ಚು ಹಳ್ಳಿಗಳಿಗೆ ಕೆಲವೇ ದಿನಗಳಲ್ಲಿ ನೀರು ಸಿಗುವಂತೆ ಮಾಡುವುದರ ಹಿಂದೆ ಜಿ.ಟಿ.ದೇವೇಗೌಡರ ಅವಿರತ ಶ್ರಮ ಗಮನಾರ್ಹವಾಗಿದೆ. ಕೊಟ್ಟ ಮಾತನ್ನು ಈಡೇರಿಸುವ ತನಕವೂ ವಿರಮಿಸಲ್ಲ ಎನ್ನುವಗಾದೆ ಮಾತಿನಂತೆ ಕ್ಷೇತ್ರದ ಜನರಿಗೆ ಹಳೆಯ ಉಂಡು ವಾಡಿ ಯೋಜನೆಯಿಂದ ಕಾವೇರಿ ನೀರನ್ನು ಹರಿಸುವಂತೆ ಮಾಡಲು ಕೈಗೊಂಡಿರುವ ಕಾಮಗಾರಿ ಶೀಘ್ರದಲ್ಲೇ ಮುಗಿಯಲಿದೆ. ಬಳಿಕ ಈ ಬಡಾವಣೆಗಳು, ಹಳ್ಳಿಗಳ ಜನರ ಮೊಗದಲ್ಲಿ ಮಂದಹಾಸ, ಮನೆಯ ಮುಂದೆಯೇ ಗಂಗೆಯನ್ನು ಕಾಣುವಂತಾಗಿದೆ. ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ರಚನೆಯಾದ ಸ್ಥಳೀಯ ಸಂಸ್ಥೆಗಳಿಗೆ 14.5 ಎಂಎಲ್‌ಡಿ ನೀರು ಸರಬರಾಜು ಆಗುತ್ತಿದ್ದು, ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ಬರುವ ಕೆಎಚ್‌ಬಿ ಕಾಲೋನಿ, ಹೂಟಗಳ್ಳಿ, ಹಿನಕಲ್, ವಿಜಯ ನಗರ 4ನೇ ಹಂತಕ್ಕೆ 6 ಎಂಎಲ್‌ಡಿ, ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಯೂನಿವರ್ಸಿಟಿ ಲೇಔಟ್, ಮಹದೇಶ್ವರನಗರ, ರಮಾಬಾಯಿನಗರ, ಶ್ರೀರಾಂಪುರದ ಹೊಸ ಬಡಾವಣೆಗಳಿಗೆ 1.5 ಎಂಎಲ್‌ಡಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಮ್ಮನಹಳ್ಳಿಗೆ 3 ಎಂಎಲ್‌ಡಿ, ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬೋಗಾದಿ, ಬೋಗಾದಿ ಬ್ಯಾಂಕರ್ಸ್ ಬಡಾವಣೆ, ಎಸ್‌ಬಿಎಂ ಲೇಔಟ್, ಬಿಇಎಂಎಲ್,ಆರ್.ಟಿ. ನಗರ ಬಡಾವಣೆಗೆ 2.5 ಎಂಎಲ್‌ಡಿ, ಚಾಮುಂಡಿಬೆಟ್ಟ ಗ್ರಾಪಂಗೆ 6.5 ಎಂಎಲ್‌ಡಿ, ಆಲನಹಳ್ಳಿ ಗ್ರಾಪಂಗೆ 1.5 ಎಂಎಲ್‌ಡಿ ಸೇರಿ 14.5 ಎಂಎಲ್‌ಡಿ ನೀರು ದೊರೆಯುವಂತೆ ಮಾಡಿದ್ದಾರೆ.

ಹಲವು ವರ್ಷಗಳಿಂದ ನೀರಿನ ಸಮಸ್ಯೆಎದುರಿಸುತ್ತಿದ್ದ ಜನರು ಈಗ ನೆಮ್ಮದಿಯಿಂದ ಇದ್ದಾರೆ. ಪಾಲಿಕೆ ವತಿಯಿಂದ ಟ್ಯಾಂಕರ್ ನೀರು ಪೂರೈಕೆ, ಟ್ಯಾಂಕ್‌ನಿಂದ ನೀರು ಪಡೆಯುತ್ತಿದ್ದ ಬಡಾವಣೆಗಳಿಗೂ ಈಗ ಶುದ್ಧ ಕುಡಿಯುವ ನೀರು ದೊರೆಯುತ್ತಿರುವುದರಿಂದ ಸಾವಿರಾರು ನಿವಾಸಿಗಳ ಮುಖದಲ್ಲಿ ಸಂತಸಕ್ಕೆ ಜಿ.ಟಿ.ದೇವೇಗೌಡರು ಕಾರಣಕರ್ತರು ಎನ್ನುವುದರಲ್ಲಿ ಎರಡು ಮಾತಿಲ್ಲ.

ಮೈಸೂರಿನ ಹೊರವಲಯದ ಬಡಾವಣೆಗಳು, ಹಳ್ಳಿಗಳಿಗೆ ಮುಂದಿನ 30 ರಿಂದ 50ವರ್ಷಗಳ ತನಕ ನೀರಿನ ಸಮಸ್ಯೆ ಬರಬಾರದೆಂದು ಹಳೆಯ ಉಂಡುವಾಡಿ ಯೋಜನೆ ಕಾರ್ಯಗತಕ್ಕೆ ಸಂಕಲ್ಪ ಮಾಡಿ ಕಾಮಗಾರಿ ಮುಗಿಸುವಂತೆ ನೋಡಿಕೊಳ್ಳುತ್ತಿರುವುದು ಗಮನಾರ್ಹವಾಗಿದೆ. 2021ರ ಜೂನ್ ತಿಂಗಳಲ್ಲಿ ಪ್ರಾರಂಭವಾದ ಮಹತ್ವಾಕಾಂಕ್ಷೆಯ ಹಳೇ ಉಂಡುವಾಡಿ ಕುಡಿಯುವ ನೀರಿನ ಯೋಜನೆಯು ಪ್ರಸ್ತುತ ಪ್ರಗತಿಯಲ್ಲಿದ್ದು, ಮೈಸೂರು ನಗರ ಮತ್ತು ಸುತ್ತಮುತ್ತಲಿನ ನೂರಕ್ಕೂ ಹೆಚ್ಚು ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶವನ್ನು ಹೊಂದಿದೆ. ಈ ಯೋಜನೆ ಪೂರ್ಣಗೊಂಡ ನಂತರ, ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಜನಸಂಖ್ಯೆಯ ಗಮನಾರ್ಹ ಭಾಗವಾಗಿದ್ದರೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಪ್ರದೇಶಗಳು, ಗ್ರಾಮೀಣ ನೀರು ಸರಬರಾಜು ವಿಭಾಗದ ವ್ಯಾಪ್ತಿಗೆ ಬರುವ ಪ್ರದೇಶಗಳು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹಲವಾರು ಹಳ್ಳಿಗಳು, ಕೆಎಚ್‌ಬಿ ಅಭಿವೃದ್ಧಿಪಡಿಸಿದ ಬಡಾವಣೆಗಳಿಗೂ ಶುದ್ಧ ಕುಡಿಯುವ ನೀರಿನ ನಿರಂತರ ಪೂರೈಕೆಯಾಗುವ ದಿನಗಳು ಸಮೀಪಿಸುತ್ತಿರುವುದನ್ನು ಗಮನಿಸಬಹುದಾಗಿದೆ.







ಬಡಾವಣೆಗಳ ಕೊರಗು ನೀಗಿಸಿದ ಶಾಸಕ



ಮುಡಾದಿಂದ ಸ್ಥಳೀಯ ಸಂಸ್ಥೆಗಳಿಗೆ ಬಡಾವಣೆಗಳ ಹಸ್ತಾಂತರ ಮಾಡಿಸಿ ಸುಮ್ಮನೆ ಕೂರದ ಶಾಸಕ ಜಿ.ಟಿ.ದೇವೇಗೌಡರು ಬಡಾವಣೆಗಳ ನೀರಿನ ಕೊರಗನ್ನು ನೀಗಿಸಿದವರು.

ಪ್ರತಿನಿತ್ಯ ಬಡಾವಣೆಗಳ ಪ್ರಮುಖರು, ನಿವಾಸಿಗಳ ಸಂಘದವರು ಜಿ.ಟಿ.ದೇವೇಗೌಡರನ್ನು ಭೇಟಿ ಮಾಡಿ ನೀರಿನ ಸಮಸ್ಯೆಯನ್ನೇ ಹೇಳಿಕೊಳ್ಳುತ್ತಿದ್ದರು. ಕೆಲವರಂತೂ ನಮಗೆ ಏನು ಕೊಡಬೇಡಿ ನೀರು ಒಂದು ಕೊಡಿಸಿದರೆ ಸಾಕೆಂದು ಹೇಳುತ್ತಿದ್ದನ್ನು ಗಂಭೀರವಾಗಿ ಪರಿಗಣಿಸಿ ನಗರಪಾಲಿಕೆ ಅಧಿಕಾರಿಗಳಿಗೆ ಪ್ರೋರೇಟಾ ಶುಲ್ಕವನ್ನು ಕಟ್ಟಿಸಿಕೊಂಡು ನೀರು ಕೊಡಿಸುವಂತೆ ಮಾಡಿದರು. ಹೀಗಾಗಿ, ವಸಂತ ನಗರ, ಕೆಆರ್‌ಎಸ್ ರಸ್ತೆಯ ಶ್ಯಾದನಹಳ್ಳಿ ಸಮೀಪದ ಚಾಮುಂಡೇಶ್ವರಿ ಬಡಾವಣೆ ಸೇರಿದಂತೆ ಇನ್ನಿತರ ಪ್ರದೇಶಗಳಿಗೆ ಕಾವೇರಿ ನೀರು ಪೂರೈಕೆಯಾಗುತ್ತಿರುವುದು ದೊಡ್ಡ ಸಾಧನೆಯಾಗಿದೆ.



ಜಿ.ಟಿ.ದೇವೇಗೌಡರು ಜಿಪಂ ಅಧ್ಯಕ್ಷರಾಗಿದ್ದಾಗ ಗ್ರಾಮಗಳ ಸ್ಥಿತಿಗತಿಗಳನ್ನು ಅರಿಯಲು ಜಿಲ್ಲೆಯಾದ್ಯಂತ ಪ್ರವಾಸ ಮಾಡುತ್ತಿದ್ದರು. ಅದರಂತೆ ಹುಣಸೂರು ತಾಲ್ಲೂಕಿನಲ್ಲಿ ಪ್ರವಾಸ ಮಾಡುವಾಗ ಹುಣಸೂರು-ಹನಗೋಡು ಮಾರ್ಗ ಹಾಗೂ ಹುಣಸೂರು-ಮೈಸೂರು ಮಾರ್ಗದಲ್ಲಿ ಗಿಡಗಳನ್ನು ನೆಟ್ಟು ಬೆಳೆಸಬೇಕು ಎಂಬ ಆಲೋಚನೆ ಮೂಡಿದೆ. ಬರೀ ಆಲೋಚನೆಗೆ ಸೀಮಿತವಾಗದೆ ಅದನ್ನು ಕಾರ್ಯಗತಗೊಳಿಸಲು ಮುಂದಾದರು. ಮರು ದಿನವೇ ಅರಣ್ಯ ಇಲಾಖೆ, ಸಾಮಾಜಿಕ ಅರಣ್ಯವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಹುಣಸೂರು-ಹನಗೋಡು ಮಾರ್ಗ, ಮೈಸೂರು-ಹುಣಸೂರು ಮಾರ್ಗದಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಗಿಡಗಳನ್ನು ನೆಡುವ ಬಯಕೆ ವ್ಯಕ್ತಪಡಿಸಿದ್ದಾರೆ. ಅಂದಿನ ದಿನಕ್ಕೆ ಜಿಪಂ ಅಧ್ಯಕ್ಷರ ಸ್ಥಾನ ಓರ್ವ ಸಚಿವ ಸ್ಥಾನದಷ್ಟೇ ಪ್ರಭಾವಶಾಲಿಯಾಗಿದ್ದರಿಂದ ಅಧಿಕಾರಿಗಳು ಜಿಪಂ ಅಧ್ಯಕ್ಷರ ಆದೇಶ, ಸೂಚನೆಗಳನ್ನು ಪಾಲಿಸಬೇಕಾಗಿತ್ತು. ಅದರಂತೆ ಅಂದಿನ ಅಧಿಕಾರಿಗಳು ಜಿಪಂ ಅಧ್ಯಕ್ಷರಾಗಿದ್ದ ಜಿ.ಟಿ.ದೇವೇಗೌಡರ ಸೂಚನೆಯನ್ನು ಪಾಲಿಸಿ ಹುಣಸೂರು-ಹನಗೋಡು ಮಾರ್ಗ, ಮೈಸೂರು-ಹುಣಸೂರು ಮಾರ್ಗದಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಗಿಡಗಳನ್ನು ನೆಟ್ಟರು. ನಂತರ, ಜಿ.ಟಿ.ದೇವೇಗೌಡರು ನಿರ್ವಹಣೆ ಜವಾಬ್ದಾರಿಯನ್ನು ಹೊತ್ತಿದ್ದ ಸಾಮಾಜಿಕ ಅರಣ್ಯ ವಿಭಾಗದ ಸಿಬ್ಬಂದಿಗೆ ವಹಿಸಿದರಲ್ಲದೆ, ನಿರಂತರವಾಗಿ ನಿಗಾ ವಹಿಸಿ, ಪರಿಶೀಲನೆ ನಡೆಸಿ ಒಂದು ಗಿಡವೂ ಒಣಗದಂತೆ ನೋಡಿಕೊಂಡರು.

ಅಂದು ಜಿ.ಟಿ.ದೇವೇಗೌಡರು ವಹಿಸಿದ ಕಾಳಜಿಗೆ ಇಂದು ಹುಣಸೂರು-ಹನಗೋಡು ಮಾರ್ಗ, ಮೈಸೂರು-ಹುಣಸೂರು ಮಾರ್ಗದಲ್ಲಿ ಬೆಳೆದು ನಿಂತಿರುವ ಮರಗಳು ಸಾಕ್ಷಿಯಾಗಿವೆ. ಇಂದು ಈ ರಸ್ತೆಗಳಲ್ಲಿ ಸಂಚಾರ ಮಾಡಿದರೆ ಕಾಣುವ ಸುಂದರ ನೋಟ, ಆಹ್ಲಾದಕರ ವಾತಾವರಣ, ಮರಗಳಿಂದ ತೂರಿ ಬರುವ ತಂಪು ಗಾಳಿ ಮನಸ್ಸಿಗೆ ಮುದ ನೀಡುತ್ತದೆ. ಒಂದೇ ದಿನ 1 ಲಕ್ಷ ಸಸಿ ನೆಡುವ ಮಹಾತ್ಕಾರ್ಯ ಮಾಡಿದ್ದು, ಹತ್ತಾರು ಸಸಿಗಳನ್ನು ನೆಟ್ಟು ಬೆಳೆಸಲು ಹರಸಾಹಸಪಡುವ ಈ ಕಾಲದಲ್ಲಿ ಒಂದೇ ದಿನ ಒಂದು ಲಕ್ಷ ಗಿಡ ನೆಡುವ ಕೆಲಸ ಮಾಡಿದ ಜಿ.ಟಿ.ದೇವೇಗೌಡರು ಆ ಅವಿಸ್ಮರಣೀಯ ದಿನ ಇಂದಿಗೂ ಜನಮಾನಸದಲ್ಲಿ ಉಳಿಯುವಂತೆ ಮಾಡಿದ್ದಾರೆ.

ಶಾಲಾ ಆವರಣಗಳಲ್ಲೂ ಸಸಿ ನೆಡುವ ಕೆಲಸ



ಜಿ.ಟಿ.ದೇವೇಗೌಡರು ಸಹಕಾರ ಸಚಿವರಾಗಿದ್ದಾಗ ವಿಧಾನಸಭೆ ಸಭಾಧ್ಯಕ್ಷ ಕೆ.ಆರ್.ಪೇಟೆ ಕೃಷ್ಣ ಹಾಗೂ ಸಾಲುಮರದ ತಿಮ್ಮಕ್ಕ ಅವರನ್ನು ಆಹ್ವಾನಿಸಿ ಇಡೀ ಜಿಲ್ಲೆಯಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಅಂದು ಜಿಲ್ಲಾದ್ಯಂತ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉದ್ಯಾನವನಗಳು, ದೇವಸ್ಥಾನಗಳ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಹೀಗೆ ಒಂದೇ ದಿನ ನೆಟ್ಟ ಗಿಡಗಳ ಸಂಖ್ಯೆ ಒಂದು ಲಕ್ಷ ಅಂದು ಶಾಲೆ, ಕಾಲೇಜು, ಆಸ್ಪತ್ರೆಗಳ ಆವರಣದಲ್ಲಿ ನೆಟ್ಟ ಗಿಡಗಳು ಅಲ್ಲಿನ ವಾತಾವರಣವನ್ನೇ ಬದಲು ಮಾಡಿವೆ.

ಮಕ್ಕಳಿಗೆ ಪರಿಸರದ ಮೇಷ್ಟ್ರು



ಶಾಲಾ-ಕಾಲೇಜು ಸೇರಿದಂತೆ ಇನ್ನಿತರ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವ ಶಾಸಕ ಜಿ.ಟಿ.ದೇವೇಗೌಡರು ಮಕ್ಕಳಿಗೆ ಪರಿಸರದ ಬಗ್ಗೆ ಪಾಠ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ಪರಿಸರ ಸಂರಕ್ಷಣೆ ಬಗ್ಗೆ ಮಕ್ಕಳಿಗೆ ಹಿತವಚನ ಬೋಧಿಸುವ ಮೂಲಕ ಗಿಡ ನೆಡುವಂತೆ ಪ್ರೇರೇಪಿಸುತ್ತಿದ್ದಾರೆ. ಜಗತ್ತಿನಲ್ಲಿ ತಾಪಮಾನ, ಹವಾಮಾನ ವೈಪರೀತ್ಯಗಳಾಗುತ್ತಿರುವುದರಿಂದ ಸಮಸ್ಯೆಗಳು ಎದುರಾಗುತ್ತಿವೆ. ನಾವು ಅಭಿವೃದ್ಧಿ ಜತೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸಿಕೊಳ್ಳಬೇಕು. ಪರಿಸರ ಇಲ್ಲದೆ ನಾವು ಬದುಕಲು ಸಾಧ್ಯವಿಲ್ಲ ಎನ್ನುವುದನ್ನು ಮನುಷ್ಯ ಅರಿಯದಿದ್ದರೆ ಮುಂದೆ ಕಷ್ಟವಾಗಲಿದೆ. ಮಕ್ಕಳು ಪರಿಸರ ಸಂರಕ್ಷಣೆ ಮಾಡಬೇಕು. ಒಂದು ಮರವನ್ನು ಕಡಿದರೆ ಹತ್ತು ಮರಗಳನ್ನು ನೆಡಬೇಕು. ಮಳೆ, ಗಾಳಿ, ಬೆಳಕು ಸಿಗಬೇಕಾದರೆ ಪ್ರತಿಯೊಬ್ಬರೂ ಗಿಡಗಳನ್ನು ನೆಡಬೇಕು. ಬಡಾವಣೆಗಳಲ್ಲಿ ಗಿಡಗಳನ್ನು ಬೆಳೆಸಿ, ಪೋಷಿಸಬೇಕು. ಮರವಿದ್ದರೆ ಪ್ರಕೃತಿ ಉಳಿಯಲಿದೆ. ಹಾಗಾಗಿ, ಸಾರ್ವಜನಿಕರು ಹೆಚ್ಚು ಗಿಡಗಳನ್ನು ನೆಡಬೇಕು ಎಂಬ ವಿಚಾರಗಳನ್ನು ಸಾರ್ವಜನಿಕರು, ಮಕ್ಕಳಿಗೆ ಅವರುಗಳು ಗಿಡ ನೆಡುವಂತೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ತಮ್ಮ ಸುದೀರ್ಘ ಅನುಭವದ ಮೂಲಕ, ಹಳ್ಳಿಯ ಸೊಗಡಿನಲ್ಲಿ ಪರಿಸರ ಕಾಳಜಿ ಬಗ್ಗೆ ಪರಿಸರ ತಜ್ಞರಿಗಿಂತಲೂ ಉತ್ತಮವಾಗಿ ನೀತಿಪಾಠ ಹೇಳುವ ಜಿ.ಟಿ.ದೇವೇಗೌಡರ ಭಾಷಣಕ್ಕೆ ಮಾರು ಹೋಗಿರುವ ಮಕ್ಕಳು ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಟ್ಟು ಪೋಷಿಸುತ್ತಿರುವುದು ವಿಶೇಷವಾಗಿದೆ.

ಪರಿಸರ ಸಂರಕ್ಷಕ, ಕೆರೆಗಳಿಗೆ ನೀರುಣಿಸಿದ ಸಹಕಾರಿ ಚಿಂತಕ

ಕಳೆದ ಐದು ದಶಕಗಳಿಂದ ಶಾಸಕ ಜಿ.ಟಿ.ದೇವೇಗೌಡ ಅವರು ಪರಿಸರ ರಕ್ಷಣೆ, ಕೆರೆ ಸಂರಕ್ಷಣೆ ಬಗ್ಗೆ ಸದ್ದಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿಕೊಂಡು ಬಂದಿರುವ ಜಿ.ಟಿ.ದೇವೇಗೌಡರು ಪರಿಸರ ಪ್ರೇಮಿಯೂ ಆಗಿದ್ದಾರೆ. ಎರಡು ದಶಕಗಳ ಹಿಂದೆ ಈ ಪರಿಸರ ಪ್ರೇಮಿ ನೆಟ್ಟ ಗಿಡಗಳು ಇಂದು ದೊಡ್ಡ ಮರಗಳಾಗಿ ಜನರಿಗೆ ನೆರಳು ನೀಡುತ್ತಿವೆ. ಇದಕ್ಕೆ ಪ್ರಮುಖ ಕಾರಣಕರ್ತರು ಜಿ.ಟಿ.ದೇವೇಗೌಡ ಅವರು.

ಇತ್ತೀಚಿನ ದಿನಗಳಲ್ಲಿ ವಿಶ್ವ ಪರಿಸರ ದಿನಾಚರಣೆ ಬಂದರೆ ಒಂದು ಗಿಡ ನೆಟ್ಟು ಸುಮ್ಮನಾಗುವುದು ಅಥವಾ ಹತ್ತಾರು ಮಂದಿಗೆ ಸಸಿಗಳನ್ನು ವಿತರಿಸಿ ಪ್ರಚಾರ ಪಡೆಯುವ ಜನರೇ ಹೆಚ್ಚು. ಇಂತಹವರ ನಡುವೆ ಜಿ.ಟಿ.ದೇವೇಗೌಡ ಅವರು 20 ವರ್ಷಗಳ ಹಿಂದೆ ನೆಟ್ಟ ಸಸಿಗಳು ಇಂದು ಮರವಾಗಿ ಬೆಳೆದಿದ್ದು, ಪರಿಸರ ಪ್ರೇಮ ಎಂದರೆ ಬರಿ ಗಿಡ ನೆಟ್ಟು ಸುಮ್ಮನಾಗುವುದಲ್ಲ ಅವುಗಳನ್ನು ಪೋಷಿಸುವುದೂ ಮುಖ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಬತ್ತಿ ಹೋಗಿದ್ದ ಕೆರೆಗಳಿಗೂ ಜೀವಜಲ; ರೈತರಲ್ಲಿ ಹರ್ಷ: ಕನ್ನಂಬಾಡಿ ಕಟ್ಟೆಯ ಮಡಿಲಲ್ಲಿ ಇರುವ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕೆಲವು ಕೆರೆಗಳು ಹಲವು ವರ್ಷಗಳಿಂದ ಬತ್ತಿ ಹೋಗಿದ್ದವು. ಅಂತಹ ಕೆರೆಗಳಿಗೆ ಜೀವಜಲ ತುಂಬಿಸಬೇಕು ಎಂದು ಚಿಂತನೆ ಮಾಡಿದ ಶಾಸಕರು ಅದನ್ನು ಕಾರ್ಯಗತಗೊಳಿಸಿದ್ದರಿಂದ ಇಂದು ಆ ಭಾಗಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಳವಾಗಿ ರೈತರಲ್ಲಿ ಹರ್ಷವನ್ನುಂಟು ಮಾಡಿದೆ. ಆನಂದೂರು ಏತ ನೀರಾವರಿ ಯೋಜನೆಯಡಿ ರಟ್ನಹಳ್ಳಿ ಕೆರೆ, ಗೆಂಡೆಕೆರೆ, ಆನಂದೂರು ಕೊಪ್ಪಲು ಕೆರೆ, ರಾಮನಕಟ್ಟೆ, ದಡದಕಲ್ಲಹಳ್ಳಿ ಕೆರೆ, ಬಚ್ಚಲಗೆರೆ ಕೆರೆ, ಹೂವಿನಕೊಳ ಕೆರೆ, ಹೊನ್ನೆಕಟ್ಟೆ ಕೆರೆ, ಗೋಣಿಕಟ್ಟೆ ಕೆರೆ, ಊರ್ಚಿಕಟ್ಟೆ ಕೆರೆ, ಈರನಾಯಕನಕಟ್ಟೆ, ನಾಗನಹಳ್ಳಿ ಕೆರೆ, ಚನ್ನಿಕೆರೆ, ದಬ್ಬನಕಟ್ಟೆ, ಶೆಟ್ಟರ ಕಟ್ಟೆ, ಸಾಬರ ಕಟ್ಟೆ, ಹಳ್ಳದಕಲ್ಲಹಳ್ಳಿ ಕಟ್ಟೆ, ಗೆಸರನಹಳ್ಳಿ ಕೊಳ, ಗೌರಿ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಈರಪ್ಪನಕೊಪ್ಪಲು ಏತನೀರಾವರಿ ಯೋಜನೆಯಡಿ ಕರಕನಹಳ್ಳಿ ಕೆರೆ, ಈರಪ್ಪನಕೊಪ್ಪಲು ಕೆರೆ, ನಾಗವಾಲ ಕೆರೆ, ಹುಯಿಲಾಳು ಕೆರೆ, ಹುಯಿಲಾಳು ಕಟ್ಟೆ, ಬೊಮ್ಮೆನಹಳ್ಳಿ ಕೆರೆ, ಸಾಹುಕಾರಹುಂಡಿ ಕೆರೆ, ಸಾಹುಕಾರಹುಂಡಿ ಕಟ್ಟೆ, ಜೆಟ್ಟಿಹುಂಡಿ ಕೆರೆ, ಶಂಕರಪುರ ಹೊಸಹಳ್ಳಿ ಕೆರೆ, ದಾಸನಕೊಪ್ಪಲು ಕೆರೆ, ಮರಟಿಕ್ಯಾತನಹಳ್ಳಿ ಕೆರೆ, ಕೀರ್ಗಳ್ಳಿ ಕೆರೆ, ಅಯ್ಯಜಯ್ಯನಹುಂಡಿ ಕೆರೆ, ಲಿಂಗಾಂಬುಧಿ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಮೈದನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಮೈದನಹಳ್ಳಿ ಕೆರೆ, ಮೇಗಳಾಪುರ ಕೆರೆ, ಆನಂದೂರು ಕಟ್ಟೆ, ಯಚಲನಹಳ್ಳಿ ಕೆರೆ, ಚಿಕ್ಕನಹಳ್ಳಿ ಕೆರೆ, ಕೊಳದಕೆರೆ ಕಟ್ಟೆಗಳಿಗೆ ನೀರು ತುಂಬಿಸಲಾಗುತ್ತಿದೆ. ಇದರಿಂದಾಗಿ ಸಾವಿರಾರು ಎಕರೆ ಜಮೀನುಗಳಿಗೆ ನೀರು ಹರಿಸುವಂತಾಗಿದೆ. ಬತ್ತಿ ಹೋದ ಕೆಟ್ಟೆಗಳು ನಳನಳಸುತ್ತಿವೆ. ಗುಂಗ್ರಾಲ್ ಛತ್ರ, ಒಡೆಯರಕಟ್ಟೆಗೆ ನೀರು ತುಂಬಿದರೆ ಅನೇಕರಿಗೆ ಅನುಕೂಲವಾಗಲಿದೆ. ಮುಂದೆ ಈ ಯೋಜನೆಯನ್ನೂ ಕೈಗೆತ್ತಿಕೊಳ್ಳಲು ಜಿಟಿಡಿ ಮುಂದಾಗಿದ್ದಾರೆ.



ಕೃಷಿ ಅನುಭವವೇ ಹಸಿರುವನ ನಿರ್ಮಾಣಕ್ಕೆ ದಾರಿ

ಎರಡು ದಶಕಗಳ ಹಿಂದೆ ಮೈಸೂರು ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಸ್ಥಾನ ಅಲಂಕರಿಸಿದ ಜಿ.ಟಿ.ದೇವೇಗೌಡರು ಕೃಷಿ ಕ್ಷೇತ್ರದ ತಮ್ಮ ಅನುಭವವನ್ನು ಜಿಪಂ ಆಡಳಿತದಲ್ಲಿ ಬಳಸಿಕೊಂಡು ಪರಿಸರ ಕಾಳಜಿಗೆ ಮುಂದಾದರು. ಹಿಂದೆ ರೈತರು ತಮ್ಮ ಜಮೀನುಗಳಲ್ಲಿ ಸಸಿಗಳನ್ನು ನೆಟ್ಟು ನಿರ್ವಹಿಸಲು ಮುಂದಾದರೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಾಮಾಜಿಕ ಅರಣ್ಯ ವಿಭಾಗದಿಂದ ಸಸಿಗಳನ್ನು ಕೊಟ್ಟು, ಅವುಗಳ ನಿರ್ವಹಣೆಗೆ ಮೂರು ವರ್ಷಗಳ ಕಾಲ ಪ್ರೋತ್ಸಾಹ ದನ ನೀಡಲಾಗುತ್ತಿತ್ತು. ಈ ಯೋಜನೆಯಡಿ ರೈತರು ಸಸಿಗಳನ್ನೇನೋ ನೆಡುತ್ತಿದ್ದರು. ಆದರೆ ಅವುಗಳು ಮರಗಳಾಗುವ ಹಂತಕ್ಕೆ ಬರುವ ಹೊತ್ತಿಗೆ ಮುಂದಿನ ನಿರ್ವಹಣೆ ಮಾಡಲಾಗದೆ ಸುಮ್ಮನಾಗಿ ಬಿಡುತ್ತಿದ್ದರು. ಹಾಗಾಗಿ ಈ ಯೋಜನೆ ನಿರೀಕ್ಷಿತ ಫಲ ನೀಡಿರಲಿಲ್ಲ. ಇದನ್ನು ಮನಗಂಡಿದ್ದ ಜಿ.ಟಿ.ದೇವೇಗೌಡರು 3 ವರ್ಷಗಳ ಕಾಲ ನೀಡುತ್ತಿದ್ದ ಪ್ರೋತ್ಸಾಹ ಧನವನ್ನು ಆರು ವರ್ಷಗಳ ಕಾಲ ನೀಡಿದರೆ ಯೋಜನೆ ಸಫಲವಾಗುತ್ತದೆ ಎಂಬುದನ್ನು ಅಂದಿನ ಅರಣ್ಯ ಸಚಿವರಿಗೆ ಮನವರಿಕೆ ಮಾಡಿಕೊಟ್ಟು ಆರು ವರ್ಷಗಳ ಕಾಲ ರೈತರಿಗೆ ಪ್ರೋತ್ಸಾಹ ಧನ ಸಿಗುವಂತೆ ಮಾಡಿದ್ದರಿಂದ ಅಂದು ನೆಟ್ಟ ಸಸಿಗಳು ಮುಂದೆ ಮರಗಳಾಗಿ ರೈತರಿಗೆ ಅನುಕೂಲವಾಯಿತಲ್ಲದೆ. ಉತ್ತಮ ಪರಿಸರ ನಿರ್ಮಾಣವಾಗುವಂತಾಯಿತು.







ಪರಿಸರ ಪ್ರೇಮ ಎಂದರೆ ಬರಿ ಗಿಡಗಳನ್ನು ನೆಡುವುದಷ್ಟೇ ಅಲ್ಲ ಎಂಬುದನ್ನು ಮನಗಂಡಿದ್ದ ಜಿ.ಟಿ.ದೇವೇಗೌಡರು ಮುಚ್ಚಿಹೋಗಿರುವ ಕೆರೆಕಟ್ಟೆಗಳನ್ನು ಸಂರಕ್ಷಿಸುವ ಮನಸ್ಸು ಮಾಡಿದರು. ಅದರಂತೆ ಗ್ರಾಮೀಣ ಪ್ರದೇಶಗಳಲ್ಲಿ ಮುಚ್ಚಿಹೋಗಿದ್ದ ಕೆರೆ-ಕಟ್ಟೆಗಳಿಗೆ ಮರುಜೀವ ನೀಡಿದ್ದರಿಂದ ಬಹಳಷ್ಟು ಕೆರೆಗಳಲ್ಲಿ ನೀರು ತುಂಬಿ ನಳನಳಿಸುತ್ತಿವೆ. ಅಲ್ಲದೆ ಅಂತರ್ಜಲ ಹೆಚ್ಚಳವಾಗಿರುವುದರಿಂದ ಆ ಭಾಗದ ರೈತರು ನೆಮ್ಮದಿಯಾಗಿ ಬದುಕುವಂತಾಗಿದೆ. ಹುಟ್ಟು ರೈತ ಕುಟುಂಬದಿಂದ ಬಂದ ಜಿ.ಟಿ.ದೇವೇಗೌಡರು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿದರು.

ತಮ್ಮ ಜಮೀನಿನಲ್ಲಿ ಎಲ್ಲ ರೀತಿಯ ಬೆಳೆಗಳನ್ನೂ ಬೆಳೆಯುತ್ತಿದ್ದ ಜಿ.ಟಿ.ದೇವೇಗೌಡರನ್ನು ಗುರುತಿಸಿ ಪ್ರಗತಿಪರ ರೈತ ಎನ್ನುವ ಬಿರುದು ನೀಡಲಾಗಿತ್ತು. ಕೃಷಿ ಬಗ್ಗೆ ಬಹಳಷ್ಟು ತಿಳುವಳಿಕೆ ಹೊಂದಿದ್ದ ಜಿಟಿಡಿ ತನ್ನಂತೆಯೇ ಇತರ ರೈತರು ಕೃಷಿಯಲ್ಲಿ ಮುಂದೆ ಬರಲು ಅನುಕೂಲ ಕಲ್ಪಿಸಬೇಕೆಂದು ಕೃಷಿಗೆ ಪೂರಕವಾದ ಸಹಕಾರ ಕ್ಷೇತ್ರವನ್ನು ಪ್ರವೇಶಿಸಿದರು. ಗುಂಗ್ರಾಲ್ ಛತ್ರದ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಲೇ ಜನರೊಂದಿಗೆ ಬೆರೆತು ಹೆಸರು ಮಾಡಿದವರು. ಊರಿಂದ ಊರಿಗೆ ತಮ್ಮ ಜನಪ್ರಿಯತೆಯನ್ನು ಹೆಚ್ಚು ಮಾಡಿಕೊಂಡರು. ಸಹಕಾರ ಕ್ಷೇತ್ರದಲ್ಲಿ ಗ್ರಾಮ ಮಟ್ಟದಿಂದ ಮೈಸೂರು ತಾಲ್ಲೂಕು ಮಟ್ಟಕ್ಕೆ ಪ್ರವೇಶ ಮಾಡಿದ ಜಿ.ಟಿ.ದೇವೇಗೌಡರು ಹಂತ ಹಂತವಾಗಿ ರಾಜಕೀಯದಲ್ಲಿ ಮೇಲುಸ್ತರಕ್ಕೆ ಏರಿದರು.

ಮೈಸೂರು ವಿವಿ ಆವರಣದಲ್ಲಿ ಸಂಸದರ ಕ್ರೀಡೋತ್ಸವ

ಕಿಡ್ಸ್ ಸೈಕ್ಲೋಥಾನ್‌ನಲ್ಲಿ ಕ್ರೀಡಾ ಸ್ಫೂರ್ತಿ ಮೆರೆದ ಮಕ್ಕಳು

ಮೈಸೂರು,ನ.24(ಎಂಟಿವೈ)-ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಿದ್ದ ಮಕ್ಕಳ ಸೈಕ್ಲೋಥಾನ್‌ನಲ್ಲಿ 6ರಿಂದ 8 ವರ್ಷದೊಳಗಿನ 150ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡು ಗಮನ ಸೆಳೆದರು.

ಸಂಸದರ ಕ್ರೀಡೋತ್ಸವ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ, ಮೈಸೂರು ಜಿಲ್ಲಾ ಅಮೆ ಚೂರ್ ಸೈಕ್ಲಿಂಗ್ ಅಸೋಸಿಯೇಷನ್ ಸಹ ಯೋಗದಲ್ಲಿ ಮಾನಸಗಂಗೋತ್ರಿ ಕ್ಯಾಂಪಸ್ ನಲ್ಲಿ ಆಯೋಜಿಸಿದ್ದ ಕಿಡ್ಸ್ ಸೈಕ್ಲೊಥಾನ್ ಸ್ಪರ್ಧೆ 6 ವರ್ಷ, 8 ವರ್ಷ ಒಳಪಟ್ಟವರ ಬಾಲಕ ಮತ್ತು ಬಾಲಕಿಯರ ವಿಭಾಗ, 10 ವರ್ಷ ಮತ್ತು 12 ವರ್ಷ ಒಳಪಟ್ಟ ಬಾಲಕ-ಬಾಲಕಿಯರಿಗಾಗಿ ಪ್ರತ್ಯೇಕ ನಾಲ್ಕು ವಿಭಾಗಗಳಲ್ಲಿ ಸ್ಪರ್ಧೆ ನಡೆಸ ಲಾಯಿತು. ಮಕ್ಕಳು ಹೆಲ್ಮೆಟ್ ಧರಿಸಿ ಸೈಕ್ಲೋಥಾನ್‌ನಲ್ಲಿ ಪಾಲ್ಗೊಂಡು ಕ್ರೀಡಾ ಸ್ಫೂರ್ತಿ ಪ್ರದರ್ಶಿಸಿದರು.

ಇದಕ್ಕೂ ಮುನ್ನ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಕ್ಕಳ ಸೈಕ್ಲೋಥಾನ್‌ಗೆ ಚಾಲನೆ ನೀಡಿ ಮಾತ ನಾಡಿ, ದೇಶದ ನಾಗರಿಕರು ಆರೋಗ್ಯ ವಾಗಿರಬೇಕೆಂಬ ಉದ್ದೇಶದಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಫಿಟ್ ಇಂಡಿಯಾ ಅಭಿಯಾನ ಆರಂಭಿಸಿದ್ದು, ಮೈಸೂರಲ್ಲಿ ಸಂಸದರ ಕ್ರೀಡೋತ್ಸವದ ಮೂಲಕ ಈಗಾಗಲೇ ವಿವಿಧ ಕ್ರೀಡಾ ಚಟುವಟಿಕೆ ನಡೆಸಲಾಗಿದೆ. ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಇಂದು ಮಕ್ಕಳಿಗಾಗಿ ಸೈಕ್ಲೋಥಾನ್ ಆಯೋಜಿಸಲಾಗಿದೆ. ವಿವಿಧ ವಯೋಮಾನದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿರುವುದು ಶ್ಲಾಘನೀಯ ಎಂದರು.

ಫಿಟ್ ಇಂಡಿಯಾ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಅಭಿಯಾನ. ಆರೋಗ್ಯ ಕಾಪಾಡಿಕೊಳ್ಳುವ ಜಾಗೃತಿ ಮೂಡಿಸುವ ಉದ್ದೇಶದಿಂದ ಫಿಟ್ ಇಂಡಿಯಾ ಕಾರ್ಯಕ್ರಮದಡಿ ವಿವಿಧ ಕ್ರೀಡಾ ಚಟುವಟಿಕೆ ನಡೆಸಲಾಗುತ್ತಿದೆ. ಮಕ್ಕಳಿಗೆ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪೋಷಕರು ಉತ್ತೇಜನ ನೀಡಬೇಕು. ಆಗ ಮಾತ್ರ ಮಕ್ಕಳ ಆರೋಗ್ಯ ಕಾಪಾಡಿಕೊಳ್ಳುವು ದಲ್ಲದೆ, ಭವಿಷ್ಯದಲ್ಲಿ ವಿವಿಧ ಕ್ರೀಡೆಗಳಲ್ಲಿ ವಿಶ್ವಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯ. ಸೈಕ್ಲಿಂಗ್ ಸ್ಪರ್ಧೆಯಲ್ಲಿ ಅಗಾಧ ಅವಕಾಶ ವಿದೆ. ಈ ಹಿನ್ನೆಲೆಯಲ್ಲಿ ಇಂದು ಮಕ್ಕಳ ಸೈಕ್ಲೋಥಾನ್ ಏರ್ಪಡಿಸಲಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಸಂಸದರ ಕ್ರೀಡೋತ್ಸವದಲ್ಲಿ ಹಗ್ಗ ಜಗ್ಗಾಟ ಸ್ಪರ್ಧೆ ಆಯೋಜಿಸಲು ಉದ್ದೇಶಿಸಲಾಗಿದೆ. ರಾಜರ ಕಾಲದಿಂದಲೂ ಮೈಸೂರು ಕುಸ್ತಿಗೆ ಹೆಸರು ವಾಸಿಯಾಗಿರುವುದರಿಂದ ಕುಸ್ತಿ ಪಂದ್ಯಾ ವಳಿ, ಕೊಡಗಿನಲ್ಲಿ ಹಾಕಿ ಮತ್ತು ವಾಲಿಬಾಲ್ ಕ್ರೀಡಾಕೂಟ ಆಯೋಜಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಮಕ್ಕಳ ಸೈಕ್ಲೋಥಾನ್‌ನ ನಾಲ್ಕು ವಿಭಾಗಗಳಲ್ಲಿ ವಿಜೇತರಾದ ತಲಾ ಮೂವರಿಗೆ ಸ್ಮರಣಿಕೆ, ಪ್ರಶಸ್ತಿ ಪತ್ರ ವಿತರಿಸಲಾಯಿತು. ಸೈಕ್ಲಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡ ಎಲ್ಲರಿಗೂ ಪ್ರಮಾಣ ಪತ್ರ ವನ್ನೂ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಡಾ.ಶುಶ್ರೂತ್‌ಗೌಡ, ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿ ಯೇಷನ್ ಕಾರ್ಯದರ್ಶಿ ಎನ್.ಲೋಕೇಶ್, ಜಿಲ್ಲಾ ಸೈಕ್ಲಿಂಗ್ ತರ ಬೇತುದಾರರು ಫರಿಯಾಲ್ ಜಮೇ ದಾರ್, ಗೌರವಾಧ್ಯಕ್ಷ ರಮೇಶ್ ನರಸಯ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ವಿಶ್ವ ವಿದ್ಯಾನಿಲಯದ ಆವರಣದಲ್ಲಿ ಮಕ್ಕಳ ದಿನಾಚರಣೆ ಹಾಗೂ ಸಂಸದರ ಕ್ರೀಡೋತ್ಸವದ ಅಂಗವಾಗಿ ಆಯೋಜಿಸಿದ್ದ ಮಕ್ಕಳ ಸೈಕ್ಲೋಥಾನ್‌ಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಸೈಕ್ಲೋಥಾನ್‌ನ ವಿಜೇತರು

ಬಾಲಕಿಯರ 6 ವರ್ಷದೊಳಗಿನ ಸ್ಪರ್ಧೆಯಲ್ಲಿ ಲಹರಿ (ಪ್ರಥಮ), ಖುಶಿ ಚೇತನ್ (ದ್ವಿತೀಯ), ಆನ್ಯಾ (ತೃತೀಯ), **8 ವರ್ಷದೊಳಗಿನ ವಿಭಾಗ:** ಚಾವಿ ರಾವ್ (ಪ್ರಥಮ), ವೆಂಬಾ ಪ್ರಕಾಶ್ (ದ್ವಿತೀಯ), ದಿಯಾ ಸೋಲಾಂಕಿ (ತೃತೀಯ), **10 ವರ್ಷದೊಳಗಿನ ವಿಭಾಗ:** ಕೆ.ಡಿ. ತಾಶಿ (ಪ್ರ), ನೈಜಶ್ರೀ (ದ್ವಿ), ಪೆಹಾಲ್ ಜೈನ್ (ತೃ), **12 ವರ್ಷದೊಳಗಿನ ವಿಭಾಗ:** ಇಮಯಾ ಪ್ರಕಾಶ್ (ಪ್ರ), ಆರ್ಕಾಸಿವೀಜ್ (ದ್ವಿ), ಎಂ. ಚಾರ್ವಿ (ತೃ), **ಬಾಲಕರ ವಿಭಾಗ 6 ವರ್ಷದೊಳಗಿನ ವಿಭಾಗ:** ಸ್ಕಂದಾ ಕೌಶಿಕ್ (ಪ್ರ),ಆರ್ಯನ್ ಸೂರ್ಯ (ದ್ವಿ), ಸಯ್ಯದ್ ಜುಹಾರುದ್ದಿನ್ ಖಿಲ್ಜಿ (ತೃ), **8 ವರ್ಷದೊಳಗಿನ ವಿಭಾಗ::** ಮೊಹಮ್ಮದ್ ಮೆಹ್ರಾನ್ (ಪ್ರ), ರಿಶಾಂಕ್ (ದ್ವಿ), ಸಯ್ಯದ್ ಜೈದುದ್ದೀನ್ ಖಿಲ್ಜಿ (ತೃ), **10 ವರ್ಷದೊಳಗಿನ ವಿಭಾಗ:** ರಿಶಬ್ ಕಾಂಡಾಗಾಲೆ (ಪ್ರ), ವಿಹಾನ್ ಮಂದಣ್ಣ (ದ್ವಿ), ಸವಿಯೊ ಪೌಲ್ (ತೃ), **12 ವರ್ಷದೊಳಗಿನ ವಿಭಾಗ:** ಜಸ್ಮಿತ್ ಯಶವಂತ್ ಪವಾರ್ (ಪ್ರ), ಜಿ. ಮೋಹಿತ್ ಪ್ರಸಾದ್ (ದ್ವಿ), ಗ್ಯಾನ್ ಗಣಪತಿ (ತೃ)

ಶಾಸಕ ಹರೀಶ್‌ಗೌಡರ ತಾಯಿ-ತಂದೆ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್‌ನಿಂದ 300 ಮಕ್ಕಳಿಗೆ ಇಂದು ಉಚಿತ ಲ್ಯಾಪ್‌ಟಾಪ್ ವಿತರಣೆ

ಮೈಸೂರು, ನ.24- ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರು ತಂದೆ-ತಾಯಿ ಹೆಸರಿನಲ್ಲಿ ಸ್ಥಾಪಿಸಿರುವ 'ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್' ಉದ್ಘಾಟನೆ ಹಾಗೂ ಟ್ರಸ್ಟ್‌ನ ಚೊಚ್ಚಲ ಸೇವಾಕಾರ್ಯ ಸಮಾರಂಭವನ್ನು ಕಲಾಮಂದಿರದಲ್ಲಿ ಮಂಗಳವಾರ(ನ.25) ಮಧ್ಯಾಹ್ನ 3ಕ್ಕೆ ಆಯೋಜಿಸಲಾಗಿದೆ.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಸಾನಿಧ್ಯದಲ್ಲಿ ನೆರವೇರಲಿರುವ ಕಾರ್ಯಕ್ರಮದಲ್ಲಿ ಟ್ರಸ್ಟ್ ವತಿಯಿಂದ ಸುಮಾರು 300 ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸಲಾಗುವುದು. ಸಚಿವರು, ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.



ಶ್ರೀಮತಿ ಯಶೋಧ, ಶ್ರೀ ಕೃಷ್ಣ



ಹರೀಶ್‌ಗೌಡ

ಕನಸು ನನಸಾಗುತ್ತಿದೆ: ಹಲವು ವರ್ಷಗಳಿಂದ ವಿವಿಧ ರೀತಿಯಲ್ಲಿ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದು, ಶಾಸಕನಾಗಿ ಆಯ್ಕೆ ಮಾಡುವ ಮೂಲಕ ಇನ್ನೂ ಹೆಚ್ಚಿನ ಸೇವೆಗೆ ಅವಕಾಶ ಮಾಡಿಕೊಟ್ಟಿರುವ ಜನತೆಗೆ ಸದಾ ಕೃತಜ್ಞನಾಗಿರುತ್ತೇನೆ. ಶಿಕ್ಷಣ ವೈದ್ಯಕೀಯ ಚಿಕಿತ್ಸೆ, ಕ್ರೀಡೆ, ಧಾರ್ಮಿಕ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೈಯಕ್ತಿಕ ನೆರವು ನೀಡುತ್ತಾ ಬಂದಿದ್ದು, ನನ್ನ ತಾಯಿ ಶ್ರೀಮತಿ ಯಶೋಧ ಹಾಗೂ ತಂದೆ ಕೃಷ್ಣ ಅವರ ಹೆಸರಿನ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಿ, ಆ ಮುಖಾಂತರ ಸೇವಾಕಾರ್ಯ ಮುಂದುವರೆಸಬೇಕೆಂಬ ದೀರ್ಘ ಕಾಲದ ಕನಸು ಈಗ ನನಸಾಗಿದೆ. ಟ್ರಸ್ಟ್ ಉದ್ಘಾಟನೆ ಭಾಗವಾಗಿ ಬಿಇ, ಬಿಸಿಎ, ಎಂಸಿಎ ಸೇರಿದಂತೆ ಉನ್ನತ ಶಿಕ್ಷಣ ಪಡೆಯುತ್ತಿರುವ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿ ಗಳಿಗೆ ಆದಿಚುಂಚನಗಿರಿ ಶ್ರೀಗಳ ಅಮೃತ ಹಸ್ತದಿಂದ ಲ್ಯಾಪ್‌ಟಾಪ್ ವಿತರಿಸಲಾಗುತ್ತಿದೆ. ಈ ವೇಳೆ ಹಿತೈಷಿಗಳು ಉಪಸ್ಥಿತರಿದ್ದು, ಸಾಮಾಜಿಕ ಸೇವಾ ಕಾರ್ಯಗಳನ್ನು ಮುಂದುವರೆಸಲು ಆಶೀರ್ವದಿಸಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಮನವಿ ಮಾಡಿದ್ದಾರೆ.


75 ನೇ
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರಾದ
ಶ್ರೀ ಜಿ.ಟಿ.ದೇವೇಗೌಡ ರವರಿಗೆ
ಜನ್ಮದಿನದ ಶುಭಾಶಯಗಳು
VISMAYA
8050302424

ಮೈಸೂರು ಮಿತ್ರ ಮಂಗಳವಾರ 25 ನವೆಂಬರ್ 2025

ಖಾಸಗಿ ಬ್ಯಾಂಕ್ ಗ್ರಾಹಕರ ಖಾತೆಯಿಂದ ದಿಢೀರ್ 1.92 ಲಕ್ಷ ಅಕ್ರಮ ವರ್ಗಾವಣೆ!

ಮೈಸೂರು, ನ.24– ಖಾಸಗಿ ಬ್ಯಾಂಕ್‌ನ ಗ್ರಾಹಕರೊಬ್ಬರ ಖಾತೆಯಿಂದ ಅಪರಿಚಿತರ ಖಾತೆಗೆ ಕೇವಲ ಅರ್ಧ ಗಂಟೆ ಅವಧಿಯಲ್ಲಿ 1.92 ಲಕ್ಷ ರೂ. ವರ್ಗಾವಣೆ ಆಗಿರುವುದಾಗಿ ನಗರದ ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಖಾಸಗಿ ಬ್ಯಾಂಕ್‌ವೊಂದರಲ್ಲಿ ಖಾತೆ ಹೊಂದಿರುವ ಹೆಬ್ಬಾಳು ನಿವಾಸಿ, ಈ ಸಂಬಂಧ ದೂರು ನೀಡಿದ್ದು, ಕಿಶೋರ್ ಹೆಸರಿನ ಅಪರಿಚಿತ ವ್ಯಕ್ತಿಗೆ ಹಣ ವರ್ಗಾವಣೆ ಆಗಿರುವ ಸಂದೇಶ ಬಂದಿರುವುದಾಗಿ ತಿಳಿಸಿದ್ದಾರೆ.

ನ.22ರಂದು ಮೊಬೈಲ್‌ಗೆ ಕರೆ ಮಾಡಿದ ವ್ಯಕ್ತಿ, ನನ್ನ ಕ್ರೆಡಿಟ್ ಕಾರ್ಡ್ ಮಾಹಿತಿ ಕೇಳಿದ್ದ. ಆದರೆ ಇಂತಹ ಮೋಸದ ಜಾಲದ ಬಗ್ಗೆ ತಿಳಿದಿದ್ದರಿಂದ ಯಾವುದೇ ಮಾಹಿತಿ ನೀಡದೆ ಸಂಪರ್ಕ ಕಡಿತಗೊಳಿಸಿದೆ. ನಂತರ ಹಲವು ಬಾರಿ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ಹಾಗೆಯೇ ನ.23ರಂದು ಬೆಳಗ್ಗೆಯೂ ಕರೆ ಬಂದಿತ್ತಾದರೂ ನಾನು ಉತ್ತರಿಸಲಿಲ್ಲ. ಆದರೂ ಅಂದು ಮಧ್ಯಾಹ್ನ 1.40ರ ವೇಳೆಗೆ ತಮ್ಮ ಖಾತೆಯಿಂದ 26 ಸಾವಿರ ರೂ. ಕಿಶೋರ್ ಹೆಸರಿನ ಖಾತೆಗೆ ವರ್ಗಾವಣೆ ಆಗಿರುವುದಾಗಿ ಸಂದೇಶ ಬಂದಿತು. ಇದಾಗಿ ನಾಲ್ಕು ನಿಮಿಷದ ನಂತರ 3 ರೂ. ಕಡಿತಗೊಂಡಿತು. ಹೀಗೆ ಮಧ್ಯಾಹ್ನ 2.07ರವರೆಗೆ ಆರೇಳು ಬಾರಿ ಒಟ್ಟು 1,92,880 ರೂ. ನನ್ನ ಖಾತೆಯಿಂದ ಕಡಿತಗೊಂಡಿತು. ಈ ಸಂದರ್ಭದಲ್ಲಿ ನನ್ನ ಮೊಬೈಲ್‌ಗೆ ಓಟಿಪಿ ಹಾಗೂ ಹಣ ಕಡಿತವಾದ ಮೆಸೇಜ್‌ಗಳು ಬರುತ್ತಿದ್ದವು. ಓಟಿಪಿ ಸೇರಿದಂತೆ ಯಾವುದೇ ಮಾಹಿತಿ ಹಂಚಿಕೊಳ್ಳದಿದ್ದರೂ ಹಣ ಕಡಿತಗೊಂಡಿದ್ದರಿಂದ ಕೂಡಲೇ ಬ್ಯಾಂಕ್ ಗ್ರಾಹಕ ಸೇವೆಗೆ ಕರೆ ಮಾಡಿ ಖಾತೆಯನ್ನು ಬ್ಲಾಕ್ ಮಾಡಿಸಿದೆ ಎಂದು ವಂಚನೆಗೊಳಗಾದ ವ್ಯಕ್ತಿ, ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ.

ಕಾಂಗ್ರೆಸ್ ಶಾಸಕರನ್ನ ಅವರೇ ಖರೀದಿ ಮಾಡುತ್ತಿದ್ದಾರೆ!

ಒಬ್ಬರಿಗೆ 100 ಕೋಟಿ ಆಫರ್, ಕಾರು, ಫ್ಲ್ಯಾಟು ಗಿಫ್ಟ್: ವಿಪಕ್ಷ ನಾಯಕ ಆರ್. ಅಶೋಕ್ ಆರೋಪ

ಬೆಂಗಳೂರು, ನ.24–ಕಾಂಗ್ರೆಸ್‌ನಲ್ಲಿ ಅವರ ಶಾಸಕರನ್ನು ಅವರೇ ಖರೀದಿ ಮಾಡುತ್ತಿದ್ದಾರೆ. ಇದು ಕಾಂಗ್ರೆಸ್ ಸರ್ಕಾರನಾ ಅಥವಾ ಸಮ್ಮಿಶ್ರ ಸರ್ಕಾರನಾ ಎಂದ ಅನುಮಾನ ಮೂಡುತ್ತಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಕಳವಳ ವ್ಯಕ್ತಪಡಿಸಿದರು.



ಶಾಸಕರ ಖರೀದಿಗೆ 100 ಕೋಟಿ ಆಫರ್ ಕೊಡಲಾಗಿದ್ದು, ಕಾರು, ಫ್ಲ್ಯಾಟು ಗಿಫ್ಟ್ ನೀಡಲಾಗುತ್ತಿದೆ. 100 ವರ್ಷಗಳಿಗೂ ಹೆಚ್ಚು ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷದಲ್ಲಿ ಅವರ ಶಾಸಕರನ್ನು ಅವರೇ ಖರೀದಿ ಮಾಡುವ ಕೆಟ್ಟ ವ್ಯವಸ್ಥೆ ಹಿಂದೆಂದೂ ಕಂಡಿರಲಿಲ್ಲ. ಈಗ 100 ಕೋಟಿ ರೂಪಾಯಿವರೆಗೆ ಕುದುರೆ ವ್ಯಾಪಾರ ನಡೆಯುತ್ತಿದೆ ಎಂದು ಅವರು ಕಿಡಿ ಕಾರಿದರು.

ರಾಜ್ಯ ಕಾಂಗ್ರೆಸ್ಸಿನಲ್ಲಿ ಅಧಿಕಾರ ಹಂಚಿಕೆಯ ಗೊಂದಲ ತೀವ್ರ ಸ್ವರೂಪ ಪಡೆದುಕೊಂಡಿದ್ದು, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು, ಪ್ರಸ್ತುತ ಸರ್ಕಾರ ಶೇ. 60 ರಷ್ಟು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದ್ದಾರೆ.

ಕಳೆದ ಎರಡು ವರ್ಷಗಳಿಂದ ಅಧಿಕಾರ ಮತ್ತು ಸಿಎಂ ಕುರ್ಚಿಗಾಗಿ ಜಗಳ ನಡೆಯುತ್ತಿದೆ. ಸಿಎಂ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರಕ್ಕಾಗಿ ಹೋರಾಟ ನಡೆಯುತ್ತಿರುವುದರಿಂದ ಶಾಸಕರ ಖರೀದಿ ನಡೆಯುತ್ತಿದೆ ಎಂದು ವರದಿಗಳಿವೆ ಎಂದು ಆರ್. ಅಶೋಕ್ ಹೇಳಿದರು. ರಾಜ್ಯ ಸರ್ಕಾರವು ಪ್ರತಿಯೊಂದು ವ್ಯವಹಾರ ನಡೆಸಲು ಶೇ.60 ರಷ್ಟು ಲಂಚ ಸಂಗ್ರಹಿಸುತ್ತಿದೆ. ಈ ಸರ್ಕಾರ ತೊಲಗಬೇಕು ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಯಾವುದೇ ಅಧಿಕಾರವಿಲ್ಲ. ಸೋನಿಯಾ ಗಾಂಧಿಯವರ ಬಳಿ ಮಾತ್ರ ಅಧಿಕಾರ ಇದೇ. ಎಐಸಿಸಿ ಅಧ್ಯಕ್ಷರ ಬಳಿ ಯಾವುದೇ ಅಧಿಕಾರವಿಲ್ಲ. ಖರ್ಗೆ ಅವರು ತಾವು ಅಧ್ಯಕ್ಷ ಅನ್ನೋದನ್ನೇ ಮರೆತಿದ್ದಾರೆ. ಹೆಸರಿಗೆ ಮಾತ್ರ ಅವರು ಅಧ್ಯಕ್ಷರು, ಅವರ ಕೀ ಇರೋದು ಗಾಂಧಿ ಫ್ಯಾಮಿಲಿ ಬಳಿ ಎಂದು ವ್ಯಂಗ್ಯವಾಡಿದರು.

ಸ್ವಾಮಿ ವಿವೇಕಾನಂದರ ಜೀವನ-ಸಂದೇಶ ಅನಾವರಣಗೊಳಿಸಿದ

‘ವಿವೇಕ ಗಾಥೆ’ ವಿನೂತನ ಕಾರ್ಯಕ್ರಮದೊಂದಿಗೆ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸಮಾರಂಭ ಸಂಪನ್ನ

ಸ್ವಾಮಿ ವಿವೇಕಾನಂದರು ಆಧುನಿಕ ವಿಜ್ಞಾನಿಯೂ ಹೌದು ; ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ


ಮೈಸೂರು,ನ.24(ಪಿಎಂ)–ಗಾಯನ, ಸಂಗೀತ, ನಾಟಕ, ನೃತ್ಯರೂಪಕ ಹಾಗೂ ಎಐ ತಂತ್ರಜ್ಞಾನದ ದೃಶ್ಯಾವಳಿಗಳ ಮೂಲಕ ಸ್ವಾಮಿ ವಿವೇಕಾನಂದರ ಜೀವನ ಹಾಗೂ ಸಂದೇಶ ಅನಾವರಣಗೊಳಿಸಿದ ‘ವಿವೇಕ ಗಾಥೆ’ ಎಂಬ ವಿನೂತನ ಕಾರ್ಯಕ್ರಮದ ಮೂಲಕ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವ ಆಚರಣೆ ಸೋಮವಾರ ಸಂಜೆ ಸಂಪನ್ನಗೊಂಡಿತು.

ಆಶ್ರಮದ ಶತಮಾನೋತ್ಸವ (1925–2025), ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ ಹಾಗೂ ವಿವೇಕಪ್ರಭ ಮಾಸ ಪತ್ರಿಕೆಯ ರಜತ ಮಹೋತ್ಸವ ಪ್ರಯುಕ್ತ ಆಶ್ರಮ ಹಾಗೂ ಶ್ರೀರಾಮಕೃಷ್ಣ ವಿದ್ಯಾಶಾಲಾ ಆವರಣದಲ್ಲಿ ನಾಲ್ಕು ದಿನಗಳ ಕಾಲ ವೈವಿಧ್ಯಮಯ ಕಾರ್ಯಕ್ರಮಗಳು ನಡೆದವು.

ಅಂತೆಯೇ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದ ಕ್ರೀಡಾಂಗಣದಲ್ಲಿ ಇಂದು ಸಂಜೆ ‘ವಿವೇಕ ಗಾಥೆ’ ಶೀರ್ಷಿಕೆಯ ಸ್ವಾಮಿ ವಿವೇಕಾನಂದರ ಜೀವನ–ಸಂದೇಶವನ್ನಾಧರಿಸಿದ ಬಹುಮಾಧ್ಯಮ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಶತಮಾನೋತ್ಸವಕ್ಕೆ ತೆರೆ ಬಿದ್ದಿತು. ಕಾರ್ತಿಕ್ ಸರಗೂರು ಅವರ ಪರಿಕಲ್ಪನೆ–ನಿರ್ದೇಶನ ಮತ್ತು ಪ್ರವೀಣ್ ಡಿ.ರಾವ್ ಅವರ ಸಂಗೀತ ನಿರ್ದೇಶನದಲ್ಲಿ ‘ವಿವೇಕ ಗಾಥೆ’ ಪ್ರದರ್ಶನಗೊಂಡಿತು.

ಗಾಯಕರು, ನೃತ್ಯ ಕಲಾವಿದರು ಸೇರಿದಂತೆ ಸುಮಾರು 50ಕ್ಕೂ ಹೆಚ್ಚು ಕಲಾವಿದರು ‘ವಿವೇಕ ಗಾಥೆ’ ವಿನೂತನ ಕಾರ್ಯಕ್ರಮದ ಮೂಲಕ ಸ್ವಾಮಿ ವಿವೇಕಾನಂದರ ಮೇರು ವ್ಯಕ್ತಿತ್ವವನ್ನು ಅನಾವರಣಗೊಳಿಸಿದರು. ವಿವೇಕಾನಂದರ ಮೈಸೂರು ಭೇಟಿ ಸೇರಿದಂತೆ ಅವರ ಇಡೀ ಜೀವನ ಹಾಗೂ ಸಂದೇಶವನ್ನು ಕೆಲವೇ ಗಂಟೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಯಶಸ್ವಿಯಾಯಿತು.





ವಿವೇಕ ಗಾಥೆ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರು ಅಂದಿನ ಮೈಸೂರು ಮಹಾರಾಜ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿದ್ದ ಸನ್ನಿವೇಶ ಅನಾವರಣಗೊಳಿಸಿದ್ದನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಸಭಾ ಕಾರ್ಯಕ್ರಮದಲ್ಲಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸ್ವಾಮಿ ಮುಕ್ತಿದಾನಂದಜೀ, ಸ್ವಾಮಿ ಯುಕ್ತೇಶಾನಂದಜೀ ಅವರು ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧೀಶರಾದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರು, ಸ್ವಾಮಿ ವಿವೇಕಾನಂದರು ಕೇವಲ ಒಬ್ಬ ಆಧುನಿಕ ಆಧ್ಯಾತ್ಮಿಕ ಸನ್ಯಾಸಿ ಅಷ್ಟೆಯಲ್ಲ, ಅವರೊಬ್ಬ ಆಧುನಿಕ ವಿಜ್ಞಾನಿಯೂ ಆಗಿದ್ದರು. ಇದು ಅವರ ಮಾತು, ತತ್ವಗಳಿಂದ ನಮಗೆ ಅರಿವಾಗುತ್ತದೆ. ಅಂತಹ ಮಹಾತ್ಮರನ್ನು ನಾವು ತಿಳಿದುಕೊಂಡಷ್ಟು ನಮ್ಮನ್ನು ನಾವು ತಿಳಿದುಕೊಳ್ಳುವಂತಹ ಪ್ರಜ್ಞೆ ಮೂಡುತ್ತದೆ ಎಂದು ಹೇಳಿದರು.

ವಿವೇಕ ಸ್ಮಾರಕಕ್ಕೆ ಕಾರಣಕರ್ತರು: ಮೈಸೂರಿನಲ್ಲಿ ವಿವೇಕ ಸ್ಮಾರಕ ಅಸ್ತಿತ್ವಕ್ಕೆ ಬರುತ್ತಿದ್ದು, ಇದಕ್ಕಾಗಿ ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜೀ ಅವರ ಶ್ರಮ, ಹೋರಾಟ ಏನೆಂಬುದು ಎಲ್ಲರಿಗೂ ಗೊತ್ತಿದೆ. ಅವರು ಅತ್ಯಂತ ಸಹನೆಯಿಂದ ವಿರೋಧಿಸುವವರು ಹಾಗೂ ಉತ್ತೇಜಿಸುವವರು ಸೇರಿದಂತೆ ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಮೂಲಕ ಸನ್ನಿವೇಶವನ್ನು ಸಮರ್ಥವಾಗಿ ನಿಭಾಯಿಸಿದ ಕಾರಣ, ಲೋಕಾರ್ಪಣೆಗೆ ಅಣಿಯಾಗುತ್ತಿರುವ ವಿವೇಕ ಸ್ಮಾರಕ ನಮ್ಮ ಕಣ್ಮುಂದೆ ಬರಲು ಸಾಧ್ಯವಾಗುತ್ತಿದೆ. ಅದಕ್ಕಾಗಿ ಪೂಜ್ಯರಿಗೆ ಧನ್ಯವಾದ ಹೇಳಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ, ಈ ‘ವಿವೇಕ ಗಾಥೆ’ ಕಾರ್ಯಕ್ರಮ ಮುಂಬರುವ ವಿವೇಕ ಸ್ಮಾರಕದ ಪ್ರತಿಬಿಂಬ. ವಿವೇಕಾನಂದರಿಂದ ನಾವು ಸ್ಫೂರ್ತಿ ಗೊಂಡು ನಮ್ಮ ದೇಶ ಮತ್ತು ಸಮಾಜದಲ್ಲಿ ಪರಿವರ್ತನೆ ತರಬೇಕೆಂಬುದು ಮುಖ್ಯ ಎಂದರು.

ಸ್ವಾಮಿ ಯುಕ್ತೇಶಾನಂದಜಿ ವೇದಿಕೆಯಲ್ಲಿದ್ದರು. ಆಶ್ರಮದ ನೂರಾರು ಸಾಧು–ಸನ್ಯಾಸಿಗಳು, ಅಪಾರ ಸಂಖ್ಯೆಯ ಸದ್ಭಕ್ತರು, ವಿದ್ಯಾರ್ಥಿಗಳು ಕಾರ್ಯಕ್ರಮ ವೀಕ್ಷಿಸಿದರು. ವಿಶ್ರಾಂತ ಕುಲಪತಿಗಳಾದ ಡಾ.ಕೆ.ಚಿದಾನಂದಗೌಡ, ಡಾ.ಜೆ.ಶಶಿಧರ ಪ್ರಸಾದ್, ಪ್ರೊ.ಜಿ.ಹೇಮಂತ ಕುಮಾರ್, ತಾರಿಣಿ ಚಿದಾನಂದ ಗೌಡ, ಸಾಹಿತಿ ಡಾ.ಸಿ.ನಾಗಣ್ಣ, ಆರ್‌ಎಸ್‌ಎಸ್ ಮುಖಂಡ ಎಂ.ವೆಂಕಟರಾಮು, ವಿಜಯವಿಠ್ಠಲ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವಾಸುದೇವ ಭಟ್, ರಾಮಕೃಷ್ಣ ವಿದ್ಯಾಶಾಲೆ ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಡಾ.ಸುಜಯ್ ಕುಮಾರ್, ಮಾಜಿ ಕಾರ್ಯದರ್ಶಿಗಳಾದ ಕೆ.ನರೇಂದ್ರ, ಎನ್.ಆರ್. ಅಶೋಕ್ ಮತ್ತಿತರರು ಹಾಜರಿದ್ದರು.

ವಧುವರರ ಸಮಾವೇಶಕ್ಕೆ ಉತ್ತಮ ಪ್ರತಿಕ್ರಿಯೆ


ಮೈಸೂರು, ನ. 24– ಜೆಎಸ್‌ಎಸ್ ವಿವಾಹ ವೇದಿಕೆಯ ವತಿಯಿಂದ ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಂಭಾಂಗಣದಲ್ಲಿ ವಧುವರರ ಸಮಾವೇಶವನ್ನು ಏರ್ಪಡಿಸಲಾಗಿತ್ತು. ವಧುವರರು ಹಾಗೂ ಅವರ ಪೋಷಕರು ಸಮಾವೇಶದಲ್ಲಿ ಭಾಗವಹಿಸಿ, ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಸಮಾವೇಶದಲ್ಲಿ ಭಾಗವಹಿಸಿದವರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಡಾ. ಎನ್. ಮಲ್ಲಿಕಾ ಮತ್ತು ಶ್ರೀಮತಿ ಪಿ. ಆಶಾಭವಾನಿಯವರು ವಧುವರರನ್ನು ವೇದಿಕೆಗೆ ಆಹ್ವಾನಿಸಿ ಪರಸ್ಪರ ಪರಿಚಯ ಮಾಡಿಕೊಟ್ಟರು. ಕೆಲವು ವಧುವರರ ಗೈರುಹಾಜರಿಯಲ್ಲಿ ಅವರ ಪೋಷಕರು ಅಗತ್ಯ ಮಾಹಿತಿ ವಿನಿಮಯ ಮಾಡಿಕೊಂಡರು.

ಜೆಎಸ್‌ಎಸ್ ವಿವಾಹ ವೇದಿಕೆಯು ಕಳೆದ ಹತ್ತಾರು ವರ್ಷಗಳಿಂದ ವಿವಾಹಾಪೇಕ್ಷಿಗಳಾದ ವಧುವರರ ಮಾಹಿತಿ ಕೇಂದ್ರವನ್ನು ಸಕ್ರಿಯವಾಗಿ ನಡೆಸಿಕೊಂಡು ಬರುತ್ತಿದೆ. ಮೈಸೂರಿನಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ವಧುವರರ ಸಮಾವೇಶವನ್ನು ನಡೆಸಲಾಗುತ್ತಿದೆ. ಸಂಬಂಧಪಟ್ಟ ಕುಟುಂಬಗಳ ಪರಸ್ಪರ ಒಪ್ಪಿಗೆಯ ಮೇಲೆ ವಿವಾಹಗಳು ನಡೆಯುತ್ತಿವೆ.

ಇಂದು ನೀರು ಸರಬರಾಜು ವ್ಯತ್ಯಯ

ಮೈಸೂರು, ನ.24– ಮೇಳಾಪುರ ನೀರು ಸರಬರಾಜು ಯೋಜನೆಯ ರಮ್ಮನಹಳ್ಳಿ ಜಲಶುದ್ಧೀಕರಣ ಘಟಕದಲ್ಲಿ ನ.25ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಅಮೃತ್ ಯೋಜನೆಯಡಿ ತುರ್ತು ಕಾಮಗಾರಿ ನಡೆಸುವುದರಿಂದ ನಗರದ ವಾರ್ಡ್ ನಂ.9ರಿಂದ 16, 28ರಿಂದ 39, 52, 53ರ ವ್ಯಾಪ್ತಿಯ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1,2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಹೊಂದಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥನಗರ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಇನ್ನಿತರ ಪ್ರದೇಶಗಳಲ್ಲಿನ ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ನ.30ಕ್ಕೆ ವಧು–ವರರ ಸಮಾವೇಶ

ಮೈಸೂರು, ನ.24– ಮೈಸೂರಿನ ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ ವತಿಯಿಂದ ಗನ್‌ಹೌಸ್ ಸಮೀಪದ ಶ್ರೀ ವಿದ್ಯಾ ಭಾರತಿ ಕಲ್ಯಾಣ ಮಂಟಪದಲ್ಲಿ ನ.30ರಂದು ಮಧ್ಯಾಹ್ನ 3ರಿಂದ ಸಂಜೆ 6 ಗಂಟೆವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶವನ್ನು ಆಯೋಜಿಸಲಾಗಿದ್ದು, ಭಾಗವಹಿಸುವವರು ನ.29ರೊಳಗೆ ನೋಂದಣಿ ಮಾಡಿಸಬೇಕು. ನೋಂದಣಿ ಆಗದವರಿಗೆ ಪ್ರವೇಶವಿರುವುದಿಲ್ಲ. ಹೆಚ್ಚಿನ ಮಾಹಿತಿಗೆ ಬಸವರಾಜು (ಮೊ.ಸಂ. 9686205346) ಅವರನ್ನು ಸಂಪರ್ಕಿಸಬಹುದು ಎಂದು ವೇದಿಕೆಯ ಪ್ರಕಟಣೆ ತಿಳಿಸಿದೆ.

ಐದನೇ ಪುಟದಿಂದ

ಬೀಡು ಬಿಟ್ಟಿದೆ ಸೈಬರ್ ಕ್ರೈಂ ಜಾಲ!

ಮಹಿಳೆಯನ್ನು ಡಿಜಿಟಲ್ ಅರೆಸ್ಟ್ ಎಂದು ವಂಚಿಸಿ ಅವರಿಂದ 1.16 ಕೋಟಿ ರೂ., ಲೂಟಿ ಮಾಡಲಾಗಿದೆ. ಈ ಪ್ರಕರಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಸೈಬರ್ ಕ್ರೈಂ ಪೊಲೀಸರು ಮೈಸೂರಿನ ಮೂವರು ಯುವಕರನ್ನು ಬಂಧಿಸಿದ್ದು, ಅವರು ಈಗ ಮಂಗಳೂರು ಜೈಲಿನಲ್ಲಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಪೂನಾದ ಚಿಂಛ್ವಾಡ್‌ನ 73 ವರ್ಷ ವಯಸ್ಸಿನ ಗಣಪತಿ ಬಾಲಾಜಿ ಕಾಕಡೆ ಎಂಬ ನಿವೃತ್ತ ಬ್ಯಾಂಕ್ ಅಧಿಕಾರಿಯಿಂದ ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ 1.90 ಕೋಟಿ ರೂ., ದೋಚಲಾಗಿದೆ. ಈ ಪ್ರಕರಣದಲ್ಲಿ ಪೂನಾ ಪೊಲೀಸರು ಮೈಸೂರಿನ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಿ, ಜೈಲಿಗಟ್ಟಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಚೆನ್ನೈನ 70 ವರ್ಷ ವಯಸ್ಸಿನ ಡಾ.ಚಿತ್ರಲೇಖ ಎಂಬ ವೈದ್ಯರನ್ನು ಹ್ಯೂಮನ್ ಟ್ರಾಫಿಕಿಂಗ್ ಮಾಡಲಾಗಿದೆ ಎಂದು ಹೆದರಿಸಿ, ಡಿಜಿಟಲ್ ಅರೆಸ್ಟ್ ಮೂಲಕ 24 ಲಕ್ಷ ರೂ. ಗಳನ್ನು ಸುಲಿಗೆ ಮಾಡಲಾಗಿದೆ. ಈ ಪ್ರಕರಣದಲ್ಲೂ ಮೈಸೂರಿನ ಮೂವರು ಯುವಕರು ಜೈಲು ಪಾಲಾಗಿದ್ದಾರೆ ಎಂದು ತಿಳಿಸಿದರು.

ಆಮಿಷದ ಮೂಲಕ ವಂಚನೆ : ಮೈಸೂರನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಏಜೆಂಟರು, ಯುವಕರು ಹಾಗೂ ವಿದ್ಯಾರ್ಥಿಗಳಿಗೆ ಹಣದ ಆಮಿಷವೊಡ್ಡಿ, ಬ್ಯಾಂಕ್‌ನಲ್ಲಿ ಖಾತೆ ತೆರೆಯುವಂತೆ ಮಾಡುತ್ತಾರೆ. ಅವರಿಂದ ಬ್ಯಾಂಕ್ ಖಾತೆಯ ಎಲ್ಲಾ ವಿವರಗಳನ್ನು ಪಡೆದುಕೊಂಡು ಅವರಿಗೆ ಅರಿವು ಇಲ್ಲದೇ ಸದರಿ ಖಾತೆಗೆ ಸೈಬರ್ ಕ್ರೈಂ ಮೂಲಕ ಹಣ ವರ್ಗಾವಣೆ ಮಾಡಿಸಿಕೊಂಡು ನಂತರ ಡ್ರಾ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಪ್ರಕರಣಗಳಲ್ಲಿ, ನಮಗೆ ಹಣ ಕೊಡಬೇಕಾದವರು ನಿನ್ನ ಖಾತೆಗೆ ಹಣ ಕಳುಹಿಸುತ್ತಾರೆ. ಅದನ್ನು ಎಟಿಎಂನಿಂದ ಡ್ರಾ ಮಾಡಿಕೊಡು, ನಿನಗೂ ಸ್ವಲ್ಪ ಹಣ ನೀಡುತ್ತೇವೆ ಎಂದು ಆಮಿಷವೊಡ್ಡಿ, ಯುವಕರನ್ನು ಬಲಿಪಶು ಮಾಡಿರುವುದು ಕೂಡ ಗೊತ್ತಾಗಿದೆ ಎಂದರು. ಸೈಬರ್ ಕ್ರೈಂ ಠಾಣೆಗಳಲ್ಲಿ ದೂರು ದಾಖಲಾದ ನಂತರ ವಿವಿಧ ರಾಜ್ಯಗಳ ಪೊಲೀಸರು ತನಿಖೆ ನಡೆಸಿ, ಮೈಸೂರಿನ ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಯುವಕರು, ವಿದ್ಯಾರ್ಥಿಗಳನ್ನು ಬಂಧಿಸುತ್ತಿದ್ದಾರೆ. ಹಣ ಪಡೆದುಕೊಂಡ ವ್ಯಕ್ತಿಗಳ ಬಗ್ಗೆ ಈ ಯುವಕರಿಗೆ ಸರಿಯಾದ ಮಾಹಿತಿಯೇ ಇರುವುದಿಲ್ಲ. ಅವರು ಪೊಲೀಸರಿಗೆ ಸಿಕ್ಕಿ ಬೀಳುವುದೇ ಇಲ್ಲ. ಆದರೆ, ಅಮಾಯಕ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿದ್ದು, ಅವರ ಕುಟುಂಬಸ್ಥರು ಕಂಗಾಲಾಗಿದ್ದಾರೆ ಎಂದು ವಿವರಿಸಿದರು.

ಅಸಲಿಗೆ ಡಿಜಿಟಲ್ ಅರೆಸ್ಟ್ ಎಂಬ ವ್ಯವಸ್ಥೆಯೇ ನಮ್ಮ ಕಾನೂನಿನಲ್ಲಿ ಇಲ್ಲ. ಹೀಗಾಗಿ ಪೊಲೀಸರು ಹಾಗೂ ಐಟಿ ಅಧಿಕಾರಿಗಳ ಹೆಸರಿನಲ್ಲಿ ಯಾರಾದರೂ ಡಿಜಿಟಲ್ ಅರೆಸ್ಟ್ ಮಾಡಿರುವುದಾಗಿ ಕರೆ ಮಾಡಿದರೆ, ಯಾರು ಅದಕ್ಕೆ ಹೆದರ ಬೇಕಿಲ್ಲ. ಹಾಗೂ ನಂಬಲೂ ಬೇಕಿಲ್ಲ. ಅದರ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಡಿ ಎಂದು ಮಜೀದ್ ಮನವಿ ಮಾಡಿದರು. ಅದೇ ರೀತಿ ವಿದ್ಯಾರ್ಥಿಗಳು ಹಾಗೂ ಯುವಕರು ಹಣದ ಆಮಿಷಕ್ಕೆ ಒಳಗಾಗಿ ಯಾರೋ ಹೇಳಿದರೆಂದು ಬ್ಯಾಂಕ್ ಖಾತೆಗಳನ್ನು ತೆರೆಯುವುದು ಬೇಡ ಅಥವಾ ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಿ ನಿಮ್ಮ ಖಾತೆ ಬೇರೆ ಯಾರಿಂದಲ್ಲೋ ಹಣ ವರ್ಗಾವಣೆಯಾಗಲು ಹಾಗೂ ಡ್ರಾ ಮಾಡಿಕೊಳ್ಳಲು ಅವಕಾಶ ನೀಡಿ, ಬಲಿಪಶುಗಳಾಗಿ ಜೈಲು ಪಾಲಾಗುವುದು ಬೇಡ ಎಂದು ಕಿವಿಮಾತು ಹೇಳಿದರು. ಸುದ್ದಿಗೋಷ್ಠಿಯಲ್ಲಿ ದೇವನೂರು ಪುಟ್ಟ ನಂಜಯ್ಯ, ರಫಜ್ ಖಾನ್, ಎನ್.ಸ್ವಾಮಿ, ಮೊಹಮ್ಮದ್ ಫಿರ್ದೌಸ್, ಅಜ್ಜದ್ ಖಾನ್ ಉಪಸ್ಥಿತರಿದ್ದರು.

ಡಿಕೆಶಿಗೆ 63 ಶಾಸಕರ ಬಲ!

ಬಸವರಾಜ್ ಶಿವಗಂಗಾ, ಕದಲೂರು ಉದಯ್, ಬಾಲಕೃಷ್ಣ, ಇಕ್ಬಾಲ್ ಹುಸೇನ್ ಸೇರಿದಂತೆ 9 ಮಂದಿ ದೆಹಲಿಯಲ್ಲಿ ಬಿಡಾರ ಹೂಡಿದ್ದಾರೆ. ತಮ್ಮಯ್ಯ ನಾಯಕತ್ವದಲ್ಲಿ 13 ಮಂದಿ ಮೊದಲ ಬಾರಿಗೆ ಆಯ್ಕೆಗೊಂಡಿರುವ ಶಾಸಕರು ಸೋಮವಾರ ತಡರಾತ್ರಿ ಅಥವಾ ಮಂಗಳವಾರ ದೆಹಲಿ ಯಾತ್ರೆ ಕೈಗೊಂಡು ವರಿಷ್ಠರನ್ನು ಭೇಟಿ ಮಾಡಿ ಶಿವಕುಮಾರ್ ಅವರಿಗೆ ಅಧಿಕಾರ ಕೊಡಿ ಎಂದು ಒತ್ತಾಯಿಸಲಿದ್ದಾರೆ.

ಶಿವಕುಮಾರ್ ಅವರಿಗೆ ಶಾಸಕರ ಬೆಂಬಲ ಇಲ್ಲ. ಅವರ ಬಳಿ ಬೆರಳೆಣಿಕೆಯಷ್ಟು ಸದಸ್ಯರಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದರು.

ಮುಖ್ಯಮಂತ್ರಿ ಹೇಳಿಕೆ ಸುಳ್ಳು ಮಾಡುವುದು, ತಮಗೆ ಶಾಸಕಾಂಗ ಪಕ್ಷದಲ್ಲಿ ಬಹುಮತ ಇದೆ ಎಂದು ಸಾಬೀತು ಪಡಿಸಲು, ಪರೋಕ್ಷವಾಗಿ ತಂಡೋಪ ತಂಡದಲ್ಲಿ ತಮ್ಮ ಬೆಂಬಲಿತ ಶಾಸಕರನ್ನು ದೆಹಲಿಗೆ ತೆರಳುವಂತೆ ಶಿವಕುಮಾರ್ ಮಾಡುತ್ತಿದ್ದಾರೆ. ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ವರಿಷ್ಠರ ನಿರ್ಧಾರವೇ ಅಂತಿಮ ಎಂಬುದಾಗಿ ಸಿದ್ದರಾಮಯ್ಯ ಪದೇ ಪದೇ ಹೇಳುತ್ತಿದ್ದರೂ ಉಪಮುಖ್ಯಮಂತ್ರಿ ಮಾತ್ರ ಶಾಸಕರ ಬಲ ಹೆಚ್ಚಿಸಿಕೊಳ್ಳುವ ಕಸರತ್ತು ಮುಂದುವರೆಸಿದ್ದಾರೆ.

ಸಂಪುಟದ 13 ಸಚಿವರು, 50 ಶಾಸಕರ ಪಟ್ಟಿ ಮುಖ್ಯಮಂತ್ರಿ ಅವರ ಕೈ ಸೇರಿದೆ ಎಂದು ಹೇಳಲಾಗುತ್ತಿದೆ.

ಮುಂದಿನ ಒಂದು ವಾರದಲ್ಲಿ ಈ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ ಎಂದು ಬಲ್ಲ ಮೂಲಗಳು ತಿಳಿಸಿವೆ.

ನಾಗಾ ಸಾಧುಗಳ ಆಶೀರ್ವಾದ, ಹುಲಿಗೆಮ್ಮ ದೇವಿ ಜೋಗತಿ ಭವಿಷ್ಯ, ಅಯ್ಯಪ್ಪ ಮಾಲಾಧಾರಿಗಳಿಂದ ಡಿ.ಕೆ.ಶಿವಕುಮಾರ್ ಪರ ವಿಶೇಷ ಪ್ರಾರ್ಥನೆ!

ಬೆಂಗಳೂರು, ನ.24– ರಾಜ್ಯದಲ್ಲಿ ಸಿಎಂ ಕುರ್ಚಿ ಕದನ ಜೋರಾಗಿ ನಡೆಯುತ್ತಿರುವಂತೆಯೇ ಡಿಸಿಎಂ ಡಿಕೆ ಶಿವಕುಮಾರ್ ಬೆಂಬಲಿಗರ ಪಟ್ಟು ಮುಂದುವರೆದಿದೆ. ಈ ಮಧ್ಯೆ ಕಾಶಿಯಿಂದ ಬಂದ ನಾಗ ಸಾಧುಗಳ ಆಶೀರ್ವಾದ ಡಿಸಿಎಂ ಡಿಕೆಶಿ ಅವರಿಗೆ ದೊರೆತಿದೆ.

ಸದಾಶಿವನಗರದಲ್ಲಿರುವ ಅವರ ನಿವಾಸಕ್ಕೆ ಬಂದ ನಾಗ ಸಾಧುಗಳು ಡಿಕೆಶಿ ತಲೆ ಮೇಲೆ ಕೈ ಇಟ್ಟು ಆಶೀರ್ವಾದ ಮಾಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಸಾಧುಗಳು, ಶಿವಕುಮಾರ್ ಸಿಎಂ ಆಗಲೆಂದು ಆಶೀರ್ವಾದ ಮಾಡಿದ್ದೇನೆ. ಅವರು ಮುಂದಿನ ಸಿಎಂ ಆಗ್ತಾರೆ ಎಂದು ಹೇಳಿ ತೆರಳಿದ್ದಾರೆ.

ಮತ್ತೊಂದೆಡೆ ಡಿಕೆ ಶಿವಕುಮಾರ್ ಅವರೇ ಮುಂದಿನ ಸಿಎಂ ಆಗಲಿದ್ದಾರೆ ಎಂದು ಗದಗದ ರಾಜೋಟೇಶ್ವರ ನಗರದ ನಿವಾಸಿ, ಹುಲಿಗೆಮ್ಮ ದೇವಿಯ ಜೋಗತಿ ಭೈಲಮ್ಮ ಬಾಳಮಣ್ಣ ಭವಿಷ್ಯ ನುಡಿದಿದ್ದಾರೆ. ಈ ಭವಿಷ್ಯ ಈಗ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ.

ಗದ್ದುಗೆ ಹಾಕಿ ದೇವಿ ಕೊಡ ಎತ್ತುವ ಮೂಲಕ ಜೋಗತಿ ಅಮ್ಮ ಭವಿಷ್ಯ ನುಡಿದಿದ್ದಾರೆ. ಹುಲಿಗೆಮ್ಮ ದೇವಿ ನೀಡಿರುವ ಭವಿಷ್ಯ ಸುಳ್ಳು ಆಗುವುದಿಲ್ಲ ಎಂದು ಜೋಗತಿ ಹೇಳಿದ್ದಾರೆ. ಡಿಕೆ ಶಿವಕುಮಾರ್ ಅವರೇ ನೀವು ಚಿಂತೆ ಮಾಡಬೇಡಿ ಸಿಎಂ ಆಗುತ್ತೀರಿ. ಎರಡೂವರೆ ತಿಂಗಳ ಒಳಗಾಗಿ ಡಿಕೆ ಶಿವಕುಮಾರ್ ಸಿಎಂ ಆಗ್ತಾರೆ. ಆದರೆ, ಹುಲಿಗೆಮ್ಮ ದೇವಿ ನೆನೆಪಿಸಿಕೊಂಡು ಮುಂದಿನ ಹೆಜ್ಜೆ ಇಡಬೇಕು. ಖುಷಿ ಖುಷಿಯಿಂದ ಡಿಕೆಶಿಗೆ ಸಿದ್ದರಾಮಯ್ಯ ಸ್ಥಾನ ಬಿಟ್ಟುಕೊಡುತ್ತಾರೆ ಎಂದು ಜೋಗತಿ ಭವಿಷ್ಯ ಹೇಳಿದ್ದಾರೆ.



ಜೋಗತಿ ಭೈಲಮ್ಮ ಬಾಳಮಣ್ಣ

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಅಯ್ಯಪ್ಪ ಮಾಲಾಧಾರಿಗಳು ಡಿಕೆ ಶಿವಕುಮಾರ್ ಮುಂದಿನ ಸಿಎಂ ಆಗಲಿ ಎಂದು ವಿಶೇಷ ಪೂಜೆ ಸಲ್ಲಿಸಿದ್ದಾರೆ.

ಸಿಎಂ ಮಾತು ವೇದ ವಾಕ್ಯ: ಡಿಕೆಶಿ

ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಶಾಸಕರನ್ನು ಕಾಂಗ್ರೆಸ್ ಪಕ್ಷದ ನಾಯಕರೇ ಖರೀದಿ ಮಾಡುವ ಪರಿಸ್ಥಿತಿ ಬಂದಿದೆ ಎಂಬ ಬಿಜೆಪಿ ನಾಯಕರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಈ ಹಿಂದೆ ಬಿಜೆಪಿ ಸರ್ಕಾರ ರಚನೆಯಾದಾಗ ಅವರು ಎಷ್ಟು ಸಾವಿರ ಕೋಟಿ ಖರ್ಚು ಮಾಡಿದ್ದರು. ಮುಖ್ಯಮಂತ್ರಿ ಹುದ್ದೆಗೆ ಎಷ್ಟು ಹಣ ನೀಡಬೇಕಾಗಿತ್ತು, ಮಂತ್ರಿ ಹುದ್ದೆಗೆ ಎಷ್ಟು ಹಣ ನೀಡಲಾಗಿದೆ ಎಂದು ಅವರದೇ ಪಕ್ಷದ ನಾಯಕರು ಬಹಿರಂಗ ಹೇಳಿಕೆ ನೀಡಿದ್ದಾರೆ. ಅವರು ಎಷ್ಟು ಹಣ ಆಮಿಷ ಒಡ್ಡಿದ್ದರು ಎಂದು ವಿಧಾನಸಭೆಯಲ್ಲೂ ಪ್ರಸ್ತಾಪವಾಗಿದ್ದು, ದಾಖಲೆಗಳಲ್ಲಿ ಸೇರಿವೆ. ಈಗ ಬಿಜೆಪಿಯವರು ತಮ್ಮ ಪ್ರವೃತ್ತಿಯನ್ನು ನೆನೆಸಿಕೊಳ್ಳುತ್ತಿದ್ದಾರೆ ಎಂದು ಹರಿಹಾಯ್ದರು.

ಹಾರಲಿದೆ ಕೇಸರಿ ಬಾವುಟ

ಇದು ಈ ದೇವಾಲಯದ ನಿರ್ಮಾಣ ಪೂರ್ಣಗೊಂಡಿರುವುದನ್ನು, ಸಾಂಸ್ಕೃತಿಕ ಆಚರಣೆ ಮತ್ತು ರಾಷ್ಟ್ರೀಯ ಏಕತೆಯ ಹೊಸ ಅಧ್ಯಾಯವನ್ನು ಪ್ರಾರಂಭಿಸುವುದನ್ನು ಸಂಕೇತಿಸುತ್ತದೆ. ಈ ಕೇಸರಿ ಧ್ವಜವು ಭಗವಾನ್ ಶ್ರೀ ರಾಮನ ತೇಜಸ್ಸು ಮತ್ತು ಶೌರ್ಯವನ್ನು ಸಂಕೇತಿಸುವ ಪ್ರಕಾಶಮಾನವಾದ ಸೂರ್ಯನನ್ನು, ಪವಿತ್ರ ಕೋವಿದರ ಮರವನ್ನು, ರಾಮರಾಜ್ಯದ ಆದರ್ಶಗಳನ್ನು ಮತ್ತು ರಾಷ್ಟ್ರದ ಏಕತೆಯನ್ನು ಪ್ರತಿನಿಧಿಸುವ ‘ಓಂ’ ಚಿಹ್ನೆಯನ್ನು ಒಳಗೊಂಡಿದೆ.

ರಾಮಮಂದಿರದ ಶಿಖರವನ್ನು ಸಾಂಪ್ರದಾಯಿಕ ಉತ್ತರ ಭಾರತೀಯ ನಾಗರ ಶೈಲಿಯಲ್ಲಿ ನಿರ್ಮಿಸಲಾಗಿದೆ. ಹಾಗೇ, ಸುತ್ತಮುತ್ತಲಿನ 800 ಮೀಟರ್ ಸುತ್ತುವರಿದ ಪಾರ್ಕೋಟಾ ದಕ್ಷಿಣ ಭಾರತದ ವಾಸ್ತುಶಿಲ್ಪದ ಅಂಶಗಳನ್ನು ಪ್ರದರ್ಶಿಸುತ್ತದೆ. ಇದು ಭಾರತದ ವೈವಿಧ್ಯಮಯ ದೇವಾಲಯ ಸಂಪ್ರದಾಯಗಳ ಸಮ್ಮಿಲನವನ್ನು ಪ್ರತಿಬಿಂಬಿಸುತ್ತದೆ. ಈ ಸಂಕೀರ್ಣವು ಮುಖ್ಯ ದೇವಾಲಯದ ಗೋಡೆಗಳ ಮೇಲೆ ವಾಲ್ಮೀಕಿ ರಾಮಾಯಣದ 87 ಸಂಕೀರ್ಣವಾಗಿ ಕೆತ್ತಿದ ಕಲ್ಲಿನ ಕಂತುಗಳು ಮತ್ತು ಆವರಣದ ಗೋಡೆಗಳ ಉದ್ದಕ್ಕೂ ಭಾರತೀಯ ಸಂಸ್ಕೃತಿಯ 79 ಕಂಚಿನ ಎರಕಹೊಯ್ದ ಕಂತುಗಳನ್ನು ಒಳಗೊಂಡಿದೆ. ಕೇಸರಿ ಧ್ವಜವನ್ನು ಹಾರಿಸುವುದು ಭಗವಾನ್ ಶ್ರೀ ರಾಮನ ಜೀವನ ಮತ್ತು ಬೋಧನೆಗಳನ್ನು ಆಚರಿಸುವ ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಐತಿಹಾಸಿಕ ಕ್ಷಣವನ್ನು ಸೂಚಿಸುತ್ತದೆ.

ಹಿರಿಯ ನಟ ಧರ್ಮೇಂದ್ರ ಇನ್ನಿಲ್ಲ

ಅನ್ಪದ್, ಬಂದಿನಿ, ಅನುಪಮಾ ಮತ್ತು ಆಯಾ ಸಾವನ್ ಝೂಮ್ ಕೆ ಮುಂತಾದ ಚಿತ್ರಗಳಲ್ಲಿ ಸಾಮಾನ್ಯ ಪಾತ್ರಗಳ ಮೂಲಕ ಮೂಲಕ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ನಂತರ ಅವರು ಶೋಲೆ, ಧರಮ್ ವೀರ್, ಚುಪ್ಕೆ ಚುಪ್ಕೆ, ಮೇರಾ ಗಾಂವ್ ಮೇರಾ ದೇಶ್ ಮತ್ತು ಡ್ರೀಮ್ ಗರ್ಲ್ ಚಿತ್ರಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಖ್ಯಾತಿ ಗಳಿಸಿದರು. ನಟ ಧರ್ಮೇಂದ್ರ ಅವರು 2004 ರಲ್ಲಿ ಬಿಜೆಪಿಯಿಂದ ರಾಜಸ್ಥಾನದ ಬಿಕಾನೇರ್‌ನಿಂದ ಲೋಕಸಭೆಗೆ ಆಯ್ಕೆಯಾಗಿ ಸಂಸದರಾಗಿ ಕಾರ್ಯನಿರ್ವಹಿಸಿದ್ದರು. ಧರ್ಮೇಂದ್ರ ಅವರು ಇಬ್ಬರು ಪತ್ನಿಯರಾದ ಪ್ರಕಾಶ್ ಕೌರ್ ಮತ್ತು ಹೇಮಾ ಮಾಲಿನಿ, ಆರು ಮಕ್ಕಳಾದ ಸನ್ನಿ ಡಿಯೋಲ್, ಬಾಬಿ ಡಿಯೋಲ್, ವಿಜೇತ ಡಿಯೋಲ್, ಅಜೀತಾ ಡಿಯೋಲ್, ಇಶಾ ಡಿಯೋಲ್ ಮತ್ತು ಅಹಾನಾ ಡಿಯೋಲ್ ಅವರನ್ನು ಅಗಲಿದ್ದಾರೆ. ಮುಂಬೈನ ಪವನ್ ಹನ್ಸ್ ರುದ್ರಭೂಮಿಯಲ್ಲಿ ಇಂದು ಸಂಜೆ ಅವರ ಅಂತ್ಯಕ್ರಿಯೆ ನೆರವೇರಿತು.

ಧರ್ಮೇಂದ್ರ ಅವರ ನಿಧನಕ್ಕೆ ಪ್ರಧಾನಿ ಮೋದಿ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಂಸದೆ ಸುಮಲತಾ, ಆಂಧ್ರ ಸಿಎಂ ಚಂದ್ರಬಾಬು ನಾಯ್ಡು, ಬಾಲಿವುಡ್ ಖ್ಯಾತ ನಿರ್ಮಾಪಕ ಕರಣ್ ಜೋಹರ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಭಾರತ ಚಾಂಪಿಯನ್

ಒಟ್ಟು 11 ದೇಶಗಳು ಜಾಗತಿಕ ಸ್ಪರ್ಧಾವಳಿಯಲ್ಲಿ ಭಾಗವಹಿಸಿದ್ದು ಭಾರತ ತಂಡವು ಎರಡನೇ ಬಾರಿ ಮಹಿಳೆಯರ ಕಬಡ್ಡಿ ವಿಶ್ವಕಪ್ ಟ್ರೋಫಿಯನ್ನು ಮುಡಿಗೇರಿಸಿಕೊಂಡಿದೆ. ಭಾರತ ತಂಡ ಭಾನುವಾರ ನಡೆದ ಸೆಮಿ ಫೈನಲ್‌ನಲ್ಲಿ ಇರಾನ್ ತಂಡವನ್ನು 33–21 ಅಂಕಗಳ ಅಂತರದಿಂದ ಮಣಿಸಿ ಫೈನಲ್‌ತಲುಪಿತ್ತು. ಚೈನೀಸ್ ತೈಪೆ ತಂಡವು ಆತಿಥೇಯ ಬಾಂಗ್ಲಾದೇಶ ತಂಡವನ್ನು 25–18 ಅಂಕಗಳ ಅಂತರದಿಂದ ಸದೆಬಡಿದು ಪ್ರಶಸ್ತಿ ಸುತ್ತಿಗೆ ತೇರ್ಗಡೆಯಾಗಿತ್ತು ಭಾರತ ಹಾಗೂ ಚೈನೀಸ್ ತೈಪೆ ತಂಡಗಳು ಗ್ರೂಪ್ ಹಂತದಲ್ಲಿ ಅಜೇಯ ಗೆಲುವಿನ ದಾಖಲೆಯನ್ನು ಕಾಯ್ದುಕೊಂಡಿದ್ದವು. ಭಾರತ ತಂಡವು ‘ಎ’ ಗುಂಪಿನಲ್ಲಿ ಆಡಿರುವ ಎಲ್ಲ 4 ಪಂದ್ಯಗಳಲ್ಲಿ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿತ್ತು ಚೈನೀಸ್ ತೈಪೆ ‘ಬಿ’ ಗುಂಪಿನಲ್ಲಿ ಎಲ್ಲ ಐದು ಪಂದ್ಯಗಳನ್ನು ಗೆದ್ದುಕೊಂಡಿತ್ತು.

ಪ್ರಜ್ವಲ್ ಜಾಮೀನಿಗೆ ಅರ್ಹ ಆಸಾಮಿಯಲ್ಲ

ಎಸ್‌ಐಟಿ ಪರ ವಕೀಲರ ವಾದ

ಬೆಂಗಳೂರು: ಮನೆ ಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಯಾಗಿರುವ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಅಧೀನ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರಿಯುವುದನ್ನು ತಡೆಯಲು 10ರಿಂದ12 ಬಾರಿ ಪ್ರಯತ್ನ ಮಾಡಿದ್ದರು. ಹೀಗಾಗಿ, ಅವರಿಗೆ ಜಾಮೀನು ನೀಡಬಾರದು ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿತು.



ಪ್ರಜ್ವಲ್ ರೇವಣ್ಣ

ನನಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ ಜಾಮೀನು ಮಂಜೂರು ಮಾಡಬೇಕು ಎಂದು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಶೇಷ ತನಿಖಾ ದಳದ (ಎಸ್‌ಐಟಿ) ಪರ ವಾದ ಮಂಡಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, ಪ್ರಜ್ವಲ್ ಕೃತ್ಯ ನಡೆಸಿ ದೇಶ ತೊರೆದಿದ್ದರು. ಸಂತ್ರಸ್ತೆಯರ ಜೊತೆಗಿನ ಲೈಂಗಿಕ ಕೃತ್ಯ ಸೆರೆ ಹಿಡಿದಿದ್ದ ಫೋನ್ ಅನ್ನು ತನಿಖಾಧಿಕಾರಿಗಳಿಗೆ ಒಪ್ಪಿಸಿಲ್ಲ. ತನ್ನ ಫೋನ್ ಜರ್ಮನಿಯಲ್ಲಿ ಕಳೆದು ಹೋಗಿದೆ ಎಂದು ಹೇಳಿದ್ದಾರೆ. ಇದು ಅವರ ನಡತೆಗೆ ಹಿಡಿದ ಕನ್ನಡಿಯಾಗಿದೆ ಎಂದು ಆಕ್ಷೇಪಿಸಿದರು.

ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲಾಢ್ಯರಾಗಿರುವ ಪ್ರಜ್ವಲ್‌ನ ಅಜ್ಜ ಮಾಜಿ ಪ್ರಧಾನಿ. ಚಿಕ್ಕಪ್ಪ ಹಾಲಿ ಕೇಂದ್ರ ಸಚಿವ ಮತ್ತು ಮಾಜಿ ಮುಖ್ಯಮಂತ್ರಿ. ತಂದೆ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದವರು ಮತ್ತು ಹಾಲಿ ಶಾಸಕ. ಕೃತ್ಯದ ಮಾಹಿತಿ ನೀಡಲು ಬಂದ ಸಂತ್ರಸ್ತೆಗೆ ಅಂದಿನ ಜಿಲ್ಲಾಧಿಕಾರಿ ಸೇರಿದಂತೆ ಯಾರೊಬ್ಬರೂ ಸೂಕ್ತ ನೆರವು ನೀಡಿಲ್ಲ. ಆರೋಪಿ ಅತ್ಯಂತ ಬಲಾಢ್ಯನಾಗಿರುವ ಕಾರಣದಿಂದಲೇ ಸಂತ್ರಸ್ತೆಯ ಧ್ವನಿಯನ್ನು ಹತ್ತಿಕ್ಕಲಾಗಿತ್ತು ಎಂದರು.


ಹಾಲಿ ಪ್ರಕರಣದಲ್ಲಿ ಪ್ರಜ್ವಲ್‌ಗೆ ಜಾಮೀನು ಮಂಜೂರು ಮಾಡಿದರೆ ಸಂತ್ರಸ್ತೆಯನ್ನು ಅಪಹರಿಸಿದ ಆರೋಪದ ಪ್ರಕರಣ ಎದುರಿಸುತ್ತಿರುವ ತಂದೆ ಹೆಚ್.ಡಿ. ರೇವಣ್ಣ ಮತ್ತು ತಾಯಿ ಭವಾನಿ ಅವರ ಜಾಮೀನು ಕೋರಿಕೆ ಮೇಲೆಯೂ ಪ್ರಭಾವ ಬೀರಲಿದೆ. ಜಾಮೀನು ಮಂಜೂರು ಮಾಡಿ ಸಮಾಜದ ಮುಖ್ಯವಾಹಿನಿಗೆ ಬರಲು ಅವಕಾಶ ಮಾಡಿಕೊಟ್ಟರೆ ಸಮಾಜಕ್ಕೆ ಯಾವ ಸಂದೇಶ ರವಾನೆಯಾಗಲಿದೆ? ಹೀಗಾಗಿ, ಈ ಆರೋಪಿ ಜಾಮೀನಿಗೆ ಅರ್ಹ ಆಸಾಮಿಯಲ್ಲ ಎಂದರು. ಆಕ್ಷೇಪಣೆಯನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಮಂಗಳವಾರಕ್ಕೆ (ನ.25) ಮುಂದೂಡಿತು.

ಡಿ.24, 25 ರಂದು ಶ್ರೀವಿದ್ಯಾ ಸಮ್ಮೇಳನ

ಮೈಸೂರು,ನ.24(ಜಿಎ)–ಮೈಸೂರಿನ ತ್ರಯಿನ್ಯಾಸ್ ಶ್ರೀವಿದ್ಯಾ ಫೌಂಡೇಷನ್ ವತಿಯಿಂದ ಡಿ.24 ಮತ್ತು 25 ರಂದು ನಗರದ ಮಾನಸ ಗಂಗೋತ್ರಿ ಸೆನೆಟ್ ಭವನದಲ್ಲಿ ಅಂತಾರಾಷ್ಟ್ರೀಯ ಶ್ರೀವಿದ್ಯಾ ಸಮ್ಮೇಳನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸದಸ್ಯ ಅಚ್ಯುತ ಈ ವಿಷಯ ತಿಳಿಸಿ, ಮೈಸೂರು ವಿವಿಯ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಹಯೋಗದಲ್ಲಿ ಈ ಸಮ್ಮೇಳನ ನಡೆಯುತ್ತಿದ್ದು, ಶ್ರೀವಿದ್ಯಾ ಉಪಾಸಕರು, ಆಸಕ್ತರು ಪಾಲ್ಗೊಳ್ಳಲಿದ್ದಾರೆ. ಈ ಕುರಿತು ಇರುವ ಅನುಮಾನ ಬಗೆಹರಿಸಲಾಗುವುದು. ಸಮ್ಮೇಳನದಲ್ಲಿ ಶ್ರೀವಿದ್ಯಾ ಸ್ಮರಣ ಸಂಚಿಕೆ ಸಹಾ ಬಿಡುಗಡೆಯಾಗಲಿದೆ. ನ.24ರಂದು ಬೆಳಗ್ಗೆ 9.30ಕ್ಕೆ ಗಣ್ಯರು ಚಾಲನೆ ನೀಡಲಿದ್ದಾರೆ. ನೋಂದಣಿ ಮಾಡಿಕೊಳ್ಳಲು ಇಚ್ಛಿಸುವವರು 9448272703, 8073618703 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥಾಪಕ ಟ್ರಸ್ಟಿ ಹೆಚ್.ಎಸ್. ತ್ಯಾಗರಾಜು, ವೈ.ಎಸ್. ಲಕ್ಷ್ಮಣ್, ಪ್ರಸಾದ್, ಶಂಕರ್ ದೇಶಪಾಂಡೆ ಉಪಸ್ಥಿತರಿದ್ದರು.

ಹೆಚ್.ಎಸ್.ಶಕುಂತಲಾ ನಿಧನ



ಮೈಸೂರು, ನ.24– ಮೈಸೂರಿನ ಸರಸ್ವತಿಪುರಂ 9ನೇ ಮುಖ್ಯರಸ್ತೆ ನಿವಾಸಿ, ಯುವರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಲೇಟ್ ಪ್ರೊ.ಕೆ.ಎಂ.ವೀರಪ್ಪ ಅವರ ಪತ್ನಿ ಹೆಚ್.ಎಸ್.ಶಕುಂತಲಾ ಸೋಮವಾರ ನಿಧನರಾದರು. ಮೃತರು ಮೈಸೂರು ಗ್ರಾಹಕ ಪರಿಷತ್ ಸದಸ್ಯ ಬಾನು ಪ್ರಶಾಂತ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಜಿ. ಕೊಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


75 ನೇ
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರಾದ
ಶ್ರೀ ಜಿ.ಟಿ.ದೇವೇಗೌಡ ರವರಿಗೆ
ಜನ್ಮದಿನದ ಶುಭಾಶಯಗಳು
VISMAYA
8050302424


ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ
ಸನ್ಮಾನ್ಯ ಶ್ರೀ ಜಿ.ಟಿ. ದೇವೇಗೌಡರವರಿಗೆ
ಜನ್ಮದಿನದ ಶುಭಾಶಯಗಳು
ಇವರ ಅಂಗವಾಗಿ 26-11-2025ರ ಬುಧವಾರದಂದು
ಗೋಪಾಲಪುರ ಗ್ರಾಮದಲ್ಲಿ ಮಧ್ಯಾಹ್ನ 12 ಗಂಟೆಗೆ ಹುಟ್ಟು ಹಬ್ಬ ಆಚರಣೆ
ಸರ್ವರಿಗೂ ಸುಸ್ವಾಗತ
ಲೀಲಾವತಿ, ಅಧ್ಯಕ್ಷರು, ಧನಗಳ್ಳಿ ಗ್ರಾಮ ಪಂಚಾಯಿತಿ
ಸವಿತಾ, ಉಪಾಧ್ಯಕ್ಷರು, ಧನಗಳ್ಳಿ ಗ್ರಾಮ ಪಂಚಾಯಿತಿ
ಕೋಟೆಹುಂಡಿ ಮಹದೇವ್
ಎ.ಪಿ.ಎಂ.ಸಿ. ಮಾಜಿ ನಿರ್ದೇಶಕರು
ಮತ್ತು ಶ್ರೀನಿಧಿ ಸ್ಟೀಲ್ಸ್
ಮತ್ತು ಶ್ರೀನಿಧಿ ಡೆವಲಪರ್ಸ್ ಹಾಗೂ
ಶ್ರೀನಿಧಿ ವೆಂಚರ್ಸ್ ಮಾಲೀಕರು
ನಿಂಗರಾಜು ಪಿ.
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಜೆಡಿಎಸ್ ಮುಖಂಡರು ಧನಗಳ್ಳಿ.
ಕೃಷ್ಣಮೂರ್ತಿ
ಜೆಡಿಎಸ್ ಮುಖಂಡರು
ಸುರೇಶ ಸದಸ್ಯರು
(ಧನಗಳ್ಳಿ ಗ್ರಾ.ಪಂ) ಕೋಟೆಹುಂಡಿ
ಶುಭಕೋರುವವರು : ಕೋಟೆಹುಂಡಿ ಮಹದೇವು ಸ್ನೇಹ ಬಳಗ
ARAVINDA PRINTERS
9343706416

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಎಕ್ಸ್‌ಟ್ರಾ ಇನ್ನಿಂಗ್ಸ್ | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ನವೆಂಬರ್ 25 ಮಂಗಳವಾರ 2025

ಪುಟಗಳು: IV

ಮೈಸೂರಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವಿಗೆ ಮನಸ್ಸು ಮಾಡಿದ ಪೊಲೀಸರು!



ಮಹಾರಾಣಿ ಪದವಿ ಪೂರ್ವ ಕಾಲೇಜಿನ ಮುಂಭಾಗ ವಾಹನ ನಿಲುಗಡೆ ನಿರ್ಬಂಧಿಸಿ ಬ್ಯಾರಿಕೇಡ್ ಅಳವಡಿಸಿರುವುದು.





ಮೈಸೂರಿನ ನಂಜುಮಳಿಗೆ ರಸ್ತೆಯ ಚಿತ್ರಣ

ಅವೈಜ್ಞಾನಿಕವಾಗಿ ವಾಹನ ನಿಲುಗಡೆಗೂ ಬ್ರೇಕ್ ಹಾಕುವ ದೃಢ ನಿರ್ಧಾರ ಮಾಡಬೇಕಿದೆ

ಮೈಸೂರು,ನ.24(ಎಂಟಿವೈ)– ಸಾರ್ವಜನಿಕರು ಹಾಗೂ ವಾಹನ ಸವಾರರಿಂದ ವ್ಯಾಪಕ ದೂರು ಬಂದ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧ ರಸ್ತೆಗಳಲ್ಲಿ ಪಾದಚಾರಿ ಮಾರ್ಗದ ಒತ್ತುವರಿ ಹಾಗೂ ಅವೈಜ್ಞಾನಿಕ ಪಾರ್ಕಿಂಗ್‌ಗೆ ಕಡಿವಾಣ ಹಾಕಲು ಪೊಲೀಸರು ಮುಂದಾಗಿದ್ದು, ನಂಜುಮಳಿಗೆ ಹಾಗೂ ಮಹಾರಾಣಿ ಪದವಿ ಪೂರ್ವ ಕಾಲೇಜಿನ ಮುಂಭಾಗ ಲಕ್ಷ್ಮೀವಿಲಾಸ ರಸ್ತೆಯಲ್ಲಿ ವಾಹನ ನಿಲುಗಡೆ ನಿರ್ಬಂಧಿಸಿ ಬ್ಯಾರಿಕೇಡ್ ಅಳವಡಿಸಿದ್ದಾರೆ.

ಮೈಸೂರಿನ ಹೃದಯ ಭಾಗ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿದ್ದು, ಸಾರ್ವಜನಿಕರ ಓಡಾಟಕ್ಕೆ ಅಡ್ಡಿಯುಂಟು ಮಾಡುತ್ತಿದ್ದಾರೆ. ಅಲ್ಲದೆ, ಕೆಲ ಫಾಸ್ಟ್ ಫುಡ್, ಬೇಕರಿ, ತಿನಿಸುಗಳ ಮಳಿಗೆಗಳ ಮುಂದೆ, ತಿರುವಿನ ಬಳಿ ಬೇಕಾಬಿಟ್ಟಿ ವಾಹನ ನಿಲುಗಡೆ ಮಾಡಿ, ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೊಂದರೆ ನೀಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಹಾಗೂ ನಿರ್ಬಂಧಿತ ಸ್ಥಳದಲ್ಲಿ ವಾಹನ ನಿಲುಗಡೆ ಮತ್ತು ಅವೈಜ್ಞಾನಿಕ ಪಾರ್ಕಿಂಗ್‌ಗೆ ಕಡಿವಾಣ ಹಾಕಲು ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ನಂಜುಮಳಿಗೆ ವೃತ್ತದಲ್ಲಿ: ಮೈಸೂರಿನ ನಂಜುಮಳಿಗೆ ವೃತ್ತದಿಂದ ಮಾನಂದವಾಡಿ ರಸ್ತೆಯ ಜೆಎಲ್‌ಬಿ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಯಲ್ಲೂ ರಸ್ತೆಗೆ ಚಾಚಿಕೊಂಡಂತೆ ವ್ಯಾಪಾರಿಗಳು ವಿವಿಧ ವಸ್ತುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಮಾನಂದವಾಡಿ, ಹೆಚ್.ಡಿ.ಕೋಟೆ, ಸರಗೂರು ಸೇರಿದಂತೆ ವಿವಿಧೆಡೆ ತೆರಳುವ ಪ್ರಯಾಣಿಕರು, ಪ್ರವಾಸಿಗರ ವಾಹನಗಳು ಇದೇ ರಸ್ತೆಯಲ್ಲಿ ಸಂಚರಿಸಲಿದ್ದು, ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಕೆ.ಆರ್.ಸಂಚಾರ ಠಾಣೆಯ ಪೊಲೀಸರು ಕಾರ್ಯ ಪ್ರವೃತ್ತರಾಗಿ ನಂಜುಮಳಿಗೆ ವೃತ್ತದ ಬಳಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡಿದ್ದಾರೆ. ಅಲ್ಲದೆ, ರಸ್ತೆ ಬದಿ ವಾಹನ ನಿಲುಗಡೆ ಮಾಡದಂತೆ ಹಾಗೂ ವ್ಯಾಪಾರಕ್ಕಾಗಿ ವಿವಿಧ ವಸ್ತುಗಳನ್ನು ಜೋಡಣೆ ಮಾಡದಂತೆ ಬ್ಯಾರಿಕೇಡ್ ಅಳವಡಿಸಿದ್ದಾರೆ. ಇದರಿಂದ ಆ ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಂತಾಗಿದ್ದು, ಕೆ.ಆರ್.ಸಂಚಾರ ಪೊಲೀಸರು ಈ ಕಾರ್ಯಾಚರಣೆಗೆ ಸಾರ್ವಜನಿಕರು, ಸ್ಥಳೀಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ದೇವರಾಜ ಸಂಚಾರ ಠಾಣೆ: ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆ ಹಾಗೂ ಲಕ್ಷ್ಮೀವಿಲಾಸ ರಸ್ತೆಯ ಜಂಕ್ಷನ್ ಬಳಿ ಮಹಾರಾಣಿ ಪದವಿ ಪೂರ್ವ ಕಾಲೇಜಿನ ಮುಂಭಾಗ ಕೆಲವು ಮಳಿಗೆಗಳ ಮಾಲೀಕರು ಪಾದಚಾರಿ ಮಾರ್ಗ ಅತಿಕ್ರಮಿಸಿಕೊಂಡಿರುವ ಬಗ್ಗೆ ಸಾರ್ವಜನಿಕರು ನೀಡಿದ್ದ ದೂರಿನ ಮೇರೆಗೆ ದೇವರಾಜ ಸಂಚಾರ ಪೊಲೀಸರು ಇಂದು ಬೆಳಗ್ಗೆ ಕಾರ್ಯಾಚರಣೆ ನಡೆಸಿ, ಕಾಲೇಜಿನ ಮುಂಭಾಗದ ರಸ್ತೆಯ ಎರಡೂ ಬದಿಯಲ್ಲೂ ವಾಹನ ನಿಲುಗಡೆ ನಿರ್ಬಂಧಿಸಿ, ಬ್ಯಾರಿಕೇಡ್ ಇಟ್ಟಿದ್ದಾರೆ. ಇದರಿಂದ ಬೆಳಗ್ಗೆ ಮತ್ತು ಸಂಜೆ ಕಾಲೇಜಿಗೆ ಬರುವ ಹಾಗೂ ಹೋಗುವ ವಿದ್ಯಾರ್ಥಿನಿಯರು ಓಡಾಡಲು ಸಮಸ್ಯೆಯಾಗುತ್ತಿತ್ತು. ಆತಂಕದಿಂದಲೇ ವಿದ್ಯಾರ್ಥಿನಿಯರು ರಸ್ತೆಯಲ್ಲೇ ಓಡಾಡುವಂತಾಗಿತ್ತು. ಈ ಹಿನ್ನೆಲೆಯಲ್ಲಿ ದೇವರಾಜ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಮಮತಾ ನೇತೃತ್ವದಲ್ಲಿ ಇಂದು ಬೆಳಗ್ಗೆ ಕಾರ್ಯಾಚರಣೆ ನಡೆಸಿ, ವಾಹನ ನಿಲುಗಡೆ ಹಾಗೂ ಪಾದಚಾರಿ ಮಾರ್ಗದ ಅತಿಕ್ರಮಣ ತೆರವು ಮಾಡಿಸಿದ್ದಾರೆ.

ಇಲ್ಲೂ ಕಾರ್ಯಾಚರಣೆ ಮಾಡಲೇಬೇಕು: ಸಯ್ಯಾಜಿರಾವ್ ರಸ್ತೆ ಹಳೆ ಆರ್‌ಎಂಸಿ ವೃತ್ತದಿಂದ ಬಂಬೂಬಜಾರ್ ವೃತ್ತದವರೆಗೂ ರಸ್ತೆಯ ಎರಡೂ ಬದಿಯಲ್ಲಿ ಅವೈಜ್ಞಾನಿಕವಾಗಿ ವಾಹನ ನಿಲುಗಡೆ ಮಾಡಲಾಗುತ್ತಿದೆ. ಅಲ್ಲಿನ ಹೋಟೆಲ್‌ಗಳಿಗೆ ಬರುವ ಗ್ರಾಹಕರು ರಸ್ತೆಗೆ ಅಡ್ಡಲಾಗಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಆ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ಅಲ್ಲದೆ, ಅಲ್ಲಿನ ಭದ್ರತಾ ಸಿಬ್ಬಂದಿ ಗ್ರಾಹಕರನ್ನು ಸೆಳೆಯಲು ರಸ್ತೆಗೆ ಏಕಾಏಕಿ ಅಡ್ಡ ಬರುತ್ತಿರುವುದರಿಂದ ಹಾಗೂ ಗ್ರಾಹಕರ ವಾಹನಗಳು ಹಿಮ್ಮುಖವಾಗಿ ಚಲಿಸುವ ವೇಳೆ ಸಣ್ಣಪುಟ್ಟ ಅಪಘಾತ ಸಂಭವಿಸುತ್ತಲೇ ಇವೆ. ದೊಡ್ಡಮಟ್ಟದ ಅನಾಹುತ ಸಂಭವಿಸುವ ಮುನ್ನ ಪೊಲೀಸರು ಇತ್ತ ಗಮನ ಹರಿಸಿ, ಹೋಟೆಲ್‌ಗಳ ಮುಂದೆ ಬೇಕಾಬಿಟ್ಟಿ ನಿಲ್ಲುವ ಹಾಗೂ ರಸ್ತೆಗೆ ಚಾಚಿಕೊಂಡು ನಿಲ್ಲಿಸುವ ವಾಹನಗಳಿಗೆ ಕಡಿವಾಣ ಹಾಕಬೇಕು. ಈ ಭಾಗದಲ್ಲಿ ಏನಾದರು ಸಾವು–ನೋವು ಸಂಭವಿಸಿದರೆ, ಸಂಬಂಧಪಟ್ಟ ಪೊಲೀಸರು ಹಾಗೂ ಹೋಟೆಲ್ ಆಡಳಿತ ವರ್ಗವೇ ಕಾರಣವಾಗಲಿದ್ದು, ಕೂಡಲೇ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು, ಸ್ಥಳೀಯರು ಆಗ್ರಹಿಸಿದ್ದಾರೆ.

ಧನ್ವಂತ್ರಿ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆ ಜಂಕ್ಷನ್‌ನಲ್ಲಿಯೇ ತಳ್ಳುವ ಗಾಡಿ ನಿಲ್ಲಿಸಿಕೊಂಡಿರುವವರಿಂದ ರಸ್ತೆ ದಾಟಲು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಅಲ್ಲದೆ ವಾಹನ ತಿರುವು ಪಡೆಯಲು ಕಷ್ಟವಾಗುತ್ತಿದ್ದು, ಪ್ರತಿದಿನ ಬೀದಿ ಬದಿ ವ್ಯಾಪಾರಿ ಹಾಗೂ ವಾಹನ ಸವಾರರ ನಡುವೆ ಮಾತಿನ ಚಕಮಕಿ ನಡೆಯುತ್ತಲೇ ಇದೆ. ಸಯ್ಯಾಜಿರಾವ್ ರಸ್ತೆಯುದ್ದಕ್ಕೂ ಪಾದಚಾರಿ ಮಾರ್ಗ ಅತಿಕ್ರಮಿಸಿರುವ ವ್ಯಾಪಾರಿಗಳಿಂದ ಜನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ದೇವರಾಜ ಅರಸ್ ರಸ್ತೆ–ಜೆಎಲ್‌ಬಿ ರಸ್ತೆ ಜಂಕ್ಷನ್‌ನಲ್ಲಿ ಕೆಲವರು ಅವೈಜ್ಞಾನಿಕವಾಗಿ ವಾಹನ ನಿಲುಗಡೆ ಮಾಡುತ್ತಿದ್ದಾರೆ. ಜಗನ್ಮೋಹನ ಪ್ಯಾಲೇಸ್ ಬಳಿ ಮಹಾರಾಣಿ ಪದವಿ ಪೂರ್ವ ಕಾಲೇಜಿಗೆ ಹೋಗುವ ರಸ್ತೆಯ ತಿರುವಿನಲ್ಲಿ ರಸ್ತೆ ಮಧ್ಯಭಾಗದಲ್ಲೇ ವಾಹನ ನಿಲುಗಡೆ ಮಾಡುತ್ತಿದ್ದು, ಇಲ್ಲಿಯೂ ಸಮಸ್ಯೆ ಉಂಟಾಗಿದೆ. ಈ ಎಲ್ಲಾ ಕಡೆ ಪೊಲೀಸರು ಕಟ್ಟುನಿಟ್ಟಾಗಿ ಕಾರ್ಯಾಚರಣೆ ನಡೆಸಿ, ಸಂಭವನೀಯ ಅನಾಹುತ ತಡೆಗಟ್ಟುವಂತೆ ಸಾರ್ವಜನಿಕರು ಒತಾಯಿಸಿದ್ದಾರೆ.

ರೆಬಲ್ ಸಿದ್ದರಾಮಯ್ಯನೊ, ಕಾಂಪ್ರಮೈಸ್ ಸಿದ್ದರಾಮಯ್ಯನೊ...!

ಮೈಸೂರಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯೋಕ್ತಿ!

ಮೈಸೂರು,ನ.24(ಬಿಎಲ್‌ಯು)– ರೆಬಲ್ ಸಿದ್ದರಾಮಯ್ಯನೊ ಅಥವಾ ಕಾಂಪ್ರಮೈಸ್ ಸಿದ್ದರಾಮಯ್ಯನೊ ಎಂಬುವುದು ಈಗ ತಿಳಿಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಳೆ ಗಟ್ಟಿತನವನ್ನು ಸಿದ್ದರಾಮಯ್ಯ ಉಳಿಸಿಕೊಂಡಿದ್ದಾರೋ ಇಲ್ಲವೊ ಎಂಬುದು ಕೂಡ ಈಗ ತಿಳಿಯಲಿದೆ.

ಅಧಿಕಾರ ಹಸ್ತಾಂತರದ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ನಿಲುವು ಯಾವ ರೀತಿ ಇರುತ್ತದೆ ಎಂಬುದು ಈಗ ಸ್ಪಷ್ಟವಾಗಲಿದೆ.

ನಾನೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಪದೇ ಪದೆ ಸಿದ್ದರಾಮಯ್ಯ ಅವರು ಎದೆ ಬಡಿದುಕೊಂಡು ಹೇಳಿಕೊಳ್ಳುವುದನ್ನು ನೋಡಿದಾಗ ಇವರ ರಾಜಕೀಯ ಜೀವನ ಇಂತಹ ಹೀನಾಯ ಪರಿಸ್ಥಿತಿಗೆ ಬಂದಿತಲ್ಲ ಎಂದು ಬೇಸರವಾಗುತ್ತದೆ ಎಂದು ಬಸವರಾಜ ಬೊಮ್ಮಾಯಿ ಲೇವಡಿ ಮಾಡಿದರು.

ಕಾಂಗ್ರೆಸ್ ನಾಯಕರ ಅಂತಃಕಲಹ ಹಾಗೂ ಅಧಿಕಾರ ದಾಹ ಎಷ್ಟರ ಮಟ್ಟಿಗೆ ಇದೆ ಎಂಬುದು ಇವರ ವರ್ತನೆಯಿಂದ ಸ್ಪಷ್ಟವಾಗುತ್ತಿದೆ. ಈ ಕಾರಣದಿಂದಲೇ ಕಾಂಗ್ರೆಸ್ ಇಡೀ ದೇಶದಲ್ಲೇ ನೆಲ ಕಚ್ಚಿ, ಅಧಿಕಾರದಿಂದ ದೂರವಿದೆ ಎಂದು ಟೀಕಿಸಿದರು.

ಜನರ ಬೇಸರ: ಇವರ ರಾಜಕೀಯ ಅಂತಃಕಲಹದಿಂದ ರಾಜ್ಯದ ಆಡಳಿತ ಹೀನಾಯ ಪರಿಸ್ಥಿತಿಗೆ ತಲುಪಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇಂತಹ ಸರ್ಕಾರವನ್ನು ಅಧಿಕಾರಕ್ಕೆ ತಂದಿರುವ ಬಗ್ಗೆ ರಾಜ್ಯದ ಜನ ಬೇಸರಗೊಂಡಿದ್ದಾರೆ ಎಂದರು.

40 ಪರ್ಸೆಂಟ್ ಸರ್ಕಾರ ಎಂದು ನಮ್ಮ ವಿರುದ್ಧ ಆರೋಪ ಮಾಡುತ್ತಿದ್ದರು. ಆದರೆ ಅವರೇ ನಡೆಸಿದ ತನಿಖೆಯಿಂದ ನಮ್ಮ ಸರ್ಕಾರದ ಭ್ರಷ್ಟಾಚಾರ ಆರೋಪವನ್ನು ಸಾಬೀತು ಮಾಡಲು ಸಾಧ್ಯವಾಗಲಿಲ್ಲ. ಈ ಮೂಲಕ ನಮ್ಮ ಸರ್ಕಾರ ಭ್ರಷ್ಟಾಚಾರ ಮುಕ್ತವಾಗಿದೆ ಎಂದು ಹೇಳಿದರು.

80 ಪರ್ಸೆಂಟ್ ಸರ್ಕಾರ

“ಈಗ ಕಾಂಗ್ರೆಸ್ ಸರ್ಕಾರವೇ 80 ಪರ್ಸೆಂಟ್ ಸರ್ಕಾರವಾಗಿದೆ. ಹೊರ ಗುತ್ತಿಗೆಯಿಂದ ಹಿಡಿದು ಪ್ರತಿಯೊಂದು ಇಲಾಖೆಯಲ್ಲೂ ಹಣವಿಲ್ಲದೆ ಯಾವ ಕೆಲಸ ನಡೆಯದ ಪರಿಸ್ಥಿತಿ ಎದುರಾಗಿದೆ. ಕಾಂಗ್ರೆಸ್ ಪಕ್ಷ ಹಾಗೂ ಅವರ ಹೈಕಮಾಂಡ್ ಹಣದ ಮೇಲೆ ನಿಂತಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೇ? ಇವರ ಭ್ರಷ್ಟಾಚಾರ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಹೀನಾಯ ಸ್ಥಿತಿಗೆ ದೂಡಿದೆ. ಸರ್ಕಾರದಲ್ಲಿ ನಡೆಯುತ್ತಿರುವ ಈ ಬೆಳವಣಿಗೆ ಹಿನ್ನೆಲೆಯಲ್ಲಿ ಬಿಜೆಪಿ ಯಾವುದೇ ರೀತಿಯ ಲಾಭ– ನಷ್ಟದ ಲೆಕ್ಕಾಚಾರ ಹಾಕುವುದಿಲ್ಲ.

–ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ

ಮಾಜಿ ಸೈನಿಕರ ಸಂಘದ ಬೇಡಿಕೆಗೆ ಡಿಸಿ ಸ್ಪಂದನೆ



ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ಸೋಮವಾರ ಮಾಜಿ ಸೈನಿಕರ ಸಭೆ ನಡೆಸಿ, ಮಾತನಾಡಿದರು.

ಮೈಸೂರು,ನ.24–ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಮೈಸೂರು ಜಿಲ್ಲಾ ಘಟಕದ ಬೇಡಿಕೆಗಳಿಗೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಸಕಾರಾತ್ಮಕವಾಗಿ ಸ್ಪಂದಿಸಿ ಬೇಡಿಕೆಗಳನ್ನು ಈಡೇರಿಸುವುದಾಗಿ ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು ಜವಾನ್ ಸಮ್ಮಾನ್ ಬಡಾವಣೆ ನಿರ್ಮಿಸಿ ಉಚಿತ ನಿವೇಶನ ಕೇಳಿದ್ದೀರಿ. ಮಾಜಿ ಸೈನಿಕರಿಗೆ ಹಾಗೂ ಅವಲಂಬಿತರಿಗೆ ಇಸಿಹೆಚ್‌ಎಸ್ ಸೇವೆ ನೀಡಲು ಕೆಲವು ಖಾಸಗಿ ಆಸ್ಪತ್ರೆಗಳು ನಿರಾಕರಿಸುತ್ತಿವೆ ಈ ಸಮಸ್ಯೆ ಬಗೆಹರಿಸಬೇಕು. ಮೈಸೂರಿನಲ್ಲಿ ನಿರ್ಮಿಸುತ್ತಿರುವ ಯುದ್ಧ ಸ್ಮಾರಕ ಸಮಿತಿಗೆ ಸಂಘದ ಅಧ್ಯಕ್ಷರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಮಾಜಿ ಸೈನಿಕರ ಸಭೆಯನ್ನು ಪ್ರತಿವರ್ಷ ನಡೆಸಬೇಕು. ಉಚಿತ ನಿವೇಶನಕ್ಕೆ ಇದುವರೆಗೆ ಅರ್ಜಿ ಸಲ್ಲಿಸದ ಮಾಜಿ ಸೈನಿಕರಿಗೆ ಮತ್ತೊಂದು ಅವಕಾಶ ನೀಡಬೇಕು. ನಮ್ಮ ಸಂಘಕ್ಕೆ ಮಾನ್ಯತೆ ನೀಡಬೇಕು ಎಂದು ಕೇಳಿದ್ದೀರಿ.

ನಿಮ್ಮ ಎಲ್ಲಾ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲು ಪ್ರಯತ್ನ ಮಾಡುತ್ತೇವೆ. ಮಾಜಿ ಸೈನಿಕ ಕುಂದು ಕೊರತೆ ಸಭೆಯನ್ನು ತಿಂಗಳಿಗೊಮ್ಮೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು. ಯುದ್ಧ ಸ್ಮಾರಕ ಜಾಗದಲ್ಲಿ ನೆಟ್ಟಿರುವ ಗಿಡಗಳನ್ನು ತೆಗೆಸಲು ತಿಳಿಸಿದರು. ಮಾಜಿ ಸೈನಿಕರ ವಾಟ್ಸಆಪ್ ಗ್ರೂಪ್ ಮಾಡಿ ಮಾಹಿತಿ ನೀಡಬೇಕು. ಉಚಿತ ನಿವೇಶನಕ್ಕೆ ಅರ್ಜಿ ಸಲ್ಲಿಸದ ಮಾಜಿ ಸೈನಿಕರು ಮಾರ್ಚ್ 31, 2026ರೊಳಗೆ ಅರ್ಜಿ ಸಲ್ಲಿಸಬಹುದು ಎಂದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಡಿಸಿ ಪಿ.ಶಿವರಾಜು, ಸುದರ್ಶನ್, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ.ಪಿ.ದಿವಾಕರ್, ಪ್ರಧಾನ ಕಾರ್ಯದರ್ಶಿ ಎಸ್.ನಟರಾಜು, ಚಿತ್ರಾ ಬಿ.ಎಂ., ಹೆಚ್.ಎಸ್.ನಂಜುಂಡಸ್ವಾಮಿ, ನೀಲಕಂಠ, ಕುಮಾರಶೆಟ್ಟಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ

ನೈತಿಕತೆ ಇಲ್ಲದ ತಂತ್ರಜ್ಞಾನ ಬೆಳವಣಿಗೆ ಅಪಾಯಕಾರಿ

ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಆತಂಕ



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕಕ್ಕೆ ಸೋಮವಾರ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಭೇಟಿ ನೀಡಿ ವಿವೇಕಾನಂದರು ಇಲ್ಲಿ ವಾಸ್ತವ್ಯ ಹೂಡಿದ್ದ ಬಗ್ಗೆ ಮಾಹಿತಿ ಪಡೆದರು.

ಮೈಸೂರು, ನ.24(ಬಿಎಲ್‌ಯು)– ನೈತಿಕತೆ ಇಲ್ಲದ ತಂತ್ರಜ್ಞಾನದ ಬೆಳವಣಿಗೆ ಅಪಾಯಕಾರಿ ಎಂದು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸಮಾರಂಭದ ಸಮರ್ಪಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ (ಎಐ) ಸೇರಿದಂತೆ ಯಾವುದೇ ರೀತಿಯ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದರ ಜೊತೆಗೆ ನೈತಿಕತೆ ಅನುಸರಿಸಬೇಕು. ನೈತಿಕತೆ ಇಲ್ಲದ ತಂತ್ರಜ್ಞಾನ ಅಪಾಯಕಾರಿ ಎಂದು ಅಭಿಪ್ರಾಯಪಟ್ಟರು.

ರಾಮಕೃಷ್ಣ ಆಶ್ರಮ ಆಧ್ಯಾತ್ಮಿಕ, ಧಾರ್ಮಿಕ, ಶೈಕ್ಷಣಿಕವಾಗಿ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದೆ. ಸಾವಿರಾರು ಮಕ್ಕಳನ್ನು ಭವಿಷ್ಯದ ಉತ್ತಮ ಪ್ರಜೆಯಾಗಿ ರೂಪಿಸುವುದರ ಜೊತೆಗೆ, ಸಮಾಜಕ್ಕೆ ಒಳ್ಳೆಯ ನಾಯಕತ್ವದ ವ್ಯಕ್ತಿಗಳನ್ನು ಕೊಡುಗೆಯಾಗಿ ನೀಡುತ್ತಿದೆ. ಆರ್ಥಿಕವಾಗಿ ದುರ್ಬಲರಾದ ಮಕ್ಕಳಿಗೆ ವಿದ್ಯಾರ್ಥಿ ವೇತನ ಸೇರಿದಂತೆ ಇತರೆ ಸೌಲಭ್ಯ ನೀಡಿ ಅವರ ಶಿಕ್ಷಣಕ್ಕೆ ದಾರಿ ದೀಪವಾಗಿದೆ ಎಂದು ಗಜೇಂದ್ರ ಸಿಂಗ್ ಶೇಖಾವತ್ ಪ್ರಶಂಸೆ ವ್ಯಕ್ತಪಡಿಸಿದರು.

ವಿವೇಕಾನಂದರ ಚಿಂತನೆಯನ್ನು ಸಾದರಪಡಿಸುತ್ತಾ ಆಧ್ಯಾತ್ಮಿಕ ಚಿಂತನೆಯ ಮಹತ್ವವನ್ನು ಸಮಾಜಕ್ಕೆ ಸಾರಿ ಹೇಳುತ್ತಿದೆ. ಈ ಮೂಲಕ ಮೈಸೂರಿನ ರಾಮಕೃಷ್ಣ ಆಶ್ರಮ ಕರ್ನಾಟಕದ ಆಧ್ಯಾತ್ಮಿಕ ಪಾರಂಪರಿಕ ಕೇಂದ್ರವಾಗಿದೆ ಎಂದು ಹೇಳಿದರು.


ದೇಶದ ಬೆಳವಣಿಗೆಗೆ ತನ್ನದೇ ಆದ ಜನೋಪಯೋಗಿ ಕೆಲಸ ಮಾಡುತ್ತಾ, ಸ್ವಾಸ್ಥ್ಯ ಸಮಾಜಕ್ಕೆ ಕೊಡುಗೆ ನೀಡುತ್ತಿರುವ ರಾಮಕೃಷ್ಣ ಆಶ್ರಮದ ಕಾರ್ಯ ಶ್ಲಾಘನೀಯ ಎಂದು ಗಜೇಂದ್ರ ಸಿಂಗ್ ಶೇಖಾವತ್ ತಿಳಿಸಿದರು. ಸ್ವಾಮಿ ವಿವೇಕಾನಂದರು ಅಮೇರಿಕಾದ ಚಿಕಾಗೊದಲ್ಲಿ ನಡೆದ ವಿಶ್ವ ಧರ್ಮ ಸಂಸತ್ತಿನಲ್ಲಿ ಪಾಲ್ಗೊಳ್ಳಲು ಮೈಸೂರು ಪ್ರೇರಣೆಯಾಯಿತು ಎಂದು ಶ್ರೀ ಆದಿಚುಂಚನಗಿರಿ ಮಠದ ಪೀಠಾಧೀಶರಾದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿ ಇಲ್ಲೇ ವಾಸ್ತವ್ಯ ಹೂಡಿದಾಗ ಮೈಸೂರು ಮಹಾರಾಜರಾಗಿದ್ದ ಚಾಮರಾಜ ಒಡೆಯರ್ ಅವರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ಅಮೇರಿಕಾದಲ್ಲಿ ನಡೆಯುವ ವಿಶ್ವ ಧರ್ಮ ಸಂಸತ್ತಿನಲ್ಲಿ ಪಾಲ್ಗೊಳ್ಳುವಂತೆ ಚಾಮರಾಜ ಒಡೆಯರ್ ಅವರು ವಿವೇಕಾನಂದರನ್ನು ಪ್ರೇರೇಪಿಸಿದರು ಎಂದು ಹೇಳಿದರು.

ವಿಶ್ವ ಧರ್ಮ ಸಂಸತ್ತಿನಲ್ಲಿ ಸ್ವಾಮಿ ವಿವೇಕಾನಂದರು ಆಡಿದ ಮಾತುಗಳು ಜಗತ್ತಿಗೆ ಸ್ಫೂರ್ತಿಯಾಯಿತು. ವಿದೇಶಿಯರಿಗೆ ಭಾರತದ ಸಂಸ್ಕೃತಿ, ಪರಂಪರೆಯ ಮಹತ್ವವನ್ನು ಪರಿಚಯ ಮಾಡಿದರು. ಈ ಮೂಲಕ ವಿಶ್ವದಲ್ಲಿ ಭಾರತದ ಮರು ಚರಿತ್ರೆ ಬರೆಯಲು ಕಾರಣೀಭೂತರಾದರು ಎಂದು ತಿಳಿಸಿದರು.

ಮೈಸೂರಿನ ರಾಮಕೃಷ್ಣ ಆಶ್ರಮ ಸಮಾಜಮುಖಿ ಕೆಲಸ ಮಾಡುತ್ತಿದೆ. ಆಧ್ಯಾತ್ಮಿಕ, ಧಾರ್ಮಿಕ, ಶೈಕ್ಷಣಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ರಾಮಕೃಷ್ಣ ಆಶ್ರಮ ವ್ಯಕ್ತಿಯನ್ನು ಶಕ್ತಿಯಾಗಿ ರೂಪಿಸುತ್ತಿದೆ ಎಂದು ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಸನಾತನ ಧರ್ಮದ ಮೇಲೆ ನಿರಂತರ ದಾಳಿ ನಡೆಯುತ್ತಿದೆ



ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸಮಾರಂಭದ ಸಮರ್ಪಣಾ ಸಮಾವೇಶದಲ್ಲಿ ಸೋಮವಾರ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಮಾತನಾಡಿದರು.

ಸನಾತನ ಧರ್ಮ ವಿಶ್ವವ್ಯಾಪಿ ವ್ಯಾಪಿಸುತ್ತಿರುವ ಸಂದರ್ಭದಲ್ಲಿ ಹಿಂದೂ ಧರ್ಮದ ಮೇಲೆ ನಿರಂತರ ದಾಳಿಗಳು ನಡೆಯುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆತಂಕ ವ್ಯಕ್ತಪಡಿಸಿದರು.

ಹಿಂದೂ ಧರ್ಮ ಹಾಗೂ ಭಾರತೀಯತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಹಿಂದೆ ಭಾರತದ ಭೂಮಿ ಅಥವಾ ಸಂಪತ್ತಿಗಾಗಿ ದಾಳಿ ಮಾಡುವುದರ ಜೊತೆಗೆ ಇಲ್ಲಿನ ಸಂಸ್ಕೃತಿ ಮೇಲೆ ದಾಳಿ ಮಾಡಿದರು. ಅಂತಹ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರಂತಹ ನೂರಾರು ಸಂತರು ಈ ದೇಶವನ್ನು ಉಳಿಸಿದ್ದಾರೆ ಎಂದು ಸಮಾಧಾನ ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರು ಸಣ್ಣ ವಯಸ್ಸಿನಲ್ಲೇ ದೊಡ್ಡ ವಿಚಾರಗಳನ್ನು ತಿಳಿದುಕೊಂಡಿದ್ದರು. ಪ್ರತಿಯೊಂದು ಪ್ರಶ್ನೆಗಳಿಗೆ ಉತ್ತರವಾಗಿದ್ದರು. ಎಂತಹ ಕಗ್ಗಂಟಾದ ಸಮಸ್ಯೆಗಳಿಗೆ ಅವರಲ್ಲಿ ಪರಿಹಾರವಿತ್ತು ಎಂದು ಬಸವರಾಜ ಬೊಮ್ಮಾಯಿ ಅವರ ಅಭಿಪ್ರಾಯಪಟ್ಟರು.

ಜ್ಞಾನ ಮತ್ತು ಧ್ಯಾನದಲ್ಲಿ ಯಾರು ಪರಿಪೂರ್ಣತೆ ಕಾಣುತ್ತಾರೊ ಅವರಿಗೆ ದೇವರನ್ನು ಕಾಣುವ ಸನ್ಮಾರ್ಗಕ್ಕೆ ದಾರಿದೀಪವಾಗುತ್ತದೆ ಎಂದು ವಿವೇಕಾನಂದರು ಹೇಳಿದ್ದಾರೆ.

ಧರ್ಮ, ಸತ್ಯ, ಮಾನವೀಯತೆಯಿಂದ ಸಾಗಲು ಭಗವಂತ ನಮ್ಮನ್ನು ಸೃಷ್ಟಿ ಮಾಡಿದ್ದಾನೆ. ಆದ ಕಾರಣ ಧರ್ಮದಿಂದ ಇಂದು ಸತ್ಕಾರ ಸಾಧಿಸಬೇಕು, ಬುದ್ಧಿಯಿಂದ ಸನ್ಮಾರ್ಗ ಕಂಡುಕೊಂಡು ಭಗವಂತನ ದರ್ಶನ ಪಡೆಯಬೇಕು ಎಂದು ಬಸವರಾಜ ಬೊಮ್ಮಾಯಿ ಅವರು ಸಲಹೆ ನೀಡಿದರು.

ಅಮೇರಿಕಾದ ಆಧ್ಯಾತ್ಮಿಕ ಸಮಾರಂಭಗಳಲ್ಲಿ ವಿವೇಕಾನಂದರ ಹೆಸರು ಉಲ್ಲೇಖ

ಅಮೇರಿಕಾದಲ್ಲಿ ಯಾವುದೇ ಆಧ್ಯಾತ್ಮಿಕ ಸಮಾರಂಭ ನಡೆದರೂ ವಿವೇಕಾನಂದರ ಹೆಸರನ್ನು ಈಗಲೂ ಉಲ್ಲೇಖಿಸಲಾಗುತ್ತದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಅಮೇರಿಕಾದ ಚಿಕಾಗೊದಲ್ಲಿ ನಡೆದ ವಿಶ್ವ ಧರ್ಮ ಸಂಸತ್ತಿನಲ್ಲಿ ವಿವೇಕಾನಂದರು ಅಂದು ಆಡಿದ ಮಾತುಗಳು ಇದಕ್ಕೆಲ್ಲಾ ಪ್ರೇರಣೆಯಾಯಿತು. ಅಂದು ವಿವೇಕಾನಂದರು ಆಡಿದ ಒಂದೊಂದು ಮಾತು ವಿಶ್ವವನ್ನು ಕಣ್ತೆರೆಸಿತು ಎಂದರು.

ರಾಷ್ಟ್ರಕವಿ ಕುವೆಂಪು ಅವರು ವಿವೇಕಾನಂದರಿಂದ ಪ್ರಭಾವಿತರಾಗಿದ್ದರು. ಕುವೆಂಪು ಅವರ ಬಹಳಷ್ಟು ಬರಹಕ್ಕೆ ವಿವೇಕಾನಂದರು ಸೂರ್ತಿಯಾಗಿದ್ದರು. ಈ ಕಾರಣದಿಂದಲೇ ಕುವೆಂಪು ಅವರು ರಾಮಾಯಣ ದರ್ಶನ ಬರೆಯಲು ಸಾಧ್ಯವಾಯಿತು ಎಂದು ಸ್ವಾಮೀಜಿ ತಿಳಿಸಿದರು. ರಾಮಕೃಷ್ಣ ಆಶ್ರಮ ಆಧ್ಯಾತ್ಮಿಕತೆಯ ಜೊತೆಗೆ ಸಾಹಿತ್ಯ, ಸಂಸ್ಕೃತಿ ಕ್ಷೇತ್ರಕ್ಕೂ ಕೂಡ ಅವಿಸ್ಮರಣೀಯ ಕೊಡುಗೆ ನೀಡುತ್ತಿದೆ ಎಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ

ಇದು ಕನ್ನಡ ರಾಜ್ಯೋತ್ಸವವಲ್ಲ; ಕರ್ನಾಟಕ ರಾಜ್ಯೋತ್ಸವ: ಪ್ರತಾಪ್‌ಸಿಂಹ


ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ವತಿಯಿಂದ ರಾಜ್ಯೋತ್ಸವ ಪುರಸ್ಕೃತ ಸಾಧಕರನ್ನು ಸನ್ಮಾನಿಸಲಾಯಿತು. ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಸಂಘದ ಅಧ್ಯಕ್ಷ ಗೋಲ್ಡನ್ ಸುರೇಶ್ ಮತ್ತಿತರರಿದ್ದರು.

ಮೈಸೂರು, ನ.24(ಎಂಕೆ)– ಮೈಸೂರಿನ ಅಶೋಕ ರಸ್ತೆ 5ನೇ ಕ್ರಾಸ್‌ನಲ್ಲಿ ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ವತಿಯಿಂದ ಸೋಮವಾರ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಗೌರಿಶಂಕರ ನಂದಿಧ್ವಜ ಸಂಘದ ಅಧ್ಯಕ್ಷ ಉಡಿಗಾಲ ಮಹದೇವಪ್ಪ, ಕರಕುಶಲ ಕಲಾವಿದೆ ಹೇಮಾ ಶೇಖರ್, ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ, ಹಿರಿಯ ರಂಗಕರ್ಮಿ ಮೈಮ್ ರಮೇಶ್, ನೃತ್ಯಗುರು ವಿದ್ವಾನ್ ಪ್ರೊ.ಕೆ. ರಾಮಮೂರ್ತಿರಾವ್ ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರನ್ನು ಸನ್ಮಾನಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ನವೆಂಬರ್ ತಿಂಗಳು ಬಂತೆಂದರೆ ರಾಜ್ಯದಲ್ಲಿ ಸಡಗರ–ಸಂಭ್ರಮ ಮನೆ ಮಾಡಲಿದೆ. ಇದು ಕರ್ನಾಟಕ ರಾಜ್ಯೋತ್ಸವವೇ ಹೊರತು ಕನ್ನಡ ರಾಜ್ಯೋತ್ಸವ ಅಲ್ಲ. ಬ್ರಿಟಿಷರ ಕಾಲದಲ್ಲಿ ರಾಜ್ಯದ ಒಂದಷ್ಟು ಭಾಗಗಳು ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕವಾಗಿತ್ತು. ಕಾಸರಗೂಡು ಮತ್ತು ಕರಾವಳಿ ಕೂಡ ಬೇರೆಯಾಗಿತ್ತು. ಎಲ್ಲವನ್ನೂ ಒಗ್ಗೂಡಿಸಿ ಭಾಷೆಯ ಆಧಾರದಲ್ಲಿ ರಚನೆಯಾದ ಮೈಸೂರು ರಾಜ್ಯಕ್ಕೆ ದಿವಂಗತ ಡಿ.ದೇವರಾಜ ಅರಸು ಅವರ ಕಾಲದಲ್ಲಿ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಯಿತು. ಇದರ ದ್ಯೋತಕವಾಗಿ ಕರ್ನಾಟಕ ರಾಜ್ಯೋತ್ಸವ ಆಚರಿಸುತ್ತಿದ್ದೇವೆ ಎಂದರು.

> ಎದೆಗೆ ಹತ್ತಿರವಾದ ಕನ್ನಡ ಭಾಷೆಯನ್ನು ಉಳಿಸಿ–ಬೆಳೆಸಿಕೊಂಡು ಹೋಗಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಶ್ಲಾಘನೀಯ. ನಾಡು–ನುಡಿಗೆ ಮೈಸೂರು ಮಹಾರಾಜರ ಕೊಡುಗೆ ಅಪಾರವಾಗಿದ್ದು, ಸಮಾಜದಲ್ಲಿನ ಸಾಧಕರನ್ನು ಗುರ್ತಿಸಿ, ಸನ್ಮಾನಿಸಿ ಸಮಾಜದೊಂದಿಗೆ ನಾವಿದ್ದೇವೆ ಎಂಬುದನ್ನು ತಿಳಿಸುವುದು ಈ ವೇಳೆ ವಿಶೇಷವಾಗಿದೆ.
>
> – **ಪ್ರತಾಪ್ ಸಿಂಹ,** ಮಾಜಿ ಸಂಸದ

ಒಂದೊಂದು ರಾಜ್ಯಕ್ಕೂ ಒಂದೊಂದು ಭಾಷೆ ಇರುವಂತೆ ನಮ್ಮ ಕರ್ನಾಟಕಕ್ಕೆ ಕನ್ನಡ ಭಾಷೆ ಇದೆ. ಕನ್ನಡ ಎನ್ನುವುದು ಕೇವಲ ಭಾಷೆಯಷ್ಟೇ ಅಲ್ಲ. ಅದರಲ್ಲಿ ಸಂಸ್ಕೃತಿಯೂ ಅಡಗಿದೆ. ತಾಯಿ ಭುವನೇಶ್ವರಿಯನ್ನು ಪೂಜಿಸುತ್ತೇವೆ. ಅರಿಸಿನ–ಕುಂಕುಮ ದ್ಯೋತಕವಾದ ಭಾವುಟ ಇದೆ. ರಾಷ್ಟ್ರಕವಿ ಕುವೆಂಪು ರಚಿತ ಸಮಗ್ರ ಚಿತ್ರಣ ಕಟ್ಟಿಕೊಡುವ ನಾಡಗೀತೆ ಇದೆ. ಈ ಮೂಲಕ ಕರ್ನಾಟಕ ತನ್ನದೇ ವಿಶಿಷ್ಟ ಸ್ಥಾನ ಪಡೆದಿದೆ ಎಂದರು.

ರಾಜ್ಯದಲ್ಲಿ ನಮ್ಮ ಭಾಷೆಯ ಸೊಗಡು ಒಂದೊಂದು ಕಡೆಗೆ ಹೋದಂತೆ ಬದಲಾದರೂ ನಮ್ಮನ್ನೆಲ್ಲಾ ಒಗ್ಗೂಡಿಸಿರುವುದು ಕನ್ನಡ ಭಾಷೆ. ಮಕ್ಕಳು ಶಾಲೆಯಲ್ಲಿ ಯಾವ ಭಾಷೆಯನ್ನಾದರೂ ಕಲಿಯಲಿ. ಮನೆಯಲ್ಲಿ ಕನ್ನಡದಲ್ಲೇ ಮಾತನಾಡಲಿ ಎಂದು ಆಶಿಸಿದರು.

ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ...

ಇದೇ ವೇಳೆ ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ಗೋಲ್ಡನ್ ಸುರೇಶ್ ಹುಟ್ಟುಹಬ್ಬದ ಅಂಗವಾಗಿ ಜೀವಧಾರ ರಕ್ತ ನಿಧಿ ಸಹಯೋಗದೊಂದಿಗೆ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ಗೋಲ್ಡನ್ ಸುರೇಶ್ ಮಾತನಾಡಿ, ನಾಡಿನೆಲ್ಲೆಡೆ ಕನ್ನಡ ರಾಜ್ಯೋತ್ಸವ ಆಚರಿಸುವ ಮೂಲಕ ಭಾಷಾ ಅಭಿಮಾನ ಮೆರೆಯಲಾಗುತ್ತಿದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಂಯೇ ವಿಶೇಷವಾಗಿದ್ದು, ಪ್ರತಿಯೊಬ್ಬರು ಭಾಷೆಯ ಮೇಲೆ ಅಭಿಮಾನ ಬೆಳೆಸಿಕೊಳ್ಳಬೇಕು ಎಂದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ.ಶೋಭಾ, ಮೈಸೂರು ವಿಶ್ವಕರ್ಮ ಸಂಘದ ಅಧ್ಯಕ್ಷ ತಿರುಮಲಾಚಾರ್, ಸಮಾಜ ಸೇವಕ ಚೈನ್‌ಸಿಂಗ್ ರಾಜ್ ಪುರೋಹಿತ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಸಂಘದ ಗೌರವಾಧ್ಯಕ್ಷ ಬಿ.ರವಿಪ್ರಕಾಶ್, ಕಾರ್ಯಾಧ್ಯಕ್ಷ ರಾಘವೇಂದ್ರ ಸೇಠ್, ಪ್ರಧಾನ ಕಾರ್ಯದರ್ಶಿ ಗುರು ಡೈಮಂಡ್, ಉಪಾಧ್ಯಕ್ಷ ಎಂ. ರಮೇಶ್, ಖಜಾಂಚಿ ಬಿ.ಸಿ.ಅಣ್ಣಯ್ಯಚಾರ್, ನಿರ್ದೇಶಕರಾದ ಆರ್.ಮಂಜುನಾಥ್, ನಾಗರಾಜ್ ಆಚಾರ್ಯ, ಪಿ. ಶಶಿಧರ್, ಎನ್. ಕುಮಾರ್, ಜೆ. ಪುಟ್ಟರಾಜು, ಬಿ.ಶಿವಕುಮಾರ್, ಎಂ.ಸಿ. ಮಹೇಶ್‌ಕುಮಾರ್, ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಚಾಮರಾಜ ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಪಿ. ಮಂಜುನಾಥ್, ಎಸ್.ಪ್ರಮೀಳಾ ಮತ್ತಿತರರಿದ್ದರು.

ಕುಕ್ಕರಹಳ್ಳಿ ಕೆರೆ ಸ್ವಚ್ಛತಾ ಅಭಿಯಾನ



ಮೈಸೂರು, ನ.24(ಎಂಕೆ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಗರಪಾಲಿಕೆ ಹಾಗೂ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್ ವತಿಯಿಂದ 'ಕುಕ್ಕರಹಳ್ಳಿ ಕೆರೆ ಸ್ವಚ್ಛತಾ ಅಭಿಯಾನ' ನಡೆಸಲಾಯಿತು.

ಕೆರೆ ಸುತ್ತಲೂ ಪಾಲಿಕೆ ಸಿಬ್ಬಂದಿ ಜೊತೆಗೆ ನೂರಾರು ವಿದ್ಯಾರ್ಥಿಗಳು, ಸ್ವಯಂ ಸೇವಕರು ಕಸ ಸಂಗ್ರಹಿಸುವ ಜೊತೆಗೆ ವಾಯು ವಿಹಾರಿಗಳಲ್ಲಿ ಕಸ ಬಿಸಾಡದಂತೆ ಮನವರಿಕೆ ಮಾಡಿಕೊಟ್ಟರು. ಪರಿಸರ ಸಂರಕ್ಷಣೆ ಹಾಗೂ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲರೂ ತಮ್ಮ ಜವಾಬ್ದಾರಿ ಅರಿತುಕೊಳ್ಳಬೇಕು ಎಂದು ತಿಳಿ ಹೇಳಲಾಯಿತು. ಪಾಲಿಕೆ ಹೆಲ್ತ್ ಇನ್ಸ್‌ಪೆಕ್ಟರ್ ದೇವರಾಜು, ಮೈಸೂರು ವಿವಿಯ ಚೆಲುವೇಶ್, ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನ ಮದ್ವೇಶ್ ಪಾಂಡುರಂಗಿ, ದೀಪಕ್ ರಾಮಚಂದ್ರ, ಆನಂದ ಕೃಷ್ಣಮೂರ್ತಿ, ಸಲೀಲಾ, ನಾಗವರ್ಷ, ಶ್ರೀನಾಥ್ ಭದ್ರಂ ಮತ್ತಿತರರಿದ್ದರು.

ಹಾಲುಮತದ ತತ್ವವನ್ನ ಮೊದಲು ವಿಶ್ವನಾಥ್ ಅಳವಡಿಸಿಕೊಳ್ಳಲಿ

ಮೈಸೂರು, ನ. 24– ನುಡಿದಂತೆ ನಡೆದು ರಾಜ್ಯದಲ್ಲಿ ಸುಭೀಕ್ಷ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ಅವರ ನಾಯಕತ್ವ ಬದಲಾಯಿಸಿದರೆ ಕರ್ನಾಟಕದಲ್ಲೂ ಮುಂದೆ ಬಿಹಾರದ ಪರಿಸ್ಥಿತಿ ಬರುಹುದು ಅಲ್ಲದೇ ಅಹಿಂದ ವರ್ಗ ಕಾಂಗ್ರೆಸ್ ಅನ್ನು ಕೈ ಬಿಡಬಹುದು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಎಚ್ಚರಿಸಿದ್ದಾರೆ.


ಸುಬ್ರಹ್ಮಣ್ಯ

ಸಿದ್ದರಾಮಯ್ಯ ನಾಯಕತ್ವ ಬದಲಾವಣೆ ಕುರಿತ ಚರ್ಚೆ ಬಗ್ಗೆ ಅವರು ಪ್ರತಿಕ್ರಿಯಿಸಿ, ಅವರನ್ನು ಕೇವಲ ಎರಡೂವರೆ ವರ್ಷಕ್ಕೆ ಸಿಎಂ ಎಂದು ಹೈಕಮಾಂಡ್ ಆಯ್ಕೆ ಮಾಡಿಲ್ಲ. ಆದರೂ ಕೆಲ ನಾಯಕರು ಈ ಬಗ್ಗೆ ಇಲ್ಲ ಸಲ್ಲದ್ದನ್ನು ಚರ್ಚಿಸುತ್ತಿದ್ದಾರೆ. ಇದು ಮುಂದೆ ಗ್ರೇಟರ್ ಬೆಂಗಳೂರು ಹಾಗೂ ಸ್ಥಳೀಯ ಸಂಸ್ಥೆಯ ಚುನಾವಣೆಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿವೆ ಎಂದು ಎಚ್ಚರಿಸಿದ್ದಾರೆ.

ಇನ್ನೂ ಹಾಲು ಕೆಟ್ಟರೂ ಹಾಲು ಮತ ಕೆಡುವುದಿಲ್ಲ ಎಂಬ ಎಚ್.ವಿಶ್ವನಾಥ್ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಅವರು, ಮೊದಲು ಹಾಲುಮತದ ತತ್ವವನ್ನು ನೀವು ಅಳವಡಿಸಿಕೊಳ್ಳಿ ಅಂತ ಕುಟುಕಿದ್ದಾರೆ.

ಕಾಂಗ್ರೆಸ್‌ನಿಂದಲೇ ನೀವು ಸಂಸದರಾಗಿದ್ದು ಅನ್ನೋದನ್ನ ಮರೆತುಬಿಟ್ರಾ? ಕೊನೆಗೆ ಬಿಜೆಪಿ ಸೇರಿಕೊಂಡ್ರಿ, ಪಕ್ಷದ ವಿರುದ್ಧವೇ ಮಾತನಾಡಿದ್ದರಿಂದ ಅವರೂ ನಿಮ್ಮನ್ನು ಬದಿಗಿಟ್ಟಿದ್ದಾರೆ. ಸಿದ್ದರಾಮಯ್ಯ ಅವರು ಎಂದಾವುದೇ ಮೂಢನಂಬಿಕೆ ನಂಬುವುದಿಲ್ಲ ಎಂಬುದು ಕರ್ನಾಟಕದ ಜನತೆಗೆ ಗೊತ್ತಿದೆ. ಆದರೂ ನೀವು ಸುಳ್ಳನ್ನೇ ಸತ್ಯ ಮಾಡಲು ಹೊರಟಿದ್ದೀರಿ. ಸಿದ್ದರಾಮಯ್ಯ ಡಿಕೆ ಬ್ರದರ್ಸ್ ತಲೆ ಮೇಲೆ ಕೈ ಇಟ್ಟು ಪ್ರಮಾಣ ಮಾಡಿದ್ದಾರೆ ಎಂದು ಜನರ ಕಿವಿಗೆ ಹೂ ಇಡಲು ಹೊರಟಿದ್ದೀರಿ. ಇದು ಶೋಭೆ ತರಲ್ಲ. ನಿಮ್ಮ ಹೇಳಿಕೆಗಳನ್ನು ನೋಡಿದರೆ ನೀವೇ ಹಾಲುಮತ ಸಮಾಜವನ್ನು ತುಳಿಯಲು ಹೊರಟಿದ್ದೀರಿ ಅನ್ನುವಂತೆ ಕಾಣುತ್ತದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಮಕ್ಕಳ ವಾರಾಂತ್ಯ ಅಭಿನಯ ತರಬೇತಿಗೆ ಆಹ್ವಾನ

ಮೈಸೂರು, ನ. 24– ಅದಮ್ಯ ರಂಗಶಾಲೆ ವತಿಯಿಂದ ವಿ. ಕೆ. ಪಬ್ಲಿಕ್ ಸ್ಕೂಲ್ ಸಹಯೋಗದೊಂದಿಗೆ ನ.29ರಿಂದ ಎರಡು ತಿಂಗಳ ಅವಧಿಯ ವಾರಾಂತ್ಯ ಅಭಿನಯ ಕಾರ್ಯಾಗಾರ ಹಾಗೂ ರಂಗ ತರಬೇತಿ ಕೋರ್ಸ್ ಆರಂಭವಾಗಲಿದ್ದು, ರಂಗಾಸಕ್ತ ಮಕ್ಕಳಿಂದ ನೋಂದಣಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಎರಡು ತಿಂಗಳ ಅವಧಿಯ ವಾರಾಂತ್ಯ ಮಕ್ಕಳ ಅಭಿನಯ ಮತ್ತು ರಂಗ ತರಬೇತಿ ಕಾರ್ಯಾಗಾರವು ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ವಿ. ಕೆ. ಪಬ್ಲಿಕ್ ಸ್ಕೂಲ್‌ನಲ್ಲಿ ನಡೆಯುತ್ತದೆ.

ಆಸಕ್ತ ಪೋಷಕರು ತಮ್ಮ ಮಕ್ಕಳನ್ನು ನ. 29ರ ಒಳಗೆ ದಾಖಲಿಸಿ ಪ್ರವೇಶಾತಿಯನ್ನು ಪಡೆದಿರಬೇಕು. ನವೆಂಬರ್ 29ರಿಂದಲೇ ತರಗತಿಗಳು ಪ್ರಾರಂಭವಾಗಲಿವೆ. ಅಭಿನಯ, ರಂಗ ಸಂಗೀತ, ಆಂಗಿಕ ಚಲನೆ, ಧ್ವನಿ ಬಳಕೆ ಮತ್ತು ಪರಿಷ್ಕರಣೆ, ಪ್ರಸಾದನ, ಬೆಳಕು, ರಂಗವಿನ್ಯಾಸ, ಪರಿಕರ ನಿರ್ಮಾಣ, ರಂಗ ಇತಿಹಾಸ, ನಾಟಕ ತಯಾರಿ, ನಾಟಕ ಪ್ರದರ್ಶನ ಸೇರಿದಂತೆ ರಂಗಭೂಮಿಯ ಮತ್ತು ಸಿನಿಮಾ ಮಾಧ್ಯಮದ ಬೇರೆ ಬೇರೆ ಆಯಾಮಗಳ ಕುರಿತು ಪರಿಚಯಾತ್ಮಕ ಪ್ರಾಯೋಗಿಕ ತರಗತಿಗಳು ನಡೆಯಲಿದ್ದು, ನುರಿತ ರಂಗಭೂಮಿಯ ಸಂಪನ್ಮೂಲ ಶಿಕ್ಷಕರು ತರಬೇತಿ ನೀಡಲಿದ್ದಾರೆ.

ಪ್ರತಿ ಶನಿವಾರ ಮತ್ತು ಭಾನುವಾರ ತರಗತಿ ನಡೆಯಲಿದ್ದು, ಶನಿವಾರ ಸಂಜೆ 5–30 ರಿಂದ 8 ರವರೆಗೂ ಭಾನುವಾರ ಬೆಳಿಗ್ಗೆ 10–30 ರಿಂದ ಮಧ್ಯಾಹ್ನ 2 ಗಂಟೆಯವರೆಗೂ ತರಗತಿಗಳು ನಡೆಯಲಿವೆ. ಕಾರ್ಯಾಗಾರಕ್ಕೆ ಗರಿಷ್ಠ 25 ಮಂದಿ ಮಕ್ಕಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಮಕ್ಕಳ ವಯೋಮಿತಿ 5 ವರ್ಷದಿಂದ 13 ವರ್ಷವಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿ ಚಂದ್ರು, ಮೊ. 8660103141 ಸಂಪರ್ಕಿಸಬಹುದು.

ಸನ್ಮಾನ


ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದಲ್ಲಿ ಭಾನುವಾರ ಜ್ಯೋತಿ ಶಂಕರ್, ನಾಗರಾಜ ವಿ. ಬೈರಿ,. ಬಿ.ಕೆ. ಮೀನಾಕ್ಷಿ ಅವರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಬಾರಿ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಶಿ ಪ್ರಸನ್ನಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಅನಾಥಾಲಯದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಮೈಸೂರು, ನ.24–ನವೆಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವವನ್ನು ಎಲ್ಲೆಡೆ ಆಚರಿಸಲಾಗುತ್ತಿದೆ. ಕುವೆಂಪು, ಬೇಂದ್ರೆ, ರನ್ನ, ಪಂಪ, ಡಾ.ರಾಜ್‌ಕುಮಾರ್ ಸೇರಿದಂತೆ ಎಲ್ಲರೂ ಸೇರಿ ಕನ್ನಡಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಎರಡು ಸಾವಿರ ಇತಿಹಾಸ ಹೊಂದಿರುವ ಭಾಷೆ ಉಳಿಯಬೇಕು. ಕನ್ನಡ ನಾಡು, ನುಡಿ, ಜಲ, ಭಾಷೆ ಉಳಿಯಬೇಕು. ನಾವು ಕನ್ನಡ ಮಾತನಾಡುವ ಜೊತೆಗೆ ಅನ್ಯರಿಗೂ ಕನ್ನಡ ಕಲಿಸಿದರೆ ಮಾತ್ರ ಭಾಷೆ ಉಳಿಯಲಿದೆ ಎಂದು ಮೈಸೂರಿನ ದಿನೇಶ್ ಕೋಚಿಂಗ್ ಸೆಂಟರ್‌ನ ಸಂಸ್ಥಾಪಕ ಹಾಗೂ ಅನಾಥಾಲಯದ ಗೌರವ ಕಾರ್ಯದರ್ಶಿ ಎನ್.ವಿ.ದಿನೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ಅನಾಥಾಲಯದ ಆವರಣದಲ್ಲಿ ಆಯೋಜಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಭುವನೇಶ್ವರಿಗೆ ಪುಷ್ಪಾರ್ಚನೆ ಸಲ್ಲಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದರು. ಮಕ್ಕಳು ಅನ್ಯಭಾಷೆಗಳ ಮೇಲೆ ಅತಿಯಾದ ವ್ಯಾಮೋಹ ಬೆಳೆಸಿಕೊಂಡು ಕನ್ನಡ ಬಳಕೆಯನ್ನು ಕಡಿಮೆ ಮಾಡದಂತೆ ಪೋಷಕರು ನಿಗಾ ವಹಿಸಬೇಕಿದೆ. ಆದರೆ ರಾಜ್ಯದ ರಾಜಧಾನಿಯಲ್ಲಿ ಅನ್ಯಭಾಷಿಗಳ ಪ್ರಾಬಲ್ಯ ಹೆಚ್ಚುವುದರ ಜೊತೆಗೆ ಕನ್ನಡ ಬಳಕೆ ಕಡಿಮೆ ಆಗುತ್ತಿದೆ. ಕನ್ನಡ ಫಲಕಗಳು ಕಡಿಮೆಯಾಗುತ್ತಿದೆ. ಇದು ನಿಜಕ್ಕೂ ದುರಾದೃಷ್ಟ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಆಕ್ಯುರೇಟ್ ಅಕಾಡೆಮಿಯ ಉಪನ್ಯಾಸಕಿ ಮೇಘಶ್ರೀ ಸುರೇಶ್ ಮಾತನಾಡಿ, ಕನ್ನಡ ಭಾಷೆಗೆ ಒಂದು ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವವಿದೆ. ಕನ್ನಡ ಭಾಷೆಯ ಬೆಳವಣಿಗೆ, ಸಂರಕ್ಷಣೆ ಕನ್ನಡ ರಾಜ್ಯೋತ್ಸವದ ಮೂಲಕ ಧ್ಯೇಯವಾಗಬೇಕು. ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಯನ್ನು ಬೆಳೆಸುವುದು, ನಾಡಿನ ಸಾಧಕರನ್ನು ಗುರುತಿಸಿ ಅವರನ್ನು ಗೌರವಿಸಿ ಪ್ರೋತ್ಸಾಹಿಸುವುದು, ಇತಿಹಾಸ, ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ, ಬೆಳೆಸುವ ಸಂಕಲ್ಪವನ್ನು ಮಾಡಬೇಕಿದೆ ಎಂದರು.

ಕನ್ನಡಿಗರ ಒಗ್ಗಟ್ಟು ಮತ್ತು ನಾಡಿನ ಬಗ್ಗೆ ಹೆಮ್ಮೆಯ ಭಾವನೆಯನ್ನು ಮೂಡಿಸುವುದು ಕನ್ನಡ ಹಬ್ಬದ ಉದ್ದೇಶವಾಗಬೇಕು. ನಮ್ಮ ಕನ್ನಡದ ಶ್ರೀಮಂತ ಪರಂಪರೆಯನ್ನು ಮತ್ತಷ್ಟು ವಿಸ್ತರಿಸುವ ಕೆಲಸ ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿಯಾಗಿದೆ. ಆ ದಿಸೆಯಲ್ಲಿ ಇಂದು ಯುವಕರು ಇಷ್ಟೊಂದು ಉತ್ಸಾಹ ಮತ್ತು ಸಂಭ್ರಮದ ಹಬ್ಬವನ್ನು ಎಲ್ಲರೂ ಸೇರಿ ಆಚರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ತಿಳಿಸಿದರು. ನಿವೃತ್ತ ಅಬಕಾರಿ ಡೆಪ್ಯುಟಿ ಕಮಿಷನರ್ ಹಾಗೂ ಅನಾಥಾಲಯದ ಜಂಟಿ ಕಾರ್ಯದರ್ಶಿ ವೆಂಕಟೇಶ್ ಪದಕಿ ಉಪಸ್ಥಿತರಿದ್ದರು.

ನೃತ್ಯ ಕಾರ್ಯಕ್ರಮ



ಮೈಸೂರಿನ ಗಾಯತ್ರಿಪುರಂ ನಲ್ಲಿರುವ ನೃತ್ಯ ಧಾರಾ ಸಂಸ್ಥೆಯ ವತಿಯಿಂದ ಕಲಾಮಂದಿರದ ಆವರಣದ ಕಿರು ರಂಗಮಂದಿರದಲ್ಲಿ ನರ್ತನಾಮೃತ–2025 ಸಬ್ ಜೂನಿಯರ್, ಜೂನಿಯರ್ ಮತ್ತು ಸೀನಿಯರ್ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮ ನಡೆಯಿತು. ನೃತ್ಯಧಾರ ಸಂಸ್ಥೆಯ ನಿರ್ದೇಶಕರಾದ ವಿದುಷಿ ಕುಮಾರಿ ಎಂ.ಎಸ್. ಅಮೃತ, ಕಾರ್ಯದರ್ಶಿ ಸುರೇಶ್. ಎಂ. ಬಿ ಮತ್ತು ನೃತ್ಯ ವಿದ್ಯಾ ಪೀಠ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರಾದ ವಿದುಷಿ ಸಿ.ಎನ್. ಅನಿತ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ನ.28ಕ್ಕೆ ಮೈಸೂರು ಸ್ನೇಹ ಸಂತೆ

ಮೈಸೂರು,ನ.24(ಜಿಎ)–ಇನ್ನರ್ ವ್ಹೀಲ್ ಮೈಸೂರು ಗೋಲ್ಡ್ ಕ್ಲಬ್ ವತಿಯಿಂದ ನ.28 ರಂದು ಕಾಳಿದಾಸ ರಸ್ತೆಯಲ್ಲಿರುವ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಸ್ನೇಹ ಸಂತೆ ಆಯೋಜಿಸಲಾಗಿದೆ ಎಂದು ಅಧ್ಯಕ್ಷೆ ರಶ್ಮಿ ಬಸವರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನರ್ ವ್ಹೀಲ್ ಮೈಸೂರು ಗೋಲ್ಡ್ ಕ್ಲಬ್ ಹಲವಾರು ವರ್ಷಗಳಿಂದ ಸಮಾಜ ಮುಖಿ ಕಾರ್ಯಗಳ ಮೂಲಕ ಗುರುತಿಸಿಕೊಂಡಿದೆ. ಅದರಂತೆ ಈ ಬಾರಿ 4 ಮಂದಿ ಅನಾರೋಗ್ಯ ಪೀಡಿತರಿಗೆ ಸಹಾಯ ಮಾಡಲು ವಿಶೇಷವಾಗಿ ನಿಧಿ ಸಂಗ್ರಹಿಸಲು ಸ್ನೇಹ ಸಂತೆ ಆಯೋಜಿಸಲಾಗಿದೆ ಎಂದರು.

ಸಂತೆಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ವಿವಿಧ ಭಾಗದ ಮಹಿಳಾ ಉದ್ಯಮಿಗಳಿಗೆ ಅವಕಾಶ ಕಲ್ಪಿಸಲಾಗಿದ್ದು ಆಹಾರ, ಸೀರೆ, ಬಟ್ಟೆ ಆಭರಣ ಮೊದಲಾದ 20 ಮಳಿಗೆಗಳು ಇರಲಿವೆ. ಅಂದು ಬೆಳಗ್ಗೆ 10 ಗಂಟೆಯಿಂದ ರಾತ್ರಿ 9ರವರೆಗೆ ಸಂತೆ ನಡೆಯಲಿದೆ. 11.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಮೈಸೂರಿನ ಮಹಿಳಾ ಉದ್ಯಮಿಗಳು ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಯಾ ತಲ್ರೇಜಾ, ಆರ್. ಪ್ರತಿಭಾ, ಆರ್. ಶಾಲಿನಿ, ಡಾ. ಅನ್ನು ಅರ್ಗವಾಲ್, ಪೂರ್ಣಿಮಾ ಉಪಸ್ಥಿತರಿದ್ದರು.

ಸಮುದಾಯ ಆರೋಗ್ಯ ಕೇಂದ್ರದ ಉಳಿವಿಗಾಗಿ ನಾಳೆ ಬಂದ್; ಪ್ರತಿಭಟನೆ

ಮೈಸೂರು, ನ.24(ಎಂಕೆ)– ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಗ್ರಾಮದಲ್ಲಿರುವ 'ಸಮುದಾಯ ಆರೋಗ್ಯ ಕೇಂದ್ರ'ದ ಉಳಿವಿಗಾಗಿ ನ.25 ರಂದು ನಾಗರಿಕ ಹಿತರಕ್ಷಣಾ ಸಮಿತಿ, ಬೂಕನಕೆರೆ ಆಟೋ ಚಾಲಕರು ಮತ್ತು ಮಾಲೀಕರ ಸಂಘ, ಹೋಬಳಿ ವರ್ತಕರ ಸಂಘ, ಗ್ರಾಮೀಣ ವಿದ್ಯಾರ್ಥಿಗಳ ಒಕ್ಕೂಟ ಬೂಕನಕೆರೆ ಹಾಗೂ ರಾಜ್ಯ ರೈತ ಸಂಘ ಬೂಕನಕೆರೆ ಘಟಕದ ವತಿಯಿಂದ ಸ್ವಯಂ ಪ್ರೇರಿತ ಬಂದ್ ಹಾಗೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

50 ಹಾಸಿಗೆಯುಳ್ಳ ಬೂಕನಕೆರೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕಾಲಕಾಲಕ್ಕೆ ನುರಿತ ಹಾಗೂ ತಜ್ಞ ವೈದ್ಯರನ್ನು ನೇಮಕಗೊಳಿಸದೆ ಸೇವೆಯಲ್ಲಿ ಕುಂಠಿತವಾಗುವಂತೆ ಮಾಡಿರುವುದಲ್ಲದೆ ಸಮುದಾಯ ಆರೋಗ್ಯ ಕೇಂದ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿಸಲು ಆದೇಶ ಹೊರಡಿಸಿರುವ ಸರ್ಕಾರದ ನಡೆ ಖಂಡಿಸಿ ಬಂದ್‌ಗೆ ಕರೆ ನೀಡಲಾಗಿದೆ.

ಬೂಕನಕೆರೆ ಸಮುದಾಯ ಆರೋಗ್ಯ ಕೇಂದ್ರಕ್ಕೆ 50–60 ಕಿಲೋ ಮೀಟರ್ ದೂರದ ಅಕ್ಕ–ಪಕ್ಕದ ಹಳ್ಳಿಗಳಿಂದಲೂ ರೋಗಿಗಳು ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿದ್ದರು. ಆರಂಭದಲ್ಲಿ 30 ಹಾಸಿಗೆ ಇದ್ದ ಕೇಂದ್ರವನ್ನು 50 ಹಾಸಿಗೆಗಳಿಗೆ ಹೆಚ್ಚಿಸಲಾಯಿತು. ಆದರೆ, ಕಾಲನಂತರ ಆಸ್ಪತ್ರೆಗೆ ನುರಿತ ವೈದ್ಯರನ್ನು ನೇಮಕಗೊಳಿಸದೆ ಉತ್ತಮ ಚಿಕಿತ್ಸೆ ದೊರೆಯದ ಕಾರಣ ರೋಗಿಗಳ ಸಂಖ್ಯೆಯೂ ಕಡಿಮೆಯಾಯಿತು. ಇದನ್ನೇ ಕಾರಣವಾಗಿಟ್ಟುಕೊಂಡು ಸಮುದಾಯ ಆರೋಗ್ಯ ಕೇಂದ್ರವನ್ನು ಸಾಮಾನ್ಯ ಚಿಕಿತ್ಸಾ ಸೇವೆ ದೊರೆಯುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮಾಡುತ್ತಿರುವುದು ಖಂಡನೀಯ. ಸರ್ಕಾರ ಈ ಕೂಡಲೇ ನಿರ್ಧಾರ ಬದಲಿಸಿ, ಬೂಕನಕೆರೆ ಸಮುದಾಯ ಆರೋಗ್ಯವನ್ನು ಇರುವಂತೆಯೇ ಮುಂದುವರೆಸುವುದು ಮಾತ್ರವಲ್ಲದೆ ನುರಿತ ತಜ್ಞ ವೈದ್ಯರನ್ನು ನೇಮಕ ಮಾಡಬೇಕು ಎಂದು ಒತ್ತಾಯಿಸಿ ಸ್ವಯಂ ಪ್ರೇರಿತ ಬಂದ್ ಹಾಗೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹರಿ ವಿದ್ಯಾಲಯದಲ್ಲಿ ಜಿಎಸ್‌ಎಸ್ ವಿದ್ಯಾರ್ಥಿ ರನ್



ಮೈಸೂರು, ನ. 24– ಮೈಸೂರಿನ ಹರಿ ವಿದ್ಯಾಲಯದಿಂದ ಆಯೋಜಿಸಲಾಗಿದ್ದ ಜಿಎಸ್‌ಎಸ್ ವಿದ್ಯಾರ್ಥಿ ರನ್ 2025 –4ನೇ ಆವೃತ್ತಿ ಶಾಲಾ ಆವರಣದಲ್ಲಿ ನಡೆಯಿತು. 1 ಕಿಮೀ, 3 ಕಿಮೀ ಮತ್ತು 5 ಕಿಮೀ ವಿಭಾಗಗಳಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪೋಷಕರು ಹಾಗೂ ಕ್ರೀಡಾಭಿಮಾನಿಗಳು ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಯೋಗಾತ್ಮ ಶ್ರೀಹರಿ ದ್ವಾರಕಾನಾಥ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಆರೋಗ್ಯ, ನಿಯಮಿತ ವ್ಯಾಯಾಮ ಮತ್ತು ಜೀವನ ಶೈಲಿಯ ಮಹತ್ವದ ಬಗ್ಗೆ ಪ್ರೇರಣಾತ್ಮಕ ಸಂದೇಶ ನೀಡಿದರು. ಆದಿತ್ಯ ಅಧಿಕಾರಿ ಆಸ್ಪತ್ರೆಯ ಅಧ್ಯಕ್ಷ ಡಾ. ಎನ್. ಚಂದ್ರಶೇಖರ್ ವಿದ್ಯಾರ್ಥಿಗಳಲ್ಲಿ ಕ್ರೀಡಾಭಿವೃದ್ಧಿ ಮತ್ತು ಮಾನಸಿಕ ಆರೋಗ್ಯದ ಅಗತ್ಯತೆಯನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಹರಿ ವಿದ್ಯಾಲಯದ ಅಧ್ಯಕ್ಷ ಶ್ರೀನಿವಾಸ ಹೊಸಮನೆ ಹಾಗೂ ಕಾರ್ಯದರ್ಶಿ ಎಚ್. ಆರ್. ಭಗವಾನ್ ಉಪಸ್ಥಿತರಿದ್ದರು. ಪ್ರತಿ ವಿಭಾಗದ ವಿಜೇತ ಓಟಗಾರರಿಗೆ ನಗದು ಬಹುಮಾನ, ಪ್ರಶಸ್ತಿ ಹಾಗೂ ಭಾಗವಹಿಸಿದ್ದ ಪ್ರತಿಯೊಬ್ಬರಿಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ


ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ನ.24(ಎಂಟಿವೈ)– ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ರೈತರು, ಮೆಕ್ಕೆ ಜೋಳಕ್ಕೆ ಕ್ವಿಂಟಾಲ್‌ಗೆ 2400 ರೂಪಾಯಿ ನಿಗದಿಯಾಗಿದೆ. ಆದರೂ ರಾಜ್ಯದಲ್ಲಿ 1400ರಿಂದ 1900 ರೂ. ನೀಡಲಾಗುತ್ತಿದೆ. ಕಡಿಮೆ ಗುಣಮಟ್ಟದ ಬಿತ್ತನೆ ಬೀಜ, ಹವಾಮಾನ ವೈಪರೀತ್ಯದಿಂದಾಗಿ ಈಗಾಗಲೇ ರೈತರು ಸಂಕಷ್ಟದಲ್ಲಿರುವಾಗ ಬೆಲೆ ಕುಸಿತ ದೊಡ್ಡ ಅಘಾತವಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಕೂಡಲೇ ಖರೀದಿ ಕೇಂದ್ರ ತೆರೆಯಬೇಕು. ಕನಿಷ್ಠ ಬೆಲೆ ಕ್ವಿಂಟಾಲ್‌ಗೆ 2400 ರೂ. ನೊಂದಿಗೆ ರಾಜ್ಯ ಸರ್ಕಾರ 600 ರೂ. ಸೇರಿಸಿ ಮೂರು ಸಾವಿರ ರೂ. ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿ ಬಾರಿ ದಲ್ಲಾಳಿಗಳು ರೈತರಿಂದ ಕಡಿಮೆ ಬೆಲೆಗೆ ಭತ್ತ ಖರೀದಿ ಮಾಡಿದ ನಂತರ ಸರ್ಕಾರಿ ಖರೀದಿ ಕೇಂದ್ರಗಳನ್ನು ತೆರೆಯುತ್ತಿದೆ. ಸರ್ಕಾರ ಮತ್ತು ಆಡಳಿತ ವ್ಯವಸ್ಥೆ ದಲ್ಲಾಳಿಗಳಿಗೆ ಪೂರಕವಾಗುವಂತೆ ಕಾರ್ಯನಿರ್ವಹಿಸುತ್ತಿದೆ ಈ ಬಾರಿಯಾದರೂ ಸರಿಯಾದ ಸಮಯಕ್ಕೆ ಖರೀದಿ ಕೇಂದ್ರ ತೆರೆಯಬೇಕು. ಗ್ರಾಮೀಣ ಭಾಗದ ಅರ್ಥವ್ಯವಸ್ಥೆಯ ಮೂಲ ಆಧಾರ ಹೈನುಗಾರಿಕೆ. ಹೀಗಾಗಿ ಹಾಲು ಉತ್ಪಾದಕ ಕೇಂದ್ರಗಳಲ್ಲಿ ಸಮಯಕ್ಕೆ ಸರಿಯಾಗಿ ಬೋನಸ್, ಆರ್ಥಿಕ ಸೌಲಭ್ಯ ಸಿಗುವಂತೆ ಮಾಡಬೇಕು. ಎಪಿಎಂಸಿ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದ್ದು, ಕಾನೂನಿನ ವಿರುದ್ಧವಾಗಿ ದಲ್ಲಾಳಿಗಳು ಕಮಿಷನ್ ಪಡೆಯುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಭಾಗದಲ್ಲಿ ಇ–ಸ್ವತ್ತು ಮಾಡಿಕೊಡಲು ಅಧಿಕಾರಿಗಳು ಲಂಚ ಕೇಳುತ್ತಿದ್ದು, ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಮಾನವ ಪ್ರಾಣಿ ಸಂಘರ್ಷ ದಿನ ನಿತ್ಯದ ಸವಾಲಾಗಿದ್ದು, ಕಾಡುಪ್ರಾಣಿಗಳಿಂದ ಆಗುತ್ತಿರುವ ಬೆಳೆ ಹಾನಿಗೆ ಮಾರುಕಟ್ಟೆಯ ದರದಲ್ಲಿ ವೈಜ್ಞಾನಿಕ ಬೆಳೆ ನಷ್ಟ ಪರಿಹಾರ ಕಟ್ಟಿಕೊಡಬೇಕು. ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ರೈತರ ಕುಂದು ಕೊರತೆ ಸಭೆ ನಡೆಸಿ ಸಮಸ್ಯೆ ಬಗೆಹರಿಸಬೇಕು. ರಾಜ್ಯ ವ್ಯಾಪಿ ಒಂದೇ ನಿಯಮದಂತೆ ಕಬ್ಬಿನ ದರ ನೀಡಬೇಕು. ಎಥನಾಲ್ ಉತ್ಪಾದನೆಗೆಂದು ಅಮೆರಿಕದಿಂದ ಸುಂಕ ರಹಿತವಾಗಿ ಮಕ್ಕೆಜೋಳವನ್ನು ಆಮದು ಮಾಡಿಕೊಳ್ಳುವ ಒಡಂಬಡಿಕೆಗೆ ತಡೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಮಂಜು ಕಿರಣ್ ಇನ್ನಿತರರು ಭಾಗವಹಿಸಿದ್ದರು.

ಇಂದು, ನಾಳೆ ಹೈ ಲೈಫ್ ಆಭರಣ, ಫ್ಯಾಷನ್ ಉಡುಪುಗಳ ಪ್ರದರ್ಶನ



ಹೈ ಲೈಫ್ ಪ್ರದರ್ಶನದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ನ.24(ಜಿಎ)–ಮೈಸೂರಿನ ರ್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ನ.25 ಮತ್ತು 26ರಂದು ಬೆಳಗ್ಗೆ ಹೈ ಲೈಫ್ ಆಭರಣ ಮತ್ತು ಫ್ಯಾಷನ್ ಉಡುಪುಗಳ ಪ್ರದರ್ಶನ ಆಯೋಜಿಸಲಾಗಿದೆ ಎಂದು ಹೈ ಲೈಫ್ ಬ್ರೈಡ್ಸ್ ಸಹ–ಆಯೋಜಕಿ ಶೋಮಿಕಾ ಎಸ್.ರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ದಿನಗಳ ಈ ಶಾಪಿಂಗ್ ಮಹೋತ್ಸವದಲ್ಲಿ ಭಾರತದ ವಿವಿಧ ಭಾಗಗಳಿಂದ ಬಂದಿರುವ ಅತ್ಯುತ್ತಮ ಉಡುಪುಗಳು, ಆಭರಣಗಳು ಮತ್ತು ಫ್ಯಾಷನ್ ಆಕ್ಸೆಸರಿಗಳು ಪ್ರದರ್ಶನ ಮತ್ತು ಮಾರಾಟವಿದ್ದು, ಲೆಹೆಂಗಾ, ಸೀರೆ, ಡಿಸೈನರ್ ಗೌನ್‌ಗಳು ಸೇರಿದಂತೆ ವೈವಿಧ್ಯಮಯ ಆಕರ್ಷಕ ಆಭರಣಗಳ ಸಂಗ್ರಹ ಈ ಬಾರಿ ವಿಶೇಷ ಆಕರ್ಷಣೆಯಾಗಿದೆ. ಮೈಸೂರಿನ ವಧುಗಳ ಅಭಿರುಚಿಗೆ ತಕ್ಕಂತೆ ವಿಶೇಷ ಸಂಗ್ರಹವನ್ನು ಸಿದ್ಧಪಡಿಸಿದ್ದೇವೆ. ಸಾಂಸ್ಕೃತಿಕ ಪರಂಪರೆಯುಳ್ಳ ಮೈಸೂರಿನಲ್ಲಿ ಈ ಮಹೋತ್ಸವವನ್ನು ಏರ್ಪಡಿಸುವುದು ನಮಗೆ ಹೆಮ್ಮೆಯ ಸಂಗತಿ. ಎರಡೂ ದಿನ ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ಹೈಲೈಫ್ ವಸ್ತು ಪ್ರದರ್ಶನ ಮತ್ತು ಮಾರಾಟ ಇರಲಿದೆ. ಮೈಸೂರಿನ ವಿವಿಧ ಕ್ಷೇತ್ರದ ಸಾಧಕ ಮಹಿಳೆಯರು ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಕಾರ್ಯಕ್ರಮ ಸಂಯೋಜಕ ಶ್ರೀಕಾಂತ್ ಮಾತನಾಡಿ, ಹೈ ಲೈಫ್ ಫ್ಯಾಷನ್ ಎಕ್ಸಿಬಿಷನ್ ಭಾರತದ ಪ್ರಮುಖ ಡಿಸೈನರ್‌ಗಳ ನವೀನ ಡಿಸೈನ್‌ಗಳು, ಜಾಗತಿಕ ಫ್ಯಾಷನ್ ಟ್ರೆಂಡ್‌ಗಳು ಮತ್ತು ಸೃಜನಾತ್ಮಕ ಕಲ್ಪನೆಗಳು ಒಂದೇ ವೇದಿಕೆಯಲ್ಲಿ ಒದಗಿಸುವ ಪ್ರಮುಖ ಕಾರ್ಯಕ್ರಮ ಎಂದರು.

ಒಳಮೀಸಲಾತಿ ಅನಿವಾರ್ಯತೆ ಅರಿತು ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಜಾರಿ

ಈಗ ವ್ಯತ್ಯಾಸದ ಬಗ್ಗೆ ನಡೆಯುತ್ತಿರುವ ಹೋರಾಟವನ್ನು ಸರ್ಕಾರದ ಗಮನಕ್ಕೆ ತರ್ತೇವೆ: ಡಾ|| ತಿಮ್ಮಯ್ಯ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸೋಮವಾರ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು.

ಮೈಸೂರು, ನ.24(ಎಂಟಿವೈ)– ಒಳ ಮೀಸಲಾತಿಗಾಗಿ ಆಗ್ರಹಿಸಿ ನಡೆಸುತ್ತಿರುವ ಹೋರಾಟಕ್ಕೆ ಶತಮಾನದ ಇತಿಹಾಸವಿದ್ದು, ಹೋರಾಟದ ತೀವ್ರತೆಯನ್ನು ಅರಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಒಳ ಮೀಸಲಾತಿ ಜಾರಿಗೊಳಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸೋಮವಾರ ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಒಳ ಮೀಸಲಾತಿ ಹಂಚಿಕೆಯಲ್ಲಾಗಿರುವ ವ್ಯತ್ಯಾಸವನ್ನು ಸರಿಪಡಿಸುವಂತೆ ವಿವಿಧ ಸಂಘಟನೆಗಳು ಒತ್ತಾಯಿಸುತ್ತಿವೆ. ಇದನ್ನು ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

ಒಳ ಮೀಸಲಾತಿ ಹೋರಾಟಕ್ಕೆ ನೂರು ವರ್ಷಗಳ ಇತಿಹಾಸವಿದೆ. ಈ ಹೋರಾಟ ಕಳೆದ 3 ದಶಕಗಳಿಂದ ಹೋರಾಟ ತೀವ್ರಗೊಂಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬದ್ಧತೆಯಿಂದ ದಲಿತರ ಬೇಡಿಕೆಯನ್ನು ಈಡೇರಿಸಿದರು. ಪರಿಶಿಷ್ಟ ಜಾತಿಯಲ್ಲಿನ ಹೊಲಯ, ಮಾದಿಗರಿಗೆ ಶೇ.6ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ. ಉಳಿದ 98 ಜಾತಿಗಳಿಗೆ ಆ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಂಚಿಕೆ ಮಾಡಲಾಗಿದೆ. ಇಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸುವಂತೆ ಸರ್ಕಾರಕ್ಕೆ ಒತ್ತಾಯಿಸುವುದಾಗಿ ಭರವಸೆ ನೀಡಿದರು.

ಪರಿಶಿಷ್ಟ ಜಾತಿಯಲ್ಲಿಯೇ 60ರಿಂದ 70 ಜಾತಿಗಳ ಜನರು ಅಸಂಘಟಿತರಾಗಿದ್ದಾರೆ. ಸ್ವಂತ ಸೂರು ಇಲ್ಲ. ಕನಿಷ್ಠ ಮೂಲಸೌಕರ್ಯವೂ ಇಲ್ಲದೇ ಜೀವನ ನಡೆಸುತ್ತಿದ್ದಾರೆ. ಕಾಯಕ ಸಮಾಜಗಳ ಜನರು ಸಂಕಷ್ಟದಲ್ಲಿದ್ದಾರೆ. ಇವೆಲ್ಲದರ ಬಗ್ಗೆ ದಲಿತ ಸಂಘರ್ಷ ಸಮಿತಿ ಹೋರಾಟ ಮಾಡಬೇಕು. 1970ರಲ್ಲಿ ದಲಿತ ಸಂಘರ್ಷ ಸಮಿತಿ ಆರಂಭಗೊಂಡಿತು. ಹಿಂದುಳಿದ ವರ್ಗಗಳ ಹರಿಕಾರ ಡಿ.ದೇವರಾಜ ಅರಸು ದಸಂಸಗೆ ಬೆಂಬಲ ಕೊಟ್ಟರು. ಹೋರಾಟಕ್ಕೆ ಶಕ್ತಿ ತುಂಬಿದರು. ಅವರು ನೆಟ್ಟ ಬೀಜ ಇಂದು ಹೆಮ್ಮರವಾಗಿ ಬೆಳೆದಿದೆ. ದಲಿತರ ಅನೇಕ ಸಮಸ್ಯೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಪರಿಹರಿಸುತ್ತೇನೆ ಎಂದು ತಿಳಿಸಿದರು.

ಚಿಕ್ಕಮಗಳೂರಿನ ಭವಾನಿ ಮಾತನಾಡಿ, ದಲಿತರು ತಮ್ಮ ಮಕ್ಕಳಿಗೆ ಊಟ ಇಲ್ಲದಿದ್ದರೂ ಪರವಾಗಿಲ್ಲ ಉತ್ತಮ ವಿದ್ಯಾಭ್ಯಾಸ ಕೊಡಿಸಬೇಕು. ಐಎಎಸ್, ಐಪಿಎಸ್ ಹುದ್ದೆಗಳನ್ನು ಪಡೆಯುವಂತೆ ಪ್ರೇರೇಪಿಸಬೇಕು. ಬಾಬಾ ಸಾಹೇಬರನ್ನು ಸ್ಫೂರ್ತಿಯಾಗಿ ಸ್ವೀಕರಿಸುವಂತೆ ತಿಳಿಸಬೇಕು. ಶಿಕ್ಷಿತರಾಗದಿರುವುದರಿಂದ ಅನ್ಯಾಯ, ದೌರ್ಜನ್ಯ ಮತ್ತು ತುಳಿತಕ್ಕೆ ಒಳಗಾಗುತ್ತಿದ್ದೇವೆ. ಶೋಷಿತ ಸಮುದಾಯದ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಯುತ್ತಿವೆ. ಈ ಬಗ್ಗೆ ದಲಿತರು ಗಂಭೀರವಾಗಿ ಆಲೋಚಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಮುಖಂಡ ರಾಜಶೇಖರ್ 'ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಪರಿಕಲ್ಪನೆ' ವಿಷಯ ಕುರಿತು ಮಾತನಾಡಿ, ಹೊಲಯ–ಮಾದಿಗರು ಭಿನ್ನಾಭಿಪ್ರಾಯ ಬಿಟ್ಟು ಒಂದಾಗಬೇಕು. ಡಾ.ಅಂಬೇಡ್ಕರ್ ಸಂವಿಧಾನ ಬರೆಯದಿದ್ದರೆ ಶೋಷಿತ ಸಮುದಾಯ ಎಲ್ಲಿರುತ್ತಿತ್ತು ಎಂದು ಆಲೋಚಿಸಬೇಕು. ಆ ಕಾರಣದಿಂದ ಬಿನ್ನಾಭಿಪ್ರಾಯ ಬಿಟ್ಟು ಸಂಘಟಿತರಾಗಿ ಹೋರಾಟ ಮಾಡಬೇಕು. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಕೊನೆಯಲ್ಲಿರುವ ಜಾತಿಗಳ ಜನರಿಗೆ ಯಾವುದೇ ಅವಕಾಶ ಸಿಗುತ್ತಿಲ್ಲ. ಹಂಚಿಕೆಯಾಗಿರುವ ಒಳ ಮೀಸಲಾತಿ ಕೆಲ ಜಾತಿಗಳಿಗೆ ಮಾತ್ರ ಸೀಮಿತವಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವಂತೆ ಸರ್ಕಾರವನ್ನು ಒತ್ತಾಯಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ವೆಂಕಟೇಶ್, ಮುಖಂಡರಾದ ನಿಂಗರಾಜ್ ಮಲ್ಲಾಡಿ, ನಂಜಪ್ಪ ಬಸವನಗುಡಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶ್ರೀಕೃಷ್ಣದೇವರಾಯ ಅಲೆಯನ್ಸ್ ಕ್ಲಬ್‌ನಿಂದ ರಾಜ್ಯೋತ್ಸವ



ಕುವೆಂಪುನಗರದ ಶ್ರೀಕೃಷ್ಣದೇವರಾಯ ಅಲೆಯನ್ಸ್ ಕ್ಲಬ್ ಸೋಮವಾರ ವಿಜಯನಗರ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಕ್ಲಬ್‌ನ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ.ಬೈರಿ ಉದ್ಘಾಟಿಸಿದರು. ರಾಜು, ಅಂಶಿ ಪ್ರಸನ್ನಕುಮಾರ್, ಎಸ್. ವೆಂಕಟೇಶ್, ಕೆ. ರಘುರಾಂ ವಾಜಪೇಯಿ, ಮಹಬಲೇಶ್ವರ ಬೈರಿ ಇದ್ದಾರೆ. ಕನ್ನಡ ರಾಜ್ಯೋತ್ಸವ ಅಂಗವಾಗಿ ಕುವೆಂಪುನಗರ ಶ್ರೀ ಕೃಷ್ಣದೇವರಾಯ ಅಲೆಯನ್ಸ್ ಕ್ಲಬ್ ವತಿಯಿಂದ ಎಎಸ್‌ಐ ಮಲ್ಲಿಕಾರ್ಜುನಪ್ಪ, ಡಾ.ಸಹನಾಕೃಷ್ಣ, ಟಿ.ಸಿ. ಗೀತಾ ನಾಯ್ಡು, ಕೃಪಾಲಿನಿ ಎಸ್. ರಾಜ್ ಅವರನ್ನು ಸನ್ಮಾನಿಸಲಾಯಿತು.

ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳಿಗೆ ರಾಷ್ಟ್ರ ಪ್ರಶಸ್ತಿ

ಮೈಸೂರು, ನ. 24– ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆಯಿಂದ ಸ್ಕೌಟ್ ಸಂಸ್ಥೆಗೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ನೀಡುವ ಸ್ಕೌಟಿಂಗ್‌ನ ಅತ್ಯುನ್ನತ ಪ್ರಶಸ್ತಿಯಾದ ಸಿಲ್ವರ್ ಎಲಿಫೆಂಟ್ ಪ್ರಶಸ್ತಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಮೈಸೂರು ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಪಿ. ವಿಶ್ವನಾಥ್, ಜಿಲ್ಲಾ ಖಜಾಂಚಿ ಡಾ. ಕೆ.ಬಿ. ಗುರುಮೂರ್ತಿ ಮತ್ತು ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ಜಮೀಲ್ ಬಾರ್ ಟು ಸಿಲ್ವರ್ ಸ್ಟಾರ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯನ್ನು ಉತ್ತರ ಪ್ರದೇಶದ ರಾಜಭವನದಲ್ಲಿ ನಡೆಯುವ ಸಮಾರಂಭದಲ್ಲಿ ರಾಜ್ಯಪಾಲರಾದ ಶ್ರೀಮತಿ ಆನಂದಿಬಾಯಿ ಪಟೇಲ್ ಅವರು ನ. 26 ರಂದು ಪ್ರದಾನ ಮಾಡಲಿದ್ದಾರೆ.

ಡಿಕೆಶಿ ಪರ ವಿಶೇಷ ಪೂಜೆ



ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲೆಂದು ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಮೈಸೂರಿನ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ತೇಜೇಶ್ ಲೋಕೇಶ್ ಗೌಡ ನೇತೃತ್ವದಲ್ಲಿ 101 ತೆಂಗಿನ ಕಾಯಿ ಈಡುಗಾಯಿ ಹೊಡೆದು ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಬೋಗಾದಿ ಸಿದ್ದೇಗೌಡ, ಸಿಂಧುವಳ್ಳಿ ಶಿವಕುಮಾರ್, ವರಕೂಡು ಕೃಷ್ಣೇಗೌಡ, ಪ್ರಭಾಕರ್, ಗಿರೀಶ್, ಹನುಮಂತಯ್ಯ, ನೇಹಾ, ಎಳನೀರು ರಾಮಣ್ಣ, ಹೊನ್ನೇಗೌಡ, ಜ್ಯೋತಿ, ಮಂಜುಳಾ, ಸುಜಾತಾ, ಶಿವರಾಂ, ಕೃಷ್ಣಪ್ಪ, ಸುಬ್ಬೇಗೌಡ, ದರ್ಶನ್‌ಗೌಡ, ಶಿವರಾಜ್, ಕುಮಾರ್, ರವೀಶ್, ಗಣೇಶ್ ಪ್ರಸಾದ್, ನಾಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಜಸ್ಟ್ ಕನ್ನಡ 15ನೇ ವರ್ಷದ ಸಂಭ್ರಮ

ಮೈಸೂರು, ನ.24(ಎಂಕೆ)– ಮೈಸೂರು ವಿವಿ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ನ.26 ರಂದು ಬೆಳಗ್ಗೆ 9.30ಕ್ಕೆ 'ಜಸ್ಟ್ ಕನ್ನಡ 15ನೇ ವರ್ಷದ ಸಂಭ್ರಮ' ಹಾಗೂ 'ಜೆಕೆ@15' ವಿಶೇಷ ಸಂಚಿಕೆ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿದೆ. ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಖ್ಯಾತ ವಿಜ್ಞಾನಿ ಪ್ರೊ.ಕೆ. ಎಸ್.ರಂಗಪ್ಪ ಮೈಸೂರು ವಿವಿ ಕುಲಸಚಿವರಾದ ಎಂ.ಕೆ. ಸವಿತಾ, ಕೆ.ಆರ್.ಆಸ್ಪತ್ರೆ ವೈದ್ಯಾಧಿಕಾರಿ ಡಾ.ಆರ್. ಯೋಗೀಶ್, ಪತ್ರಕರ್ತ ಚೀ.ಜ.ರಾಜೀವ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಜಸ್ಟ್‌ಕನ್ನಡ ಸಂಪಾದಕ ವಿ.ಮಹೇಶ್‌ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಸಿಎಂ ಆಗಲಿ; ಅಯ್ಯಪ್ಪಸ್ವಾಮಿ ಸನ್ನಿಧಿಯಲ್ಲಿ ಅಭಿಮಾನಿಗಳ ವಿಶೇಷ ಪ್ರಾರ್ಥನೆ



ಮೈಸೂರು, ನ. 24– ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಹಾರೈಸಿ, ಅವರ ಅಭಿಮಾನಿಗಳು ಇಂದು ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಮಾಲಾಧಾರಿಗಳಾಗಿ ಶಬರಿಮಲೆ ಯಾತ್ರೆಗೆ ಸಿದ್ಧರಾಗಿರುವ ಭಕ್ತರು, ಡಿ.ಕೆ. ಶಿವಕುಮಾರ್ ಅವರ ಭಾವಚಿತ್ರ ಹಿಡಿದು ಜಪ, ಭಜನ ಮತ್ತು ಶ್ಲೋಕ ಪಠಣ ನಡೆಸಿ, ಅವರ ರಾಜಕೀಯ ಜೀವನ ಸುಗಮವಾಗಲಿ, ಅಡೆತಡೆಗಳು ದೂರವಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಸ್ಥಳೀಯ ಅಯ್ಯಪ್ಪ ಭಕ್ತರ ಮಾತಿನ ಪ್ರಕಾರ ಮಂಡಲ ಪೂಜೆ ಪೂರ್ಣಗೊಂಡ ನಂತರ ಶಬರಿಮಲೆ ಯಾತ್ರೆಯಲ್ಲಿ ಕೂಡ ಡಿ.ಕೆ.ಶಿವಕುಮಾರ್ ಸಿಎಂ ಆಗಲೆಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಅಖಿಲ ಕರ್ನಾಟಕ ಡಿಕೆ ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಜಿ ರಾಘವೇಂದ್ರ, ಹರೀಶ್ ಗೌಡ, ಎಸ್ ಎನ್ ರಾಜೇಶ್, ಅಯ್ಯಪ್ಪ ಮಾಲ ಧಾರಿಗಳಾದ ಯೋಗೇಶ್, ಮಂಜು ನಾಥ್, ರಾಮಣ್ಣ, ಪುಟ್ಟಾಚಾರ್, ಪ್ರಮೋದ್, ರಾಹುಲ್, ವಿಜಯ ಕುಮಾರ್, ಪ್ರಶಾಂತ್, ಮಹದೇವ ಸ್ವಾಮಿ ಹಲವು ಮಾಲಾಧಾರಿಗಳು, ಅಭಿಮಾನಿಗಳು ಮತ್ತು ಭಕ್ತರು ಭಾಗವಹಿಸಿದ್ದರು.

ಇಂದು ಮಹಿಳಾ ರಕ್ಷಣಾ ಪಡೆಯಿಂದ ರಾಜ್ಯೋತ್ಸವ

ಮೈಸೂರು,ನ.24(ಜಿಎ)–ಮಹಿಳಾ ರಕ್ಷಣಾ ಪಡೆ ವತಿಯಿಂದ ನ.25 ರಂದು ಬೆಳಗ್ಗೆ 10.30ಕ್ಕೆ ನಗರದ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಕಣ್ಮಣಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷೆ ಲತಾ ಗೌಡ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ರಾಜ್ಯ ಪ್ರಶಸ್ತಿ ವಿಜೇತ ರವೀಶ್ ಶಾಸ್ತ್ರಿ ಉದ್ಘಾಟಿಸುವರು. ಶಾಸಕರಾದ ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್, ನಿವೃತ್ತ ಪೊಲೀಸ್ ಅಧಿಕಾರಿ ಬಸವ ರಾಜ ಮಾಲಗತ್ತಿ, ಎಸ್.ಯೋಗ ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮೇಘನಾ ಗೌಡ, ಚುಟುಕು ಸಿರಿ ರತ್ನ ಹಾಲಪ್ಪಗೌಡ, ಬಬಿತಾ, ಸುಶೀಲಾ, ಮಹದೇವಮ್ಮ ನಾಗೇಶ್, ಪ್ರದೀಪ್ ಕುಮಾರ್ ಎಂ.ಯು. ಶೈಲಜ, ಲಿಂಗರಾಜು, ತೇಜಸ್ವಿನಿ, ಮಹೇಶ್‌ಕುಮಾರ್, ಬಾಲಕೃಷ್ಣ ಹಾಗೂ ಹೆಚ್.ವಿ. ಪುಟ್ಟಸ್ವಾಮಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ವೇಳೆ ಕೊಪ್ಪಲೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಪುಸ್ತಕ ಮತ್ತು ಬ್ಯಾಗ್, ಕನ್ನಡ ಸ್ವಾಭಿಮಾನ ಮೆರೆಸುವ ಆಟೋ ಚಾಲಕರು, ಪೌರ ಕಾರ್ಮಿಕರಿಗೆ ಸನ್ಮಾನ ಸಹಾ ಇರಲಿದೆ ಎಂದು ತಿಳಿಸಿದರು.

ರೈತರ ಬೇಡಿಕೆ ಈಡೇರಿಸದೇ ಇದ್ದಲ್ಲಿ ಬೆಳಗಾವಿ ಅಧಿವೇಶನ ವೇಳೆ ಪ್ರತಿಭಟನೆ

ಡಿ. 12ರಂದು ಬೆಳಗಾವಿಯಲ್ಲಿ ರಸ್ತೆ ತಡೆ ನಡೆಸಲು ತೀರ್ಮಾನ



ಕರ್ನಾಟಕ ರಾಜ್ಯ ರೈತಸಂಘ–ರೈತ ಬಣದ ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ನ.24(ಎಂಟಿವೈ)– ಸರ್ಕಾರ ರೈತರ ಬೇಡಿಕೆ ಈಡೇರಿಸದಿದ್ದರೆ ಬೆಳಗಾವಿಯಲ್ಲಿ ನಡೆಯುವ ವಿಧಾನಸಭೆ ಚಳಿಗಾಲದ ಅಧಿವೇಶನ ವೇಳೆ ಡಿ.12ರಂದು ಬೆಳಗಾವಿಯಲ್ಲಿ ರಸ್ತೆ ತಡೆ ನಡೆಸಿ ಬೃಹತ್ ಪ್ರತಿಭಟನೆ ನಡೆಸಲು ಕರ್ನಾಟಕ ರಾಜ್ಯ ರೈತಸಂಘಗಳ ಒಕ್ಕೂಟ ತೀರ್ಮಾನಿಸಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ಕರ್ನಾಟಕ ರಾಜ್ಯ ರೈತಸಂಘ–ರೈತಬಣ ಹಾಗೂ ಕರ್ನಾಟಕ ರಾಜ್ಯ ರೈತಸಂಘಗಳ ಒಕ್ಕೂಟ ಡಿಸೆಂಬರ್ 23 ರಂದು ಮೈಸೂರಲ್ಲಿ ನಡೆಯುವ ವಿಶ್ವ ರೈತ ದಿನಾಚರಣೆ ಕುರಿತ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ರೈತ ಮುಖಂಡರು ರೈತರ ಸಮಸ್ಯೆಗಳನ್ನು ಇತ್ಯರ್ಥ ಮಾಡದಿದ್ದರೆ ಬೆಳಗಾವಿ ಅಧಿವೇಶನ ವೇಳೆ ರಸ್ತೆ ತಡೆ ನಡೆಸಿ ಉಗ್ರ ಪ್ರತಿಭಟನೆ ನಡೆಸಲು ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಸಭೆ ಬಳಿಕ ಕರ್ನಾಟಕ ರಾಜ್ಯ ರೈತಸಂಘ (ರೈತಬಣ)ದ ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉತ್ಪಾದನಾ ವೆಚ್ಚ ಹೆಚ್ಚುತ್ತಿದೆ. ರಸಗೊಬ್ಬರ, ಕೂಲಿ, ಇನ್ನಿತರ ಖರ್ಚುಗಳು ಹೆಚ್ಚುತ್ತಿರುವ ಕಾರಣ, ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಗಳು ಒಂದು ಟನ್ ಕಬ್ಬಿಗೆ ಕನಿಷ್ಠ 3.500 ರೂ. ನೀಡಬೇಕು. ಕಾರ್ಖಾನೆಗಳು ಕಬ್ಬಿನ ಇಳುವರಿ ಪರೀಕ್ಷೆಯಲ್ಲಿ ರೈತರಿಗೆ ಮೋಸ ಮಾಡುತ್ತಿದ್ದು, ಎಲ್ಲಾ ಕಾರ್ಖಾನೆ ಬಳಿ ಸರ್ಕಾರವೇ ಲ್ಯಾಬ್ ನಿರ್ಮಿಸಿ ಇಳುವರಿ ಪರೀಕ್ಷೆ ಮಾಡಬೇಕು. ಅಥವಾ ರೈತರ ಜಮೀನಿನಲ್ಲೇ ಇಳುವರಿ ಪರೀಕ್ಷೆ ಮಾಡುವ ವ್ಯವಸ್ಥೆ ಮಾಡಬೇಕು. ಸಕ್ಕರೆ ಕಾರ್ಖಾನೆಗಳು ತೂಕದಲ್ಲೂ ರೈತರಿಗೆ ಮೋಸ ಮಾಡುತ್ತಿದ್ದು, ಸರ್ಕಾರದಿಂದಲೇ ತೂಕ ಮಾಡುವ ಯಂತ್ರವನ್ನು ಅಳವಡಿಸಬೇಕು ಎಂದು ಆಗ್ರಹಿಸಿದರು.

ರೈತರು ಬೆಳೆದ ಭತ್ತ ಕಟಾವಿಗೆ ಬಂದಿದ್ದು, ಭತ್ತ ಖರೀದಿ ಕೇಂದ್ರ ತೆರೆಯಬೇಕು. ಭತ್ತಕ್ಕೆ ಕ್ವಿಂಟಾಲ್‌ಗೆ 3500 ರೂ, ಮೆಕ್ಕೆ ಜೋಳಕ್ಕೆ ಕ್ವಿಂಟಾಲ್‌ಗೆ 3000 ರೂ. ಬೆಂಬಲ ಬೆಲೆ ಘೋಷಿಸಬೇಕು. ಸಂಕಷ್ಟದಲ್ಲಿರುವ ತಂಬಾಕು ಬೆಳೆಗಾರರ ನೆರವಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಧಾವಿಸಬೇಕು. ರೈತರ ಕೃಷಿ ಸಾಲ ಮತ್ತು ಟ್ರಾಕ್ಟರ್ ಇತರೆ ಕೃಷಿ ಉಪಯೋಗಿ ವಾಹನಗಳ ಸಾಲ ಮನ್ನಾ ಮಾಡಬೇಕು. ರಾಜ್ಯದ ವಿವಿದೆಡೆ ಕಾಡು ಪ್ರಾಣಿಗಳು ಮತ್ತು ಮಾನವ ಸಂಘರ್ಷ ಮಿತಿ ಮೀರಿದೆ. ಅರಣ್ಯದಂಚಿನಲ್ಲಿ ತಲೆ ಎತ್ತಿರುವ ಅಕ್ರಮವಾಗಿ ರೆಸಾರ್ಟ್‌ಗಳನ್ನು ತೆರವು ಮಾಡಬೇಕು. ಕಾಡು ಪ್ರಾಣಿಗಳಿಂದ ಜನರನ್ನು ರಕ್ಷಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಕ್ಷೇತ್ರದಲ್ಲೇ ರೈತರಿಗೆ ಅನ್ಯಾಯವಾಗುತ್ತಿದೆ. ಕಬ್ಬಿನ ದರ ನಿಗದಿಗೆ ಸರ್ಕಾರ ಉತ್ತರ, ದಕ್ಷಿಣ ಭಾಗ ಮಾಡಬಾರದು. ಕೇಂದ್ರ ಸರ್ಕಾರ ಕಬ್ಬಿಗೆ ನಿಗದಿ ಮಾಡಿರುವ ಎಫ್‌ಆರ್‌ಪಿ ದರವನ್ನು ರಾಜ್ಯ ಸರ್ಕಾರ ಅನುಮೋದಿಸಿಲ್ಲ ಎನ್ನುವ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ರೈತರಿಗೆ 10.5 ಎಫ್‌ಆರ್‌ಪಿಗೆ 3.300 ರೂ ನಿಗದಿ ಮಾಡಿದ್ದಾರೆ, ದಕ್ಷಿಣ ಕರ್ನಾಟಕದ ರೈತರಿಗೆ 400 ಕಡಿಮೆ ಮಾಡಿ 2.900 ರೂ ನೀಡಲು ಆದೇಶ ಮಾಡಲು ಮೀನಾ ಮೇಷ ಎಣಿಸುತ್ತಿದ್ದಾರೆ ಎಂದು ವಿಷಾದಿಸಿದರು.

ಈ ಸಂದರ್ಭದಲ್ಲಿ ವಿವಿಧ ರೈತಸಂಘಟನೆಗಳ ಮುಖಂಡರುಗಳಾದ ಮೋತಿಲಾಲ್ ಚವ್ಹಾಣ್, ಗಣೇಶ ಇಳಿಗೇರ್, ವಿಠಲ್ ಬಿ.ಗಣಾಚಾರಿ, ಮಹೇಶ್ ಹೊನ್ನೇಗೌಡನಹಳ್ಳಿ, ವಳಗೆರೆ ಗಣೇಶ್, ಮಹೇಶ್ ಚರಗಣ್, ವೀರಭದ್ರಯ್ಯ ಎಸ್., ಕೆಆರ್‌ಎಸ್ ರಾಮೇಗೌಡ, ಯೋಗೇಶ್, ರತ್ನಮ್ಮ ಸೇರಿದಂತೆ ಇತರರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.11.2025 ಮಂಗಳವಾರ, ಮಳೆ ನಕ್ಷತ್ರ: ಅನೂರಾಧ, 20.11.2025ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜುವೆಲರಿ ಶೋ. ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್.ರಸ್ತೆ. ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.
- **ಮರಿಮಲ್ಲಪ್ಪ ಪದವಿಪೂರ್ವ ಕಾಲೇಜು :** ಅಂತರ ಕಾಲೇಜು ಸ್ಪರ್ಧೆಗಳು, ಬೆಳಗ್ಗೆ 9.30ಕ್ಕೆ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ ಮತ್ತು ಭಾವಗೀತೆ ಸ್ಪರ್ಧೆ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಉದ್ಘಾಟನೆ : ಪ್ರಾಂಶುಪಾಲ ಟಿ.ಸಿ. ಶಾಂತರಾಜು, ಉಪಸ್ಥಿತರು : ಪ್ರಾಂಶುಪಾಲ ಡಾ. ಎಸ್.ಕೆ. ಅನಿಲ್, ಶೈಕ್ಷಣಾಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ; ಬೆಳಗ್ಗೆ 9.30ಕ್ಕೆ ಅಂತರ ಕಾಲೇಜು ಬಾಲಕಿಯರ ಥ್ರೋಬಾಲ್ ಮತ್ತು ಬಾಲಕರ ಖೋ ಖೋ ಪಂದ್ಯಾವಳಿ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಉದ್ಘಾಟನೆ : ಪ್ರಿನ್ಸಿಪಾಲ್ ಡಾ. ಎಸ್.ಕೆ. ಅನಿಲ, ಮುಖ್ಯ ಅತಿಥಿಗಳು : ಅಂತರರಾಷ್ಟ್ರೀಯ ಖೋ ಖೋ ಕ್ರೀಡಾಪಟು ಎಂ. ವೀಣಾ, ಉಪಸ್ಥಿತರು : ಶೈಕ್ಷಣಾಧಿಕಾರಿ ಶ್ರೀಮತಿ ಮಂಗಳಮುದ್ದುಮಾದಪ್ಪ, ಮಧ್ಯಾಹ್ನ 2.30ಕ್ಕೆ ಬಹುಮಾನ ವಿತರಣಾ ಸಮಾರಂಭ, ಸ್ಥಳ: ಕಾಲೇಜು ಆವರಣ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಂಗು ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಬೆಂಗಳೂರು :** ಸಂವಿಧಾನ ದಿನಾಚರಣೆ ಅಂಗವಾಗಿ ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳು, ಸ್ಥಳ: ಕಾವೇರಿ ಸಭಾಂಗಣ, ಬೆಳಗ್ಗೆ 11ಕ್ಕೆ.
- **ದಾರಿ ಫೌಂಡೇಷನ್ :** ಭವಿಷ್ಯದಲ್ಲಿ ಪ್ರಜಾಪ್ರಭುತ್ವ ರಕ್ಷಣೆಯ ಜವಾಬ್ದಾರಿ ಯುವಶಕ್ತಿಯ ಕೈಯಲ್ಲಿ ಕುರಿತು ಮುಕ್ತ ಸಂವಾದ, ಸ್ಥಳ: ಕುಪ್ಪೆ ಗ್ರಾಮದಲ್ಲಿ ಬೆಳಗ್ಗೆ 11ಕ್ಕೆ
- **ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಮೈಸೂರು ಜಿಲ್ಲಾ ಸಮಿತಿ :** ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ವಿರುದ್ಧ ರಾಜ್ಯವ್ಯಾಪಿ ಸಹಿ ಸಂಗ್ರಹ ಅಭಿಯಾನ ಕಾರ್ಯಕ್ರಮ, ಸ್ಥಳ: ಚಿಕ್ಕಗಡಿಯಾರದ ಹತ್ತಿರ, ಬೆಳಗ್ಗೆ 11.30ಕ್ಕೆ.
- **ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ :** ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸುವ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಚಿವರಾದ ಎನ್. ಚಲುವರಾಯಸ್ವಾಮಿ, ಕೆ. ವೆಂಕಟೇಶ್, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಸ್ಥಳ: ಕರ್ನಾಟಕ ಕಲಾಮಂದಿರ, ಮಧ್ಯಾಹ್ನ 3ಕ್ಕೆ
- **ಜೆಎಸ್‌ಎಸ್ ಮಹಾವಿದ್ಯಾಪೀಠ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟ, ಉದ್ಘಾಟನೆ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ, ಅಧ್ಯಕ್ಷತೆ : ದಕ್ಷಿಣ ವಲಯ ಡಿಐಜಿಪಿ ಡಾ. ಎಂ.ಬಿ. ಬೋರಲಿಂಗಯ್ಯ, ಮುಖ್ಯ ಅತಿಥಿಗಳು : ನಗರ ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ್, ಅಂತರರಾಷ್ಟ್ರೀಯ ವಾಲಿಬಾಲ್ ಕ್ರೀಡಾಪಟು ವಿ.ಆರ್. ಸನೋಜ್, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ಸಂಜೆ 4ಕ್ಕೆ
- **ಪರಂಪರೆ:** ಸಂವಿಧಾನ ದಿನಾಚರಣೆ ಅಂಗವಾಗಿ ಸಂವಿಧಾನ ಕುರಿತು ವಿಶೇಷ ಉಪನ್ಯಾಸ. ವಿದುಷಿ ಮಹಾಲಕ್ಷ್ಮಿ ತಂಡದವರಿಂದ ರಾಷ್ಟ್ರ ಭಕ್ತಿಗೀತೆಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿಂದ ಸಂವಿಧಾನ ಪೀಠಿಕೆಯ ಮಹತ್ವ ಕುರಿತು ಉಪನ್ಯಾಸ, ಸ್ಥಳ: ಕೆ.ವಾಸುದೇವಾಚಾರ್ಯ ಭವನ (ನಾದಬ್ರಹ್ಮ). ಸಂಜೆ 6 ರಿಂದ.
- **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು:** ವಸುಂಧರೋತ್ಸವ–2025. 41ನೇ ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಹಬ್ಬ–2025. ಸಂಜೆ 6 ರಿಂದ ವಿದುಷಿ ಮೇಘಲಾ ಹಿರೇಸಾವೆಯವರ ಶಿಷ್ಯೆ ಶ್ರೀಮತಿ ತನ್ವಿ ಓಜಾ (ಆಸ್ಟ್ರೇಲಿಯಾ) ಅವರಿಂದ ಭರತನಾಟ್ಯ, ಸಂಜೆ 6.45 ರಿಂದ ವಿದುಷಿ ಸಹನಾ ಮರಿಯಾ ಅವರಿಂದ ಒಡಿಸ್ಸಿ ನೃತ್ಯ, ಸಂಜೆ 7.30 ರಿಂದ ನಾಟ್ಯಾಚಾರ್ಯ ಡಾ. ವಸಂತ್ ಕಿರಣ್ ಅವರಿಂದ ಕೂಚಿಪುಡಿ ನೃತ್ಯ, ಗೌರವ ಸಮರ್ಪಣೆ : ನೃತ್ಯಾಲಯ ನಿರ್ದೇಶಕರಾದ ವಿದುಷಿ ಡಾ. ಗುರು ತುಳಸಿ ರಾಮಚಂದ್ರ, ಸ್ಥಳ: ವಸುಂಧರ ಭವನ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ರೋಹಿಣಿ ಸುಧಾಂ ಹಾಗೂ ಕೆ. ಶ್ರೇಯಾ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ. ಎಸ್. ಓ.ಯು. ಮುಕ್ತವಾಣಿ, ಪ್ರಾಯೋಜಕರು– ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಶಿಕ್ಷಣ ಕುರಿತು ಕುಲಸಚಿವರಾದ ಪ್ರೊ. ಎಸ್.ಕೆ. ನವೀನ್ ಕುಮಾರ್ ಅವರೊಂದಿಗಿನ ಸಂವಾದದ ಎರಡನೇ ಭಾಗ. ಪ್ರಸ್ತುತಿ : ಎನ್.ಕೇಶವಮೂರ್ತಿ, 8.30 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿ ತೊಂಬತ್ತು–ನೆನಪುಗಳ ಹೊತ್ತು– ವಿಶೇಷ ಕಾರ್ಯಕ್ರಮ ಸರಣಿ, ಸಾಹಿತಿ, ಸಂಘಟಕ ಹಾಗೂ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಡಾ. ಮೈಸೂರು ಉಮೇಶ್, 9.00 ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ.ಎಸ್. ಹೇರಂಬಾ ಮತ್ತು ಕೆ.ಎಸ್. ಹೇಮಂತ್ – ದ್ವಂದ್ವ ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ, ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ.ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು –ಪಿ. ರಮಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕದ್ರಿಗೋಪಾಲನಾಥ್ – ಸ್ಯಾಕ್ಸೋಫೋನ್, 4.00 ಕಥಾಕಾಲಕ್ಷೇಪ–ಹನುಮದ್ ವ್ರತ, ಪ್ರಸ್ತುತಿ– ಸಂತ ಶ್ರೀ ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನು ಸಾಕಾಣಿಕೆ ಪ್ರಾಮುಖ್ಯತೆ ಕುರಿತು ಸಂವಾದ: ಭಾಗವಹಿಸುತ್ತಾರೆ–ಚಾಮರಾಜನಗರ ತಾಲ್ಲೂಕು, ಹರದನಹಳ್ಳಿ ಹೋಬಳಿ, ಬಂದಿಗೌಡನಹಳ್ಳಿಯ ಕೃಷಿಕ ದಂಪತಿ ವಿ. ನಟರಾಜ ಮತ್ತು ಸಿ. ಶೀಲಾ, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ಬಿ. ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ರಘುನಾಥ್ ಸೇಠ್–ಕೊಳಲು ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎಸ್. ವಿಜಯರಾಘವನ್–ವೀಣಾ ವಾದನ, 10.00 ಚೈತ್ರವನ, ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರ ವಿರೋಧಿಸಿ ಎಐಡಿಎಸ್‌ಓ ಪ್ರತಿಭಟನೆ

ಮಡಿಕೇರಿ, ನ.24–ಕೆಪಿಎಸ್–ಮ್ಯಾಗ್ನೆಟ್ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವ ರಾಜ್ಯ ಸರ್ಕಾರದ ವಿರುದ್ಧ ಇಂದು AIDSO ವಿದ್ಯಾರ್ಥಿ ಸಂಘಟನೆಯಿಂದ ಜಿಲ್ಲಾಧಿಕಾರಿ ಕಚೇರಿಯೆದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ ಮಾತನಾಡಿ, ಕರ್ನಾಟಕ ಪಬ್ಲಿಕ್ ಶಾಲೆಗಳ ಮ್ಯಾಗ್ನೆಟ್ ಶಾಲೆಗಳ ಯೋಜನೆ ಎಂಬ ವಂಚನೆಯ ಮುಖವಾಡದಡಿಯಲ್ಲಿ, ಸರ್ಕಾರ ರಾಜ್ಯದಾದ್ಯಂತ 40,000ಕ್ಕೂ ಹೆಚ್ಚು ಶಾಲೆಗಳನ್ನು ವಿಲೀನಗೊಳಿಸಲು ಮತ್ತು ಅವುಗಳನ್ನು ಸಂಪೂರ್ಣವಾಗಿ ಮುಚ್ಚಲು ಸಿದ್ಧತೆ ನಡೆಸುತ್ತಿದೆ. "ಗುಣಮಟ್ಟ" ಮತ್ತು "ಮಾದರಿ ಶಾಲೆಗಳು" ಎಂಬ ಆಕರ್ಷಕ ಪದಗಳ ಹಿಂದೆ, ಉಚಿತ ಮತ್ತು ಸಾರ್ವತ್ರಿಕ ಶಿಕ್ಷಣದ ನಮ್ಮ ನವೋದಯ ಚಿಂತಕರು, ಕ್ರಾಂತಿ ಕಾರಿಗಳು ಕಷ್ಟಪಟ್ಟು ಗಳಿಸಿದ ವ್ಯವಸ್ಥೆಯನ್ನು ನಾಶಪಡಿಸುವ ಒಂದು ನಿಷ್ಕರುಣ ಪ್ರಯತ್ನ ಅಡಗಿದೆ ಎಂದು ಆರೋಪಿಸಿದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆರೆಯುವ ಕೆಪಿಎಸ್–ಮ್ಯಾಗ್ನೆಟ್ ಶಾಲೆ ಅತ್ಯಂತ ಅಪಾಯಕಾರಿಯಾಗಿದೆ. ಏಕೆಂದರೆ, ರಾಜ್ಯದಲ್ಲಿ ಒಟ್ಟು 49,600 ಸರ್ಕಾರಿ ಶಾಲೆ ಗಳಿವೆ. 30,000 ಗ್ರಾಮಗಳಿರುವ ನಮ್ಮಲ್ಲಿ ಕೇವಲ 5,900 ಗ್ರಾಮ ಪಂಚಾಯಿತಿಗಳಿವೆ. ಸರ್ಕಾರದ ಯೋಜನೆಯ ಪ್ರಕಾರ ರಾಜ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಸೇರಿದಂತೆ 5,900 ಶಾಲೆಗಳು ಮಾತ್ರ ಉಳಿಯುತ್ತದೆ.



AIDSO ಸಂಘಟನೆಯ ಪದಾಧಿಕಾರಿಗಳು ಜಿಲ್ಲಾಧಿಕಾರಿ ವೆಂಕಟರಾಜ ಅವರಿಗೆ ಮನವಿಯನ್ನು ಸಲ್ಲಿಸಿದರು

ಇದರಲ್ಲಿ ಜಿಲ್ಲೆಯ ಮಡಿಕೇರಿ, ಕಕ್ಕಬ್ಬೆ, ಬೆಟ್ಟಗೆರೆ, ಮತ್ತು ಭಾಗ ಮಂಡಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮ್ಯಾಗ್ನೆಟ್ ಶಾಲೆಯನ್ನಾಗಿ ಪರಿವರ್ತಿಸುವುದಾಗಿ ಹೇಳಿದ್ದಾರೆ ಎಂದು ಆಪಾದಿಸಿದರು.

ಜಿಲ್ಲಾ ಸಂಚಾಲಕಿ ಸ್ವಾತಿ ಮಾತನಾಡಿ, ಪಬ್ಲಿಕ್ ಶಾಲೆಯ ಸುತ್ತಮುತ್ತಲಿನ 1ರಿಂದ 5 ಕಿ.ಮೀ ವ್ಯಾಪ್ತಿಯ, 50ಕ್ಕಿಂತ ಕಡಿಮೆ ದಾಖಲಾತಿ ಹೊಂದಿರುವ ಚಿಕ್ಕಪುಟ್ಟ ಶಾಲೆಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳಲಿದೆ ಸರ್ಕಾರವು ಪ್ರತಿ ಹಳ್ಳಿಗೆ ಬಸ್ ಬಿಡುತ್ತೇವೆ ಎಂದು ಹೇಳುತ್ತಿದ್ದೂ ಈಗಾಗಲೇ ಎಷ್ಟೋ ಹಳ್ಳಿಗಳಲ್ಲಿ ಬಸ್ ಇಲ್ಲದೆ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ವಾಸ್ತವತೆ ಹೀಗಿರುವಾಗ, 6–7 ಕಿಮೀ ದೂರದ ಶಾಲೆ ಯನ್ನು ತಲುಪಲಾಗದೆ ಬಡ ಮಕ್ಕಳು ಶಿಕ್ಷಣದಿಂದ ದೂರ ಉಳಿಯುತ್ತಾರಷ್ಟೆ ಈ ಯೋಜನೆಗೆ ಏಷಿಯನ್ ಡೆವಲಪ್ಮೆಂಟ್ ಬ್ಯಾಂಕಿನಿಂದ ಈಗಾಗಲೇ 2,500 ಕೋಟಿ ಸಾಲ ಪಡೆದಿರುವ ಮತ್ತು 10,000 ಕೋಟಿ ಸಾಲ ಪಡೆಯಲಿರುವ ಸರ್ಕಾರವು ಕಾರ್ಪೊರೇಟ್ ಹಿತಾಸಕ್ತಿ ಕಾಪಾಡಲು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದೆ ಎಂದು ಕಿಡಿಕಾರಿದರು. ಪ್ರತಿಭಟನಾ ಕಾರರು ಜಿಲ್ಲಾಧಿಕಾರಿ ವೆಂಕಟರಾಜ ಅವರಿಗೆ ಮನವಿಯನ್ನು ಸಲ್ಲಿಸಿದರು

ಪ್ರತಿಭಟನೆಯಲ್ಲಿ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಉಪಾಧ್ಯಕ್ಷ ವಿ.ಎನ್ ರಾಜಶೇಖರ್, AIDSO ಸಂಘಟನೆಯ ಪದಾಧಿಕಾರಿ ಅಂಜಲಿ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರತಿಭಟನಾಕಾರರು ಜಿಲ್ಲಾಧಿಕಾರಿ ವೆಂಕಟ ರಾಜ ಅವರಿಗೆ ಮನವಿಯನ್ನು ಸಲ್ಲಿಸಿದರು.

ಕೆರೆಗೆ ಹಾರಿ ಮಹಿಳೆ ಆತ್ಮಹತ್ಯೆ

ಗೋಣಿಕೊಪ್ಪ, ನ.24–ಮಹಿಳೆಯೋರ್ವರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಪೊನ್ನಂಪೇಟೆ ತಾಲೂಕಿನ ಬಲ್ಯಮಂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೂಚಮಕೇರಿ ಗ್ರಾಮದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಮೂಕ್ಕಳಮಾಡ ಸುರೇಶ್ ಎಂಬುವವರ ಪತ್ನಿ ಸುಮಿತಾ(48) ಎಂಬವರು ಆತ್ಮಹತ್ಯೆಗೆ ಶರಣಾದವರಾಗಿದ್ದಾರೆ.



ಸುಮಿತಾ

2 ತಿಂಗಳ ಹಿಂದೆ ಮಗನಿಗೆ ವಾಹನ ಅಪಘಾತ ಸಂಭವಿಸಿ ಆಸ್ಪತ್ರೆ ಸೇರಿದ್ದು, ಮಗನನ್ನು ನೋಡಿ ಸುಮಿತಾ ಮಾನಸಿಕವಾಗಿ ಕುಂದಿದ್ದರೆನ್ನಲಾಗಿದೆ. ಸೋಮವಾರ ಬೆಳಗಿನ ಜಾವ ಸುಮಿತ ಬೆಳಗಿನ ತಿಂಡಿಗೆ ಚಪಾತಿ ಹಿಟ್ಟು ತಯಾರಿಸಿದ್ದು, ಬಳಿಕ ಮನೆಯಲ್ಲಿ ಕಂಡು ಬರಲಿಲ್ಲ. ಪತಿ ಸುರೇಶ್ ಪತ್ನಿ ಮನೆಯಲ್ಲಿ ಕಾಣದ ಹಿನ್ನೆಲೆಯಲ್ಲಿ ತಮ್ಮ ಮನೆಯ ಸುತ್ತಮುತ್ತ ಹುಡುಕಾಟ ನಡೆಸಿದ್ದಾರೆ. ಅಕ್ಕ ಪಕ್ಕದ ಮನೆಯವರೊಂದಿಗೆ ಹುಡುಕಾಟ ನಡೆಸಿದಾಗ ಮೂಕಳೇರ ಅಪ್ಪಾಜಿ ಎಂಬವರ ಕೆರೆಯಲ್ಲಿ ಮೃತ ದೇಹ ತೇಲುತ್ತಿರುವುದು ಕಂಡು ಬಂದಿದೆ.

ಪೊಲೀಸರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಶ್ರೀಮಂಗಲ ಠಾಣಾಧಿಕಾರಿ ಎ.ಎಸ್.ರವೀಂದ್ರ, ಎ.ಎಸ್.ಐ ಸುಕುಮಾರ್, ಸಿಬ್ಬಂದಿ ಎಂ.ಪಿ.ಮೇಘನಾ, ಎಸ್.ಎಸ್.ಅರುಣ್ ಹಾಗೂ ಧರಣೇಶ್ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಗ್ರಾಮಸ್ಥರ ಸಹಾಯದಿಂದ ಕೆರೆಯಿಂದ ಮೃತ ದೇಹವನ್ನು ಹೊರ ತೆಗೆದು ಮಹಜರು ನಡೆಸಲಾಯಿತು. ತದನಂತರ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮೃತ ದೇಹದ ಮರಣೋತರ ಪರೀಕ್ಷೆಗೆ ಸ್ಥಳಾಂತರಿಸಲಾಯಿತು. ಆತ್ಮಹತ್ಯೆ ಘಟನೆ ಕುರಿತು ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಮುತ್ತಪ್ಪನ್ ಕಾವ್‌ದೇವಾಲಯಕ್ಕೆ ಶಂಕುಸ್ಥಾಪನೆ



ವಿರಾಜಪೇಟೆ: ಪಟ್ಟಣದ ಸುಂಕದಕಟ್ಟೆ ಮಲೆತಿರಿಕೆ ಬೆಟ್ಟದಲ್ಲಿರುವ ಶ್ರೀ ಮುತ್ತಪ್ಪನ್ ಕಾವ್ ನೂತನ ದೇವಾಲಯ ನಿರ್ಮಾಣಕ್ಕೆ ಧಾರ್ಮಿಕ ಸಂಪ್ರದಾಯದಂತೆ ಪೂಜಾ ವಿಧಿ ವಿಧಾನಗಳನ್ನು ಅರ್ಚಕರಾದ ಶಿಜಿ ಹಾಗೂ ಸಂತೋಷ್ ನಡೆಸಿದ ಬಳಿಕ ದಾನಿಗಳಾದ ಮಹಾಲಕ್ಷ್ಮೀ ಆಟೋ ಲಿಂಕ್ಸ್ ಮಾಲಿಕ ನಾಗರಾಜ್ ಚುಪ್ಪ, ಉದ್ಯಮಿ ಕೂತಂಡ ಸವಿನ್ ಕುಟ್ಟಯ್ಯ ಶಂಕುಸ್ಥಾಪನೆ ನೆರವೇರಿಸಿದರು.

ಅನಿಲ್ ಕುಮಾರ್ ಮಾತನಾಡಿ, ನೂತನ ದೇವಾಲಯ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದ್ದು. ಪ್ರಾಚೀನ ಕಾಲದ ಇತಿಹಾಸವಿರುವ ಸ್ಥಳವಾಗಿದ್ದು, ಗ್ರಾಮಸ್ಥರು ದಾನಿಗಳ ಸಹಕಾರದೊಂದಿಗೆ ದೇವಸ್ಥಾನ ನಿರ್ಮಾಣ ಕಾರ್ಯಕ್ಕೆ ಕೈಜೋಡಿಸುವಂತಾಗಬೇಕು ಎಂದರು.

ತಗ್ಗಲೂರು ಹೊರ ವಲಯದಲ್ಲಿ ಚಿರತೆ ಸೆರೆ

ಬೇಗೂರು, ನ.24–ಸಮೀಪದ ತಗ್ಗಲೂರು ಗ್ರಾಮದ ಹೊರ ವಲಯದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಹೆಣ್ಣು ಚಿರತೆ ಒಂದು ಸೆರೆಯಾಗಿದೆ

ಇಂದು ಬೆಳಗ್ಗೆ ಗ್ರಾಮದ ನಾಗೇಂದ್ರ ಮತ್ತು ಗ್ರಾಮಸ್ಥರು ಜಮೀನಿನ ಕಡೆ ತೆರಳಿದಾಗ ಸುಮಾರು ಮೂರರಿಂದ ನಾಲ್ಕು ವರ್ಷದ ಹೆಣ್ಣು ಚಿರತೆ ಬೋನಿನಲ್ಲಿ ಸೆರೆಯಾಗಿರುವುದನ್ನು ಕಂಡು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಆರ್‌ಎಫ್‌ಓ ಶಿವಕುಮಾರ್, ಮತ್ತು ಪರಸಪ್ಪ ಚಿರತೆಯನ್ನು ವಾಹನದಲ್ಲಿ ತೆಗೆದು ಕೊಂಡು ಹೋಗಿ ವೈದ್ಯಾಧಿಕಾರಿಗಳಿಂದ ಆರೋಗ್ಯ ತಪಾಸಣೆ ಮಾಡಿಸಿ ಬಂಡಿಪುರ ರಾಷ್ಟ್ರೀಯ ಉದ್ಯಾನವನದ ತಮಿಳುನಾಡಿನ ಚೆಕ್‌ಪೋಸ್ಟ್ ಬಳಿ ಅರಣ್ಯದ ಒಳಗೆ ತೆರಳಿ ಚಿರತೆಯನ್ನು ಬಿಡಲಾಗಿದೆ



ತಗ್ಗಲೂರು ಗ್ರಾಮದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಹೆಣ್ಣು ಚಿರತೆ ಸೆರೆಯಾಗಿದೆ

ಮೂರು–ನಾಲ್ಕು ತಿಂಗಳಿನಿಂದ ಚಿರತೆ ಹಾವಳಿ ಹೆಚ್ಚಾಗಿದ್ದು ಬೇಗೂರು ಹೋಬಳಿಯ ಸೋಮಹಳ್ಳಿ, ಬೆಳಚಲವಾಡಿ, ಕಾಳನಹುಂಡಿ, ಭೋಗಯ್ಯನ ಹುಂಡಿ, ಕೋಟೆ ಕೆರೆ, ತೊಂಡವಾಡಿ, ಹಿರೀಕಾಟಿ, ದೊಡ್ಡಹುಂಡಿ, ಸೇರಿದಂತೆ ಈ ಗ್ರಾಮಗಳ ರೈತರ ಜಮೀನುಗಳಲ್ಲಿ ಹಾಗೂ ಕೋಟೆ ಕೆರೆ ಗ್ರಾಮದ ನೀಲಿ ದಾಸಪ್ಪಬೆಟ್ಟ, ರಂಗೂಪುರ ಗ್ರಾಮದ ಬಳಿ ಇರುವ ಬೆಟ್ಟ ಗುಡ್ಡಗಳಲ್ಲಿ ಚಿರತೆ ಕಾಣಿಸಿಕೊಳ್ಳುತ್ತಿತ್ತು ತಗ್ಗಲೂರು ಗ್ರಾಮದ ಹೊರವಲಯದ ತಮ್ಮಯ್ಯಪ್ಪ, ಚಂದ್ರು ಅವರ ಜಮೀನಿನ ಬಳಿ ಚಿರತೆ ಸೆರೆಗಾಗಿ 2 ದಿನಗಳ ಹಿಂದೆಯಷ್ಟೇ ಬಂಡಿಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಬಫರ್ ಜೋನ್ ಅರಣ್ಯ ವಲಯದ ಅಧಿಕಾರಿಗಳು ಬೋನ್ ಇರಿಸಿದ್ದರು. ಈಗ ಚಿರತೆ ಸೆರೆಯಾಗಿರುವುದರಿಂದ ಈ ಭಾಗದ ರೈತರಲ್ಲಿ ಆತಂಕ ದೂರ ಮಾಡಿದಂತಾಗಿದೆ ಹಾಗೂ ಚಿರತೆಗಳ ಹಾವಳಿ ಹೆಚ್ಚಾಗಿರುವುದರಿಂದ ತಗ್ಗಲೂರು ಗ್ರಾಮದ ಚಂದ್ರು ಎಂಬುವರ ಜಮೀನಿನ ಬಳಿ ಮತ್ತೊಂದು ಬೋನ್ ಇಡಲಾಗಿದೆ

ಜಾನುವಾರುಗಳ ಸಾವು : ತಗ್ಗಲೂರು ಗ್ರಾಮದ ಮಹದೇವ ಗೌಡ, ಸುಬ್ಬಮ್ಮ, ರಾಮಶೆಟ್ಟಿ, ಮಹೇಶ್, ಎಂಬುವರಿಗೆ ಸೇರಿದ ಜಾನುವಾರುಗಳನ್ನು ಕಳೆದ ಎರಡು ತಿಂಗಳಿನಿಂದ ಚಿರತೆ ತಿಂದು ಹಾಕಿತ್ತು ಹಾಗೂ ನಾಗೇಂದ್ರ ಎಂಬವರ ಸಾಕು ನಾಯಿ ಸೇರಿದಂತೆ ಗ್ರಾಮದ ಹತ್ತಕ್ಕೂ ಹೆಚ್ಚು ಜಾನುವಾರುಗಳನ್ನು ಚಿರತೆ ಬಲಿ ತೆಗೆದುಕೊಂಡಿತ್ತು

ಹಿರಿಕಾಟಿ ಗೇಟ್ ಬಳಿ ಸರಣಿ ಅಪಘಾತ : ಇಬ್ಬರಿಗೆ ತೀವ್ರ ಗಾಯ



ಬೇಗೂರು ಸಮೀಪದ ಹಿರಿಕಾಟಿ ಗೇಟ್‌ನ ಬಳಿ ಟ್ಯಾಂಕರ್, ಕಾರು ಮತ್ತು ಬೈಕ್ ನಡುವೆ ಸರಣಿ ಅಪಘಾತ ಸಂಭವಿಸಿರುವುದು.

ಬೇಗೂರು, ನ.24– ನೀರಿನ ಟ್ಯಾಂಕರ್ ಮತ್ತು ಸ್ವಿಫ್ಟ್ ಕಾರ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಇಬ್ಬರು ಶಬರಿಮಲೆ ಯಾತ್ರಿಗಳು ತೀವ್ರವಾಗಿ ಗಾಯ ಗೊಂಡಿರುವ ಘಟನೆ ಬೇಗೂರು ಸಮೀಪದ ಹಿರಿಕಾಟಿ ಗೇಟ್ ಬಳಿ ಸಂಭವಿಸಿದೆ.

ಬೇಗೂರು ಸಮೀಪದ ಹಿರಿಕಾಟಿ ಗೇಟ್‌ನ ಸಮೀಪದ ಚಿಕ್ಕುಂಡಿಗೆ ಹೋಗುವ ರಸ್ತೆ ಬಳಿ ರಾಷ್ಟ್ರೀಯ ಹೆದ್ದಾರಿ(766)ಯಲ್ಲಿ ಗುಂಡ್ಲುಪೇಟೆ ಕಡೆಯಿಂದ ಶಬರಿಮಲೆ ಯಾತ್ರೆ ಮುಗಿಸಿ ಮೈಸೂರಿಗೆ ಹೋಗುತ್ತಿದ್ದ ಸ್ವಿಫ್ಟ್ ಕಾರ್ (ಕೆಎ–01, ಎಂಆರ್–6835)ಗೆ ಎದುರಿನಿಂದ ಬಂದ ಕೇರಳ ಮೂಲದ ನೀರಿನ ಟ್ಯಾಂಕರ್ (ಕೆ.ಎಲ್–09–ಎಹೆಚ್–5778) ಡಿಕ್ಕಿ ಸಂಭವಿಸಿದ ಪರಿಣಾಮ ಕಾರಿನಲ್ಲಿದ್ದ ಮನು ಹಾಗೂ ದೊರೆಸ್ವಾಮಿ ಎಂಬುವರಿಗೆ ತೀವ್ರ ಗಾಯಗಳಾಗಿದ್ದು ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿದೆ ಅಪಘಾತದ ರಭಸಕ್ಕೆ ಪಕ್ಕದಲ್ಲಿ ನಿಂತಿದ್ದ ಅರೆಪುರ ಗ್ರಾಮದವರಿಗೆ ಸೇರಿದ ಬೈಕ್‌ಗೆ (ಕೆಎ11, ಬಿ–5738) ಡಿಕ್ಕಿ ಸಂಭವಿಸಿದ್ದು ಸಂಪೂರ್ಣ ಜಖಂಗೊಂಡಿದೆ.

ವಿಷಯ ತಿಳಿದ ಬೇಗೂರು ಪೊಲೀಸರು ಸ್ಥಳಕ್ಕೆ ಧಾವಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿ ಗಾಯಾಳುಗಳನ್ನು ಸಮೀಪದ ಬೇಗೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ ಈ ಸಂಬಂಧ ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ವಿದ್ಯಾರ್ಥಿಗಳಿಂದ ಪುಸ್ತಕ ಸುಟ್ಟು ಹಾಕಿಸಿದ ಶಿಕ್ಷಕ ಅಮಾನತು

ಚಾಮರಾಜನಗರ, ನ.24– ತಾಲೂಕಿನ ಕೆರೆಹಳ್ಳಿ ಸರಕಾರಿ ಶಾಲೆಯಲ್ಲಿ ಹಳೇ ಪುಸ್ತಕಗಳನ್ನು ವಿದ್ಯಾರ್ಥಿಗಳಿಂದ ಸುಟ್ಟು ಹಾಕಿಸಿದ ಮುಖ್ಯ ಶಿಕ್ಷಕರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಮುಖ್ಯ ಶಿಕ್ಷಕ ನಾಗನಾಯಕ ಅಮಾನತುಗೊಂಡವರು. ಕೆರೆಹಳ್ಳಿ ಶಾಲೆಯ ಅಲ್ಮೆರಾದಲ್ಲಿ ಸಾಕಷ್ಟು ಹಳೆಯ ಪುಸ್ತಕಗಳಿದ್ದು, ಕಿತ್ತು ಬಂದಿದ್ದವು. ಹಾಗಾಗಿ ಅದನ್ನು ಶುಚಿಗೊಳಿಸುವ ಸಲುವಾಗಿ ಹಳೇ ಪುಸ್ತಕಗಳನ್ನು ಹೊರ ತೆಗೆದು, ಅವುಗಳನ್ನು ವಿದ್ಯಾರ್ಥಿಗಳಿಂದ ಸುಟ್ಟು ಹಾಕಿಸಿದ್ದಾರೆ ಈ ವೇಳೆ ಆ ಪುಸ್ತಕಗಳೊಂದಿಗೆ ಅಂಬೇಡ್ಕರ್ ಚಿತ್ರವಿದ್ದರೂ ಅದನ್ನೂ ಸುಟ್ಟು ಹಾಕಿಸಿರುವುದು ಪೋಷಕರ ಆಕ್ರೋಶಕ್ಕೆ ಕಾರಣವಾಗಿದೆ.ಹಳೇ ಪುಸ್ತಕಗಳನ್ನು ಸುಡುವ ಅಗತ್ಯ ಏನಿತ್ತು, ಪುಸ್ತಕದೊಂದಿಗೆ ಮಹಾಪುರುಷರ ಚಿತ್ರಗಳಿರುತ್ತವೆ ಎಂಬ ಜ್ಞಾನ ಇರಲಿಲ್ಲವೆ ಎಂದು ಪೋಷಕರು ಶಾಲೆ ಬಳಿಗೆ ತೆರಳಿ ಗಲಾಟೆ ಮಾಡಿದ್ದಾರೆ.

ಎಸ್ಪಿ ಪರಿಶೀಲನೆ: ವಿಚಾರ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ತಮ್ಮ ಅಧಿಕಾರಿ, ಸಿಬ್ಬಂದಿಯೊಂದಿಗೆ ಶಾಲೆಗೆ ಭೇಟಿ ನಿಡಿ ತೆರಳಿ ಪರಿಶೀಲಿಸಿ ಗ್ರಾಮಸ್ಥರಿಂದ ವಿವರ ಪಡೆದುಕೊಂಡರು. ಹಳೇ ಪುಸ್ತಕಗಳಿದ್ದರೂ ಅದನ್ನು ಸುಡುವಂತಿಲ್ಲ. ಈ ನಡುವೆ ಪುಸ್ತಕಗಳೊಂದಿಗೆ ಅಂಬೇಡ್ಕರ್ ಸೇರಿದಂತೆ ಮಹಾನ್ ನಾಯಕರ ಚಿತ್ರಗಳಿದ್ದವು ಎಂಬುದಾಗಿ ಪೋಷಕರು ಆರೋಪಿಸಿದ ಹಿನ್ನೆಲೆಯಲ್ಲಿ ವಿಚಾರಣೆ ಕಾಯ್ದಿರಿಸಿ ಮುಖ್ಯ ಶಿಕ್ಷಕರನ್ನು ಅಮಾನತುಗೊಳಿಸಲಾಗಿದೆ ಎಂದು ಶಿಕ್ಷಣ ಇಲಾಖೆಯ ಡಿಡಿಪಿಐ ಚಂದ್ರ ಪಾಟೀಲ್ ತಿಳಿಸಿದರು.



ಕೆರೆಹಳ್ಳಿ ಗ್ರಾಮದ ಶಾಲೆಯಲ್ಲಿ ಹಳೇ ಪುಸ್ತಕಗಳನ್ನು ಸುಟ್ಟಿರುವ ಸ್ಥಳ

ನಕಲಿ ಸಹಿ ಬಳಸಿ 3 ಕೋಟಿಗೂ ಹೆಚ್ಚು ಹಣ ವಂಚನೆ

ಠೇವಣಿ ಹಣ ನೀಡಿಲ್ಲವೆಂದು ಆರೋಪಿಸಿ ಪ್ರತಿಭಟನೆ

ಸರಗೂರು, ನ.24– ಪಟ್ಟಣದ ಅಂಚೆ ಕಚೇರಿ ಸಿಬ್ಬಂದಿಯೊಬ್ಬರು ಖಾತೆದಾರರ ನಕಲಿ ಸಹಿ ಬಳಸಿ 3 ಕೋಟಿಗೂ ಹೆಚ್ಚು ಹಣ ಲಪಟಾಯಿಸಿರುವ ಸಂಬಂಧ ಖಾತೆದಾರರು ದೂರು ನೀಡಿ 6 ತಿಂಗಳು ಕಳೆದರೂ ಠೇವಣಿ ಹಣ ನೀಡಿಲ್ಲ ಎಂದು ಆರೋಪಿಸಿ ಖಾತೆದಾರರು ಪಟ್ಟಣದ ಅಂಚೆ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಅಂಚೆ ಕಚೇರಿಗೆ ಮುತ್ತಿಗೆ ಹಾಕಿದ ಖಾತೆದಾರು ಅಂಚೆ ಇಲಾಖೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಖಾತೆದಾರರಾದ ಮುಳ್ಳೂರು ಲೋಕೇಶ್, ಎಸ್.ಎನ್. ಮೋಹನಕುಮಾರ್, ಎಸ್.ಆರ್. ಮಹೇಶ್ ಮಾತನಾಡಿ, ಅಂಚೆ ಕಚೇರಿಯಲ್ಲಿ ಬಹಳಷ್ಟು ಮಂದಿ ವಯೋವೃದ್ಧರು, ನಿವೃತ್ತ ನೌಕರರು, ಮಹಿಳೆಯರು ತಮ್ಮ ಜೀವನ ನಿರ್ವಹಣೆಗಾಗಿ ಠೇವಣಿ ಇಟ್ಟಿದ್ದು, ಅಂಚೆ ಕಚೇರಿಯ ಅಂಚೆ ಶಾಖಾ ಪಾಲಕ(ಪೋಸ್ಟಲ್ ಅಸಿಸ್ಟೆಂಟ್) ದೀಪಕ್ ಎಂಬಾತ ನಕಲಿ ಸಹಿ ಮಾಡಿ ಅಂಚೆ ಕಚೇರಿಯ ವಿವಿಧ ಖಾತೆಗಳಿಂದ ಮೂರು ಕೋಟಿಗೂ ಹೆಚ್ಚು ಹಣ ಲೂಟಿ ಮಾಡಿದ್ದಾರೆ. ಪ್ರಕರಣ ಬೆಳಕಿಗೆ ಬಂದು ಹಲವು ತಿಂಗಳು ಕಳೆದಿದ್ದು, ಈ ಸಂಬಂಧ ತಪ್ಪಿತಸ್ಥನ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಂಚೆ ಇಲಾಖೆಗೆ ದೂರು ನೀಡಿದರೂ ಇಲ್ಲಿವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.



ಸರಗೂರು ಅಂಚೆ ಕಚೇರಿ ಎದುರು ಖಾತೆದಾರರು ಪ್ರತಿಭಟನೆ ನಡೆಸಿದರು.


ಹೀಗಾಗಿ ಕೂಡಲೇ ಖಾತೆದಾರರಿಗೆ ಅವರ ಠೇವಣಿ ಹಣವನ್ನು ಬಡ್ಡಿ ಸಮೇತ ಕೊಡಿಸಬೇಕು. ಈ ಪ್ರಕರಣದಲ್ಲಿ ಅಂಚೆ ಶಾಖಾ ಪಾಲಕ ದೀಪಕ್ ಸೇರಿದಂತೆ ಉನ್ನತ ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಹೀಗಾಗಿ ಸೂಕ್ತ ತನಿಖೆ ನಡೆಸಿ,ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಖಾತೆದಾರರಾದ ನಿವೃತ್ತ ಶಿಕ್ಷಕ ಶಾಂಭುಮೂರ್ತಿ, ಮಹದೇವಪ್ಪ, ದಾಸೇಗೌಡ, ನಿತಿನ್, ಲೋಕೇಶ್, ಸುಂದರಮ್ಮ, ರಾಜೇಶ್, ಸಿ.ನಾಗರಾಜ್, ಸಿ.ಚೌಡಶೆಟ್ಟಿ ಶಾಂತಣ್ಣ ವೆಂಕಟೇಶ್, ಅನಂತ ಶಯನ, ಸುಧಾ, ಜಯಮ್ಮ, ಸರೋಜಮ್ಮ, ಜಿ.ಬಿ.ಶಶಿಕಲಾ, ಜಗದೀಶ್, ವಾಹನ ಚಾಲಕರ ಸಂಘದ ನಿರ್ದೇಶಕರಾದ ಬಿ.ಬೆಟ್ಟನಾಯಕ, ರವಿ ಸೇರಿದಂತೆ ಇನ್ನಿತರರಿದ್ದರು. ಸಿಪಿಐ ಪ್ರಸನ್ನ ಕುಮಾರ್, ಎಸ್‌ಐ ಗೋಪಾಲ್, ಸಿಬ್ಬಂದಿಗಳಾದ ಆನಂದ್, ಇಮ್ರಾನ್ ಅಹಮದ್, ಜಗದೀಶ್ ಸೂಕ್ತ ಬಂದೋಬಸ್ತ್ ಮಾಡಿದ್ದರು.

ಹುಲಿ ದಾಳಿಗೆ ಹಸು ಬಲಿ

ಹನಗೋಡು, ನ.24– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಹೆಮ್ಮಿಗೆ ಬಳಿ ಸೋಮವಾರ ನಡೆದಿದೆ.


ಇಲ್ಲಿಗೆ ಸಮೀಪದ ಕಾಮಗೌಡನಹಳ್ಳಿ ನಿವಾಸಿ ಸೋಮಶೇಖರ್ ಅವರಿಗೆ ಸೇರಿದ ಗಬ್ಬದ ಹಸು ಹುಲಿ ದಾಳಿಗೆ ಬಲಿಯಾಗಿದ್ದು, 1.20 ಲಕ್ಷ ರೂ. ನಷ್ಟ ಸಂಭವಿಸಿದೆ. ಇವರು ತಮ್ಮ ಜಮೀನಿನಲ್ಲೇ ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದು, ಪಕ್ಕದಲ್ಲಿರುವ ಬೀರತಮ್ಮನಹಳ್ಳಿ ಅರಣ್ಯದಿಂದ ಬಂದ ಹುಲಿ ಮನೆ ಕೊಟ್ಟಿಯಲ್ಲಿ ಕಟ್ಟಿ ಹಾಕಿದ್ದ ಹಸು ಮೇಲೆ ದಾಳಿ ನಡೆಸಿ ಬಲಿ ಪಡೆದಿದೆ. ಬಳಿಕ ಹಸುವನ್ನು ಸುಮಾರು ನೂರು ಮೀಟರ್ ಎಳೆದೊಯ್ಯಲು ಪ್ರಯತ್ನಿಸಿದ್ದು, ಸಾಧ್ಯವಾಗದೇ ಅಲ್ಲೇ ಬಿಟ್ಟು ಹೋಗಿದೆ.



ಹುಲಿ ದಾಳಿಗೆ ಹಸು ಬಲಿಯಾಗಿರುವುದು.

ವಿಷಯ ತಿಳಿದು ಸ್ಥಳಕ್ಕೆ ಆರ್‌ಎಫ್‌ಓ ಸುಬ್ರಹ್ಮಣ್ಯ, ಎಸಿಎಫ್ ಲಕ್ಷ್ಮಿಕಾಂತ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಬೋನಿಗೆ ಬಿದ್ದ ಚಿರತೆ



ಹನಗೋಡು: ಇಲ್ಲಿಗೆ ಸಮೀಪದ ವಡ್ಡಂಬಾಳಿನಲ್ಲಿ ಹಲವು ತಿಂಗಳಿಂದ ಕಾಣಿಸಿಕೊಂಡು ಆತಂಕ ಸೃಷ್ಟಿಸಿದ್ದ ಗಂಡು ಚಿರತೆ ಬೋನಿಗೆ ಬಿದ್ದಿದೆ.

ಕಳೆದ ಹಲವು ತಿಂಗಳಿಂದ ವಡ್ಡಂಬಾಳು ಗ್ರಾಮಕ್ಕೆ ಅನತಿ ದೂರದ ಜಮೀನಿನಲ್ಲಿ ಮನೆ ಮಾಡಿಕೊಂಡಿರುವ ಸಿದ್ದರಾಜನಾಯ್ಕ ಹಾಗೂ ಅನೇಕ ರೈತರ ಜಮೀನು ಬಳಿಯ ಕಲ್ಲಿನ ಗುಡ್ಡದಲ್ಲಿ ಚಿರತೆ ಆಗಾಗ್ಗೆ ಕಾಣಿಸಿಕೊಳ್ಳುತ್ತಿತ್ತು. ಹೀಗಾಗಿ ಗ್ರಾಮಸ್ಥರು ಓಡಾಡಲು ಭಯಪಡುತ್ತಿದ್ದರು. ಚಿರತೆ ಫೋಟೋ ತೆಗೆದು ಪ್ರಾದೇಶಿಕ ಅರಣ್ಯ ವಿಭಾಗದ ಆರ್‌ಎಫ್‌ಓ ನಂದಕುಮಾರ್ ಅವರ ಗಮನಕ್ಕೆ ತರಲಾಗಿತ್ತು. ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗಾಗಿ ಗ್ರಾಮದ ರೈತ ಸಿದ್ದರಾಜು ಅವರ ಜಮೀನು ಬಳಿಯ ಕಲ್ಲಿನ ಗುಡ್ಡದ ಬಳಿ ಇರಿಸಿದ್ದ ಬೋನಿನಲ್ಲಿ ಸುಮಾರು ಐದಾರು ವರ್ಷದ ಚಿರತೆ ಸೆರೆಯಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಅಧಿಕಾರಿಗಳು ಚಿರತೆಯನ್ನು ವಶಕ್ಕೆ ಪಡೆದು ನಾಗರಹೊಳೆ ಉದ್ಯಾನವನಕ್ಕೆ ಬಿಟ್ಟಿದ್ದಾರೆ.

ಬೆಳೆಗಳಿಗೆ ದರ ನಿಗದಿ, ಖರೀದಿ ಕೇಂದ್ರ ತೆರೆಯಲು ಆಗ್ರಹ

ತಿ.ನರಸೀಪುರ, ನ.24– ಭತ್ತ ರಾಗಿ, ಜೋಳ ಕಟಾವಿಗೆ ಬಂದಿದ್ದರೂ ರೈತರ ಬೆಳೆಗಳಿಗೆ ಉತ್ತಮ ಬೆಲೆ ನಿಗದಿ ಪಡಿಸುವ ಜೊತೆಗೆ ಖರೀದಿ ಕೇಂದ್ರ ತೆರೆಯದೆ ತಾಲೂಕು ಆಡಳಿತ ಉಡಾಫೆಯಿಂದ ನಡೆದುಕೊಳ್ಳುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಜಿಲ್ಲಾ ಸಂಚಾಲಕ ಕಳ್ಳೀಪುರ ಮಹದೇವ ಸ್ವಾಮಿ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ವಿರೋಧ ಪಕ್ಷಗಳು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಅಸಭ್ಯ ಮಾತುಗಳಿಂದ ಒಬ್ಬರನೊಬ್ಬರು ನಿಂದಿಸುತ್ತಾ ಕಾಲ ಕಳೆಯುತ್ತಿದ್ದಾರೆ. ರೈತರ, ಬಡವರ ಸರ್ಕಾರಗಳೆಂದು ಹೇಳಿಕೊಂಡು ರಾಜ್ಯದ ಅಭಿವೃದ್ಧಿ ಮಾಡದೆ ಭ್ರಷ್ಟಾಚಾರದಲ್ಲಿ ತೊಡಗಿ ರಾಜ್ಯದ ಖಜಾನೆಯನ್ನು ಲೂಟಿ ಹೊಡೆಯುವಲ್ಲಿ ನಿರತವಾಗಿವೆ. ರಾಜ್ಯ ಸರ್ಕಾರದ ಅಸಂಬದ್ಧ ನಡೆಯನ್ನು ರೈತ ಸಂಘ ಹಾಗೂ ಹಸಿರು ಸೇನೆ ಖಂಡಿಸುತ್ತದೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ರೈತರ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸಬೇಕು. ಭತ್ತ ರಾಗಿ, ಮುಸುಕಿನ ಜೋಳ ಖರೀದಿ ಕೇಂದ್ರ ತೆರೆಯುವುದು. ಭತ್ತ, ರಾಗಿ ಕಟಾವು ಯಂತ್ರಗಳಿಗೆ ದರ ನಿಗದಿ ಪಡಿಸುವುದು. ಭತ್ತ ರಾಗಿ ಕಟಾವು ಯಂತ್ರಗಳಿಗೆ ತೊಂದರೆ ಕೊಡುತ್ತಿರುವ ಆರ್‌ಟಿಓ ಹಾಗೂ ಪೊಲೀಸ್ ಅಧಿಕಾರಿಗಳಿಗೆ ತೊಂದರೆ ನೀಡದಂತೆ ಡಿಸಿ ಹಾಗೂ ಎಸ್‌ಪಿ ಅವರು ಸೂಚನೆ ನೀಡಬೇಕು ಎಂದರು.

ತಾಲೂಕು ಅಧ್ಯಕ್ಷ ಮಹದೇವ ಟೌನ್ ಅಧ್ಯಕ್ಷ ಕೆ.ಎಂ.ಶಾಂತರಾಜು, ತಾಲೂಕು ಗೌರವಾಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಓಂಕಾರಮೂರ್ತಿ, ಗುರುಸ್ವಾಮಿ, ಶಾಂತನಾಗರಾಜು, ನಾಗೇಂದ್ರ, ಚೆಲುವರಾಜು, ಮಹೇಶ್, ಎಸ್.ರಾಮಸ್ವಾಮಿ, ಸಿದ್ದರಾಜು, ನರಸಿಂಹನಾಯಕ, ಮಹದೇವಸ್ವಾಮಿ, ಶಂಕರೇಗೌಡ ಇದ್ದರು.



ಪತ್ರಿಕಾಗೋಷ್ಠಿಯಲ್ಲಿ ಕಳ್ಳೀಪುರ ಮಹದೇವಸ್ವಾಮಿ ಮಾತನಾಡಿದರು.

ಅತೀ ಹೆಚ್ಚು ಸಾಲ ಮಾಡಿದ ಕೀರ್ತಿ ಕಾಂಗ್ರೆಸ್‌ಗೆ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಕ್ರೋಶ



ಜೆಡಿಎಸ್ ಕಾರ್ಯಕರ್ತ ಮಹದೇವ್ ಅವರ ನಿವಾಸಕ್ಕೆ ನಿಖಿಲ್ ಕುಮಾರ ಸ್ವಾಮಿ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಮದ್ದೂರು, ನ.24– ರಾಜ್ಯದ ಇತಿಹಾಸದಲ್ಲೇ ಅತೀ ಹೆಚ್ಚು ಸಾಲ ಮಾಡಿದ ಕೀರ್ತಿ ಕಾಂಗ್ರೆಸ್‌ಗೆ ಸಲ್ಲಬೇಕು. ಕಳೆದ ಎರಡೂವರೆ ವರ್ಷದಲ್ಲಿ ಐದು ಲಕ್ಷ ಕೋಟಿ ಹೆಚ್ಚು ಸಾಲ ಮಾಡಿದೆ. ಇದು ಕಾಂಗ್ರೆಸ್ ಆಡಳಿತ ಎಂದು ನಿಖಿಲ್ ಕುಮಾರ ಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ದೇವೇಗೌಡನದೊಡ್ಡಿ ಗ್ರಾಮದ ಜೆಡಿಎಸ್ ಕಾರ್ಯಕರ್ತ ಮಹದೇವ್ ಅವರು ಇತ್ತೀಚಿಗೆ ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಸೋಮವಾರ ಅವರ ನಿವಾಸಕ್ಕೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರು ಗ್ಯಾರಂಟಿ, ಗ್ಯಾರಂಟಿ ಅಂತಾರೆ ಅದನ್ನು ಕೂಡ ಸರಿಯಾಗಿ ಕೊಟ್ಟಿಲ್ಲ. ಯುವನಿಧಿ ಕೊಟ್ಟಿದ್ದೀರಾ ಎಂದು ಪ್ರಶ್ನಿಸಿದ ಅವರು ಚುನಾವಣೆ ಸಂದರ್ಭ ಮಾತ್ರ ದುಡ್ಡು ಬಿಡುಗಡೆ ಮಾಡ್ತಾರೆ. ಈ ಸರ್ಕಾರದಲ್ಲಿ ಬಡವರು ಬದಕಲು ಆಗುತ್ತಿಲ್ಲ ಎಂದು ಕಿಡಿಕಾರಿದರು.

ನಮ್ಮ ಪಕ್ಷದ ಬಗ್ಗೆ ಕಲಾಪದಲ್ಲಿ ಕೀಳಾಗಿ ಮಾತನಾಡಿದರು. ಜೆಡಿಎಸ್ 18 ಸೀಟ್ ಪಡೆದಿದ್ದು, ಮುಂದಿನ ದಿನಗಳಲ್ಲಿ ಸಿಂಗಲ್ ಡಿಜಿಟ್‌ಗೆ ಬರುತ್ತದೆ. ಪಕ್ಷಕ್ಕೆ ಅಸ್ತಿತ್ವ ಇಲ್ಲ ಅಂತ ಲೇವಡಿ ಮಾಡಿದರು. ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್ ಪರಿಸ್ಥಿತಿ ಏನಾಯಿತು. ಅಲ್ಲಿನ ಜನರು ಕಾಂಗ್ರೆಸ್ ಪರಿಸ್ಥಿತಿ ತೋರಿಸಿದ್ದಾರೆ ಎಂದು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಬಂಡವಾಳ ಇದ್ದಿದ್ದಕ್ಕೆ ಕುಮಾರಸ್ವಾಮಿಗೆ ರೆಡ್ ಕಾರ್ಪೆಟ್ ಹಾಕಿ ಎನ್‌ಡಿಎಗೆ ಸೇರಿಸಿಕೊಂಡಿದ್ದಾರೆ. ಕುಮಾರಸ್ವಾಮಿ ಅವರಪ್ಪನಾಣೆ ಗೆಲ್ಲಲ್ಲ ಎಂದು ಕಾಂಗ್ರೆಸ್‌ನವರು ಭಾಷಣ ಬಿಗಿದರು. ಆದರೆ ಮಂಡ್ಯ ಜನರ ಆಶೀರ್ವಾದದಿಂದ ದಾಖಲೆ ಗೆಲುವು ಸಿಕ್ತು. ಬಂಡವಾಳ ಇರೋದಕ್ಕೆ ಕುಮಾರಣ್ಣನ ಗೆಲ್ಲಿಸಿರೋದು. ಚುನಾವಣೆಯಲ್ಲಿ ಗೆದ್ದಾಗ ತಲೆ ಎತ್ತಿ ಮೆರೆಯಲ್ಲ. ಸೋತಾಗ ಕೈ ಕಟ್ಟಿ ಮನೆಯಲ್ಲಿ ಕೂರಲಿಲ್ಲ ಎಂದು ಸಚಿವ ಚಲುವರಾಯಸ್ವಾಮಿ ಹೇಳಿಕೆಗೆ ನಿಖಿಲ್ ಟಾಂಗ್ ನೀಡಿದರು.

ಮದ್ದೂರು ತಾಲೂಕಿನಲ್ಲಿ ಪೊಲೀಸ್ ಠಾಣೆ ಇವರಪ್ಪನ ಮನೇನಾ? ಇಲ್ಲಿರುವ ಶಾಸಕರ ನಡವಳಿಕೆ ಸರಿಯಿಲ್ಲ. ಜಿಲ್ಲೆಯ ಶಾಸಕರು ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಲು ಹೊರಟಿದ್ದಾರೆ. ಮಂಡ್ಯ ಜಿಲ್ಲೆಗೆ ಅವರು ಏನು ಬಿರುದು ಕೊಟ್ಟರು. ಛತ್ರಿಗಳು ಅಂದ್ರು ಅದರ ಅರ್ಥ ತಿಳಿದುಕೊಳ್ಳಬೇಕು. ಜೆಡಿಎಸ್ ಬಗ್ಗೆ ಯಾಕೆ ತಲೆ ಕೆಡಿಸಿಕೊಳ್ಳುತ್ತಾರೆ ಎಂದು ನಿಖಿಲ್ ಟಾಂಗ್ ನೀಡಿದರು.

ಕುಮಾರಣ್ಣ ಸಿಎಂ ಆಗುವ ಬಗ್ಗೆ ಈಗಾಗಲೇ ಚಲುವರಾಯಸ್ವಾಮಿ ಅವರಿಗೆ ಆತಂಕ ಶುರುವಾಗಿದೆ. ಇನ್ನೂ ಚುನಾವಣೆ ಎರಡೂವರೆ ವರ್ಷ ಇದೆ. ಯಾರ ನಾಯಕತ್ವದಲ್ಲಿ ಚುನಾವಣೆ ನಡೆಯಬೇಕು ಎಂದು ಎನ್‌ಡಿಎ ತೀರ್ಮಾನ ಮಾಡುತ್ತದೆ. ಕುಮಾರಣ್ಣ ಅರ್ಜಿ ಹಾಕೊಂಡು ಹೋಗಿಲ್ಲ. ಸ್ವಾಭಿಮಾನದಿಂದ ಬದುಕಿದ್ದಾರೆ. ಎರಡೂ ಪಕ್ಷದ ನಾಯಕರು ಅದರ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದರು.

ಮಂಡ್ಯ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಚಿಕ್ಕ ತಿಮ್ಮೇಗೌಡ, ಮುಖಂಡರಾದ ಹನುಮಂತೇಗೌಡ ಇತರರಿದ್ದರು.

ಯುವಕನ ಕುಟುಂಬಸ್ಥರಿಗೆ ಸಾಂತ್ವನ

ಮದ್ದೂರು: ಇತ್ತೀಚಿಗೆ ಆತ್ಮಹತ್ಯೆ ಮಾಡಿಕೊಂಡ ತಾಲೂಕಿನ ದೇವೇಗೌಡನದೊಡ್ಡಿ ಗ್ರಾಮದ ನಿವಾಸಿ ಮಹದೇವು ಅವರ ನಿವಾಸಕ್ಕೆ ನಿಖಿಲ್ ಕುಮಾರ ಸ್ವಾಮಿ ಭೇಟಿ ನೀಡಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಆರ್ಥಿಕ ನೆರವು ನೀಡಿದರು.

ಈ ಘಟನೆಯಿಂದ ನನಗೆ ಹಾಗೂ ಕುಮಾರಣ್ಣ ಅವರ ಮನಸ್ಸಿಗೆ ನೋವಾಗಿದೆ. ಕುಮಾರಣ್ಣ ಸಿಎಂ ಆಗುವವರೆಗೂ ಚಪ್ಪಲಿ ಧರಿಸಲ್ಲ ಎಂದಿದ್ದರು. ಈಗ ಮಹದೇವು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾವ ಕಾರಣಕ್ಕೆ ಮಾಡಿಕೊಂಡಿದ್ದಾರೆ ಗೊತ್ತಿಲ್ಲ. ಹೋದ ಜೀವ ವಾಪಸ್ ತರಲು ಸಾಧ್ಯವಿಲ್ಲ ಎಂದು ನಿಖಿಲ್ ಬೇಸರ ವ್ಯಕ್ತಪಡಿಸಿದರು.

ಅವರ ಕುಟುಂಬದ ಜೀವನೋಪಾಯಕ್ಕೆ ನೆರವು ನೀಡುತ್ತೇವೆ. ಆ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಸಂತಾಪ ಸೂಚಿಸಿದರು.

ಗಾಂಧೀಜಿ ಕೋಮುವಾದಿಗಳ ವಿರೋಧಿಯಾಗಿದ್ದರು

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವುಡೇ ಪಿ.ಕೃಷ್ಣ

ಪಾಂಡವಪುರ, ನ.24– ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ್ಯ ಹೋರಾಟದ ಜೊತೆಗೆ ಮೂಲಭೂತವಾದಿ, ಹಿಂಸೆಯ ಪ್ರತಿಪಾದಿ ಹಾಗೂ ಕೋಮುವಾದಿಗಳ ವಿರೋಧಿಯಾಗಿದ್ದರು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವುಡೇ ಪಿ.ಕೃಷ್ಣ ತಿಳಿಸಿದರು.

ಪಟ್ಟಣದ ವಿದ್ಯಾ ಪ್ರಚಾರ ಸಂಘ, ವಿಜಯ ಪ್ರಥಮ ಕಾಲೇಜು ಮತ್ತು ವಿಜಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಬೆಂಗಳೂರು, ರಾಷ್ಟ್ರೀಯ ಸೇವಾ ಯೋಜನೆ, ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜು ಚಿನಕುರಳಿ, ಪ್ರಥಮ ದರ್ಜೆ ಕಾಲೇಜುಗಳ ಇತಿಹಾಸ ಅಧ್ಯಾಪಕರ ಸಂಘ, ಬಿಇಡಿ ಕಾಲೇಜಿನ ಅಧ್ಯಾಪಕರ ಸಂಘ, ಮಂಡ್ಯ ವಿಶ್ವವಿದ್ಯಾಲಯ ಮಂಡ್ಯ ಇವರ ವತಿಯಿಂದ ನಡೆದ 'ಮರಳಿ ಮನೆಕೆ–ಗಾಂಧಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಚಿಂತನೆಗಳ ಪ್ರಸ್ತುತಿ' ಕುರಿತ 2 ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಅಹಿಂಸೆ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧೀಜಿ ಅವರನ್ನು ಪ್ರತಿಯೊಬ್ಬ ಭಾರತೀಯರು ಸ್ಮರಿಸಬೇಕು. ಸ್ವಾತಂತ್ರ್ಯ ಚಳವಳಿಯ ಜೊತೆಗೆ ಮಹಾತ್ಮ ಗಾಂಧೀಜಿ ಅವರು ಹಿಂಸೆ, ಮೂಲಭೂತವಾದಿ, ಕೋಮುವಾದಿಗಳ ವಿರೋಧಿಯಾಗಿದ್ದರು. ದೇಶದ ಅಸ್ಪೃಶ್ಯತೆ ಹೋಗಲಾಡಿಸಿ ಹಳ್ಳಿಗಳ ಅಭಿವೃದ್ಧಿಗೆ ಹೋರಾಟ ಮಾಡಿದ, ಇಂತಹ ಮಹಾನ್ ವ್ಯಕ್ತಿಗೆ ಮಹಾತ್ಮ ಎಂಬ ಬಿರುದನ್ನು ದೇಶದ ಶ್ರೀಸಾಮಾನ್ಯರು ಗೌರವದಿಂದ ಕೊಟ್ಟರು ಎಂದರು.

ಸಂಸ್ಥೆ ಅಧ್ಯಕ್ಷ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪತ್ರಾಗಾರ ಇಲಾಖೆ ನಿರ್ದೇಶಕ ಡಾ.ಗವಿಸಿದ್ದಯ್ಯ, ಸಂಸ್ಥೆ ಕಾರ್ಯದರ್ಶಿ ಕೆ.ವಿ.ಬಸವರಾಜು, ಭಾರತೀಯ ವಿಜ್ಞಾನ ಸಂಸ್ಥೆ ಪ್ರಾಧ್ಯಾಪಕ ಜಗದೀಶ್ ಗೋಪಾಲನ್ ಮಾತನಾಡಿದರು.